ಶನಿವಾರ, ನವೆಂಬರ್ 27, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ನಮನ

26/11ರ ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಸಂದರ್ಭದಲ್ಲಿ ಹುತಾತ್ಮರಾದವರಿಗೆ ಜಮ್ಮುವಿನಲ್ಲಿ ಶುಕ್ರವಾರ ನಮನ ಸಲ್ಲಿಸಲಾಯಿತು



ನಗರದ ಪ್ರಮುಖ ರಸ್ತೆಗಳೆಲ್ಲ ಗುಂಡಿಮಯ • ವಾಹನ, ಜನ ಸಂಚಾರಕ್ಕೆ ಭಾರಿ ತೊಡಕು

ಒಂದೇ ಮಳೆಗೆ ಬಾಯ್ದೆರೆದ ಗುಂಡಿ



ಅಂಬೇಡ್ಕರ್ ವೀದಿಯ ಕಾಫಿ ಮಂಡಳಿ ಬಳಿ ರಸ್ತೆಯೇ ಹೊಂಡವಾಗಿರುವುದು
–ಪ್ರಜಾವಾಣಿ ಚಿತ್ರಗಳು



ಅಲಿ ಅಸ್ಕರ್ ರಸ್ತೆಯಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ ನಿರ್ವಹಿಸಿ ಹಾಳಾಗಿರುವ ರಸ್ತೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮುಚ್ಚಿದ್ದ ಗುಂಡಿಗಳು ಒಂದೇ ಮಳೆಗೆ ಬಾಯ್ತೆರೆದುಕೊಂಡವು, ರಸ್ತೆ ಮೇಲೆಲ್ಲ ಗುಂಡಿ, ಸವಾರರ ಮೈಮೇಲೆ ದೂಳೋ ದೂಳು...

'ಇದು ನಗರದ ಬಹುತೇಕ ರಸ್ತೆಗಳ ಸ್ಥಿತಿ. ನಗರದ ಯಾವುದೇ ರಸ್ತೆಗೆ ವಾಹನ ಇಳಿಸಿದರೂ ಗುಂಡಿಗಳ ದರ್ಶನ ಆಗದೆ ಇರದು. ಪ್ರತಿನಿತ್ಯ ಲಕ್ಷಕ್ಕೂ ಹೆಚ್ಚು ವಾಹನಗಳು ಸಂಚರಿಸುವ ಮುಖ್ಯ ರಸ್ತೆಗಳ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

ಕಬ್ಬನ್ ಪಾರ್ಕ್ ಮೆಟ್ರೊ ರೈಲು ನಿಲ್ದಾಣದಿಂದ ರಾಜಭವನ ರಸ್ತೆಯಲ್ಲಿ ಹೊರಟರೆ ಗುಂಡಿಗಳ ದರ್ಶನವಾಗುತ್ತದೆ. ಅಂಬೇಡ್ಕರ್ ವೀದಿಯಲ್ಲಿ ವಿಧಾನಸೌಧದ ಎದುರು ವೈಟ್ ಟಾಪಿಂಗ್ ರಸ್ತೆ ಬಿಟ್ಟರೆ ಕಾಫಿ ಮಂಡಳಿ ಮತ್ತು ಎಂಜಿನಿಯರಿಂಗ್ ಸಂಸ್ಥೆ ಎದುರು ರಸ್ತೆಗಳಲ್ಲಿ ಗುಂಡಿಗಳು ಎದುರಾಗುತ್ತವೆ.

ಅಲಿ ಅಸ್ಕರ್ ರಸ್ತೆ, ಇನ್‌ಫೆಂಟ್ರಿ ರಸ್ತೆಯಲ್ಲೂ ಅಲ್ಲಲ್ಲಿ ಗುಂಡಿ ಬಿದ್ದಿವೆ. ಶಾಂಗ್ರಿಲಾ ಹೋಟೆಲ್ ಎದುರಿನ ಅರಮನೆ ರಸ್ತೆ ಮತ್ತು ಕನ್ನಿಂಗ್‌ಹ್ಯಾಮ್ ರಸ್ತೆ ಕೂಡುವ ವೃತ್ತದಲ್ಲಿ ಗುಂಡಿಗಳು ಇಡೀ ರಸ್ತೆಗೆ ಚಾಚಿಕೊಂಡಿವೆ.

ಮಿಲ್ಲರ್ಸ್ ರಸ್ತೆಯಲ್ಲೂ ಗುಂಡಿಗಳು ರಸ್ತೆಯನ್ನು ತುಂಬಿಕೊಂಡಿವೆ. ನಗರ ಕೇಂದ್ರ ಪ್ರದೇಶದ ಬಹುತೇಕ ರಸ್ತೆಗಳಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿ ನಿರ್ವಹಿಸಿ ಅರ್ಧಕ್ಕೆ ನಿಲ್ಲಿಸಲಾಗಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿದೆ.

ಕಂಟೋನ್ಮೆಂಟ್ ರೈಲು ನಿಲ್ದಾಣದಿಂದ ಮೇಖ್ರಿ ವೃತ್ತ ತನಕದ ಜಯಮಹಲ್ ರಸ್ತೆಯಲ್ಲೂ ಗುಂಡಿಗಳ ನಡುವೆ ರಸ್ತೆ ಹುಡುಕುವಂತಾಗಿದೆ. ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿನ ಗುಂಡಿ ತಪ್ಪಿಸಲು ಯತ್ನಿಸಿ ಮತ್ತೊಂದು ಗುಂಡಿಗೆ ಬಿದ್ದು ಪೆಟ್ಟು ಮಾಡಿಕೊಳ್ಳುವುದು ಸಾಮಾನ್ಯವಾಗಿದೆ. ರಾತ್ರಿ ವೇಳೆಯಂತೂ ರಸ್ತೆ ಯಾವುದು, ಗುಂಡಿ ಯಾವುದು ಎಂಬುದೇ ಕಾಣದಾಗಿ ಹಲವರು ಬೀಳುತ್ತಿದ್ದಾರೆ.

ಮಲ್ಲೇಶ್ವರದಿಂದ ಶ್ರೀರಾಮಪುರ ಮಾರ್ಗದಲ್ಲಿ ನವರಂಗ ವೃತ್ತಕ್ಕೆ ಸಂಪರ್ಕ ಕಲ್ಪಿಸುವ ಮಹಾಕವಿ ಕುವೆಂಪು ರಸ್ತೆ ಯಂತೂ ಸಂಪೂರ್ಣವಾಗಿ ಹಾಳಾಗಿದೆ. ಅಲ್ಲಲ್ಲಿ ಬಿಬಿಎಂಪಿಯಿಂದ ಗುಂಡಿ ಮುಚ್ಚಲಾಗಿತ್ತು. ಕಳೆದ ವಾರ ಸುರಿದ ಮಳೆಗೆ ಆ ಗುಂಡಿಗಳೂ ತೆರೆದುಕೊಂಡಿವೆ.

ಎರಡು ದಿನಗಳಿಂದ ಮಳೆ ಕಡಿಮೆ ಆಗಿದ್ದು, ಗುಂಡಿ ಬಿದ್ದಿರುವ ಯಾವ ರಸ್ತೆಯಲ್ಲಿ ಹೋದರೂ ದೂಳು ತುಂಬಿಕೊಳ್ಳುತ್ತಿದೆ. ದೂಳಿನ ಕಣಗಳು ಕಣ್ಣಿಗೆ ರಾಚುವುದರಿಂದ ದ್ವಿಚಕ್ರ ವಾಹನ ಸವಾರರು ಚಾಲನೆ ಮಾಡುವುದೇ ಕಷ್ಟವಾಗಿದೆ.



ಅಂಬೇಡ್ಕರ್ ವೀದಿಯ ಕಾಫಿ ಮಂಡಳಿ ಬಳಿ ರಸ್ತೆಯೇ ಚರಂಡಿಯಾಗಿರುವುದು

ಪ್ರಯಾಣ ಪ್ರಯಾಸ

ಮುಖ್ಯಾಂಶಗಳು

- ಅತಿಗಣ್ಯರು ಸಂಚರಿಸುವ ರಸ್ತೆಯಲ್ಲೂ ಗುಂಡಿಗಳು
- ಮಳೆ ನಿಂತೊಡನೆ ದೂಳಿನ ಹಾವಳಿ



ಶಿವಾಜಿನಗರದ ಲೇಡಿ ಕರ್ಜನ್ ರಸ್ತೆಯಲ್ಲಿ ಗುಂಡಿಗಳೇ ತುಂಬಿಕೊಂಡಿರುವುದು



ಗಂಗಾಧರಚೆಟ್ಟಿ(ಶಿವನಚೆಟ್ಟಿ ಗಾರ್ಡನ್) ರಸ್ತೆಯ ತುಂಬೆಲ್ಲಾ ಗುಂಡಿ ಮತ್ತು ಹೊಂಡಗಳು ತುಂಬಿಕೊಂಡಿರುವುದು

ಸೋಮವಾರದಿಂದ ಶಿಕ್ಷಕರ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಪ್ರೌಢಶಾಲೆ ಮುಖ್ಯ ಶಿಕ್ಷಕರ ಸಾಮಾನ್ಯ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿಯನ್ನು ಶುಕ್ರವಾರ ಹೊರಡಿಸಿದ್ದು, ಇದೇ 29ರಿಂದ ಕೌನ್ಸೆಲಿಂಗ್ ನಡೆಯಲಿದೆ.

ಈ ಮೊದಲು ಸ್ಥಳ ಆಯ್ಕೆಗಾಗಿ ನ.24ರಿಂದ ನಡೆಯಬೇಕಿದ್ದ ಕೌನ್ಸೆಲಿಂಗ್ ಅನ್ನು ಮುಂದೂಡಲಾಗಿತ್ತು.

ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವಿಭಾಗದ ಜಿಲ್ಲಾ ಹಂತದ ವರ್ಗಾವಣೆ ಪ್ರಕ್ರಿಯೆಗಳು ಇದೇ 29ರಂದು ಆರಂಭವಾಗಲಿವೆ. ಅಂತಿಮ ಆದ್ಯತಾ ಪಟ್ಟಿಯಂತೆ ಕೋರಿಕೆ ಸಲ್ಲಿಸಿರುವ ವರ್ಗಾವಣೆಗಳು ನಡೆಯಲಿವೆ. ಡಿ. 4ರಂದು ಈ ಪ್ರಕ್ರಿಯೆ ಮುಗಿಯಲಿದೆ. ಈ ಸಾಲಿನಲ್ಲಿ ಸಲ್ಲಿಸಿರುವ ಹೊಸ ಅರ್ಜಿಗಳಿಗೆ 2022ರ ಜ. 19ರಿಂದ 27ರವರೆಗೆ ಕೌನ್ಸೆಲಿಂಗ್ ನಡೆಯಲಿದೆ.

ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ನಿರ್ದಿಷ್ಟ ಹುದ್ದೆಗಳಲ್ಲಿ ಕನಿಷ್ಠ 3ರಿಂದ 5 ವರ್ಷ ಸೇವೆ ಸಲ್ಲಿಸಿದವರಿಗೆ ಡಿ. 5ರಿಂದ ಹಾಗೂ ಹೊಸ ಅರ್ಜಿಗಳಿಗೆ ಜ. 18ರಿಂದ 30ರವರೆಗೆ ಕೌನ್ಸೆಲಿಂಗ್ ನಡೆಯಲಿದೆ. ಪರಸ್ಪರ ವರ್ಗಾವಣೆ ಕೌನ್ಸೆಲಿಂಗ್ ಜ. 19ಕ್ಕೆ ನಡೆಯಲಿದೆ.

ವಿಭಾಗೀಯ ಹಂತದ ಕೌನ್ಸೆಲಿಂಗ್ ಡಿ.16ರಿಂದ ಹಾಗೂ ಅಂತರ್ ವಿಭಾಗೀಯ ಹಂತದ ವರ್ಗಾವಣೆಯ ಕೌನ್ಸೆಲಿಂಗ್ ಡಿ.24ರಿಂದ ನಡೆಯಲಿದೆ.

ಪ್ರೌಢಶಾಲಾ ವಿಭಾಗ: ಪ್ರೌಢಶಾಲಾ ಶಿಕ್ಷಕರ ಹಂತದ ಜಿಲ್ಲಾ ಹಂತದ ವರ್ಗಾವಣೆ ಡಿ. 2ರಿಂದ ನಡೆಯಲಿದೆ. ಪ್ರೌಢಶಾಲಾ ಶಿಕ್ಷಕರ ವೃಂದದ ನಿರ್ದಿಷ್ಟ ಹುದ್ದೆಗಳಲ್ಲಿ ಕನಿಷ್ಠ 3ರಿಂದ 5 ವರ್ಷಗಳ ಸೇವೆ ಸಲ್ಲಿಸಿದವರ ಕೌನ್ಸೆಲಿಂಗ್ ಡಿ.6ರಿಂದ ಆರಂಭವಾಗಲಿದೆ. ವಿಭಾಗೀಯ ಹಂತದ ವರ್ಗಾವಣೆ ಪ್ರಕ್ರಿಯೆಗಳು ಡಿ.20ರಿಂದ ನಡೆಯಲಿವೆ.

ಬಾಲಕಿ ಓದಿನ ಆಸೆಗೆ ಹೈಕೋರ್ಟ್ ಸಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಮೊಟಕುಗೊಳಿಸಿ ಮದುವೆಯಾಗುವಂತೆ ಒತ್ತಾಯಿಸುತ್ತಿದ್ದ ಪೋಷಕರ ಕಾಟ ತಾಳಲಾರದೆ ಮನೆಬಿಟ್ಟು ಹೋಗಿದ್ದ ಬಾಲಕಿಯ ಸಹಾಯಕ್ಕೆ ಹೈಕೋರ್ಟ್ ಸಾಥ್ ನೀಡಿದೆ. ಆಕೆ ಬಾಲಮಂದಿರದಲ್ಲಿ ಇದ್ದುಕೊಂಡು ತನ್ನ ಓದನ್ನು ಮುಂದುವರಿಸುವಂತೆ ಅನುವು ಮಾಡಿಕೊಟ್ಟಿದೆ.

ಪೋಷಕರು ಮದುವೆಯಾಗುವಂತೆ ಒತ್ತಾಯಿಸುತ್ತಿದ್ದ ಕಾರಣ ಹದಿನೇಳು ವರ್ಷದ ಬಾಲಕಿ ಮನೆಬಿಟ್ಟು ನೆರೆ ರಾಜ್ಯಕ್ಕೆ ತೆರಳಿ ಸಹೋದರನ ಜೊತೆ ನೆಲೆಸಿದ್ದಳು. ಮಗಳನ್ನು ಹುಡುಕಿಕೊಡುವಂತೆ ಕೋರಿ ಆಕೆಯ ತಾಯಿ ಹೈಕೋರ್ಟ್‌ಗೆ ಹೆಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದರು.

ಹೈಕೋರ್ಟ್ ನಿರ್ದೇಶನದ ಮೇರೆಗೆ ಗದಗದ ಲಕ್ಷ್ಮೇಶ್ವರ ಠಾಣಾ ಪೊಲೀಸರು ಬಾಲಕಿಯನ್ನು ಪತ್ತೆಹಚ್ಚಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಿಚಾರಣೆ ವೇಳೆ ಬಾಲಕಿ, 'ನನಗೆ ನನ್ನ ತಂದೆ-ತಾಯಿ ಶಿಕ್ಷಣವನ್ನು ಅರ್ಧಕ್ಕೇ ಮೊಟಕುಗೊಳಿಸಿ ಮದುವೆಯಾಗು ಎಂದು ಒತ್ತಾಯಿಸುತ್ತಿದ್ದಾರೆ. ಆದರೆ, ನನಗೆ ಓದಲು ಆಸೆಯಿದೆ. ಆದ್ದರಿಂದ, ನಾನು ಮನೆಗೆ ಹೋಗುವುದಿಲ್ಲ' ಎಂಬ ಇರಾದೆಯನ್ನು ಸರ್ಕಾರಿ ವಕೀಲರ ಮೂಲಕ ನ್ಯಾಯಪೀಠದ ಗಮನಕ್ಕೆ ತಂದಳು.

ಇದನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಮತ್ತು ಎಸ್.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಬಾಲಕಿಯ ಕಲ್ಯಾಣ ಮುಖ್ಯವಾದದ್ದು, ಹಾಗಾಗಿ ಆಕೆಯ ಸುರಕ್ಷತೆ ದೃಷ್ಟಿಯಿಂದ ಅವಳನ್ನು ಗದಗದ ಬಾಲಮಂದಿರಕ್ಕೆ ಬಿಡಿ' ಎಂದು ಪೊಲೀಸರಿಗೆ ಸೂಚಿಸಿತು.

ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ದೇಶದ ಅತ್ಯಂತ ಬಡ ರಾಜ್ಯಗಳು

ನವದೆಹಲಿ(ಪಿಟಿಐ): ಬಿಹಾರ, ಜಾರ್ಖಂಡ್ ಮತ್ತು ಉತ್ತರ ಪ್ರದೇಶ, ದೇಶದಲ್ಲಿಯೇ ಅತ್ಯಂತ ಬಡ ರಾಜ್ಯಗಳು. ಹೆಚ್ಚಿನ ಸಂಖ್ಯೆಯಲ್ಲಿ ಬಡಜನರಿರುವ ರಾಜ್ಯಗಳ ಪಟ್ಟಿಯಲ್ಲಿ ಈ ರಾಜ್ಯಗಳು ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿವೆ.

ನೀತಿ ಆಯೋಗ ಬಿಡುಗಡೆ ಮಾಡಿರುವ ಬಹು ಆಯಾಮದ ಬಡತನ ಸೂಚ್ಯಂಕದಲ್ಲಿ (ಎಂಪಿಐ) ಈ ಅಂಶ ವ್ಯಕ್ತವಾಗಿದೆ. ಕುಟುಂಬಗಳು ಎದುರಿಸುತ್ತಿರುವ ಬಹುಆಯಾಮದ ಸಮಸ್ಯೆಗಳನ್ನು ಆಧರಿಸಿ ಸೂಚ್ಯಂಕವನ್ನು ರೂಪಿಸಲಾಗಿದೆ ಎಂದೂ ನೀತಿ ಆಯೋಗ ತಿಳಿಸಿದೆ.

ವರದಿಯ ಅನುಸಾರ, ಭಾರತದ ರಾಷ್ಟ್ರೀಯ ಎಂಪಿಐ ಅನ್ನು ಜಾಗತಿಕವಾಗಿ ಒಪ್ಪಿಕೊಂಡಿರುವ, ಆಕ್ಸ್‌ಫರ್ಡ್ ಬಡತನ ಮತ್ತು ಮಾನವ ಅಭಿವೃದ್ಧಿ ಕ್ರಮ (ಒಪಿಎಚ್‌ಐ) ಮತ್ತು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ಆಧರಿಸಿ ರೂಪಿಸಲಾಗಿದೆ.

ಆರೋಗ್ಯ, ಶಿಕ್ಷಣ ಮತ್ತು ಜೀವನ ಗುಣಮಟ್ಟವನ್ನು ಮುಖ್ಯ ಮಾನದಂಡವಾಗಿ ಪರಿಗಣಿಸಲಾಗಿದೆ. ಪೌಷ್ಟಿಕತೆ, ನವಜಾತ ಮತ್ತು ಶಿಶು ಮರಣಪ್ರಮಾಣ, ಪ್ರಸವಪೂರ್ವ ಆರೈಕೆ, ಶಾಲೆಗೆ ಹಾಜರು, ಶಿಕ್ಷಣ, ತರಗತಿಗೆ ಹಾಜರಾತಿ, ಅಡುಗೆ ಇಂಧನ, ಶೌಚಾಲಯ, ಕುಡಿಯುವ ನೀರು ಸೌಲಭ್ಯ, ವಿದ್ಯುತ್ ಸಂಪರ್ಕ, ವಸತಿ, ಆಸ್ತಿ ಮತ್ತು ಬ್ಯಾಂಕ್ ಖಾತೆ ಅಂಶಗಳನ್ನು ಆಧರಿಸಿ ಇದನ್ನು ರೂಪಿಸಲಾಗಿದೆ.

ಸುಸ್ಥಿರಾಭಿವೃದ್ಧಿ ಗುರಿ (ಎಸ್‌ಡಿಜಿ) ಕಾರ್ಯಸೂಚಿಯನ್ನು ಜಗತ್ತಿನ 193 ದೇಶಗಳು 2015ರಲ್ಲಿ ಅಳವಡಿಸಿಕೊಂಡಿದ್ದು ಅಭಿವೃದ್ಧಿ ಸಂಬಂಧ ನೀತಿಗಳು, ಸರ್ಕಾರದ ಆದ್ಯತೆ, ಅಭಿವೃದ್ಧಿಯನ್ನು ಗುರುತಿಸಲು ಇರುವ ಮಾನದಂಡಗಳಿಗೆ ಹೊಸ ವ್ಯಾಖ್ಯಾನ ನೀಡಿದೆ. ಎಸ್‌ಡಿಜಿ ಕಾರ್ಯಸೂಚಿಯು ಒಟ್ಟಾರೆ ಜಾಗತಿಕವಾಗಿ 17 ಗುರಿ ಹಾಗೂ 169 ಉದ್ದೇಶಗಳನ್ನು ಆಧರಿಸಿದೆ.

ನೀತಿ ಆಯೋಗದ ಅಧ್ಯಕ್ಷ ರಾಜೀವ್ ಕುಮಾರ್ ಅವರು ವರದಿಯ ಮುನ್ನುಡಿಯಲ್ಲಿ, ಬಹುಆಯಾಮದ ಬಡತನದ ಸೂಚ್ಯಂಕವು ದೇಶದಲ್ಲಿ ಸಾರ್ವಜನಿಕ ನೀತಿಯನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಲಿದೆ ಎಂದು ಹೇಳಿದ್ದಾರೆ.

ಭಾರತದ ಪ್ರಪ್ರಥಮ ರಾಷ್ಟ್ರೀಯ ಎಂಪಿಐ ಸೂಚ್ಯಂಕವು 2015–16ನೇ ಅವಧಿಯ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಎನ್‌ಎಫ್‌ಎಚ್‌ಎಸ್) ಅಂಕಿ ಅಂಶಗಳನ್ನು ಆಧರಿಸಿದ್ದಾಗಿದೆ ಎಂದು ತಿಳಿಸಿದ್ದಾರೆ.

ಸಂಖ್ಯೆ	ವಿವರ	ಪ್ರಮಾಣ
ಬಡವರು ಹೆಚ್ಚಿರುವ ರಾಜ್ಯಗಳು		
1	ಬಿಹಾರ	ಶೇ 51.91
2	ಜಾರ್ಖಂಡ್	ಶೇ 42.16
3	ಉತ್ತರಪ್ರದೇಶ	ಶೇ 37.79
4	ಮಧ್ಯಪ್ರದೇಶ	ಶೇ 36.65
5	ಮೇಘಾಲಯ	ಶೇ 32.67
ಬಡವರು ಕಡಿಮೆ ಇರುವ ರಾಜ್ಯಗಳು		
1	ಕೇರಳ	ಶೇ 0.71
2	ಗೋವಾ	ಶೇ 3.76
3	ಸಿಕ್ಕಿಂ	ಶೇ 3.82
4	ತಮಿಳುನಾಡು	ಶೇ 4.89
5	ಪಂಜಾಬ್	ಶೇ 5.59

ವಕೀಲರ ಸಂಘಕ್ಕೆ ಡಿ.19ರಂದು ಚುನಾವಣೆ

ಬೆಂಗಳೂರು: 'ಬೆಂಗಳೂರು ವಕೀಲರ ಸಂಘ'ಕ್ಕೆ ಡಿಸೆಂಬರ್ 19ರಂದು ಚುನಾವಣೆ ನಡೆಯಲಿದೆ. ಈ ಕುರಿತಂತೆ ಮುಖ್ಯ ಚುನಾವಣಾಧಿಕಾರಿ ಕೆ.ಎನ್. ಫಣೀಂದ್ರ ಅವರು ಶುಕ್ರವಾರ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದಾರೆ.

26ರ ಶುಕ್ರವಾರ ಬೆಳಿಗ್ಗೆ 11 ಗಂಟೆಯಿಂದ ನಾಮಪತ್ರ ಸಲ್ಲಿಕೆ ಆರಂಭವಾಗಿದೆ. ನಾಮಪತ್ರ ಸಲ್ಲಿಸಲು ಡಿ.3ರಂದು ಅಂತಿಮ ದಿನವಾಗಿದ್ದು, ಅಂದೇ ಪರಿಶೀಲನೆ ನಡೆಯಲಿದೆ. ನಾಮಪತ್ರ ವಾಪಸು ಪಡೆಯಲು ಡಿ.6 ಕಡೇ ದಿನ. ಸಿಟಿ ಸಿವಿಲ್ ಕೋರ್ಟ್‌ನಲ್ಲಿ 19ರಂದು ಮತದಾನ ನಡೆಯಲಿದ್ದು ಅಂದೇ ಮಧ್ಯಾಹ್ನ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಚುನಾವಣಾಧಿಕಾರಿಗಳಾಗಿ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷ ಎನ್.ಎಸ್.ಸತ್ಯನಾರಾಯಣ, ಕೆ.ಎನ್. ಪುಟ್ಟೇಗೌಡ, ಟಿ.ಎನ್.ಶಿವಾರೆಡ್ಡಿ, ಎಂ.ಆರ್. ವೇಣುಗೋಪಾಲ, ಜಿ.ಚಂದ್ರಶೇಖರಯ್ಯ, ಎ.ಜಿ.ಶಿವಣ್ಣ, ಎಸ್.ಎನ್. ಪ್ರಶಾಂತಚಂದ್ರ ಹಾಗೂ ಪಿ.ಅನು ಚೆಂಗಪ್ಪ ಕಾರ್ಯ ನಿರ್ವಹಿಸಲಿದ್ದಾರೆ.

'ಹೈಕೋರ್ಟ್, ಸಿಟಿ ಸಿವಿಲ್ ಕೋರ್ಟ್, ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ಹಾಗೂ ಮೆಯೊಹಾಲ್ ಕೋರ್ಟ್‌ಗಳಲ್ಲಿ ವಕೀಲಿಕೆ ನಡೆಸುವ 16 ಸಾವಿರಕ್ಕೂ ಹೆಚ್ಚು ನೋಂದಾಯಿತ ಮತದಾರರು ಮತದಾನ ಮಾಡಲಿದ್ದಾರೆ' ಎಂದು ಹೈಕೋರ್ಟ್ ವಕೀಲ ಬಿ.ಬಾಲಕೃಷ್ಣ ತಿಳಿಸಿದ್ದಾರೆ.

ಶನಿವಾರ, ನವೆಂಬರ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 328 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ನಿರಂತರ ಮಳೆ ಸುರಿದು, ತೊಳೆದ ಬಟ್ಟೆ ಒಣಗದೇ, ಅಡುಗೆ ಮನೆ ಡಬ್ಬಗಳಲ್ಲಿ ಧಾನ್ಯಗಳೆಲ್ಲ ಕೆಡುವಾಗ ಇವನ್ನೆಲ್ಲಾ ನಿರ್ವಹಿಸುವುದು ಹೇಗಪ್ಪಾ?



ಚರ್ಚೆ
ಸಚಿವ ಸಂಪುಟದಲ್ಲಿ ಚರ್ಚಿಸದೆ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ಘೋಷಿಸಿದ್ದು ಸರಿಯೇ? 9

ವಿದ್ವಾಂಸ ನಾರಾಯಣಾಚಾರ್ಯ ಇನ್ನಿಲ್ಲ 4

ಉತ್ತರಪ್ರದೇಶ: ಒಂದೇ ಕುಟುಂಬದ ನಾಲ್ವರ ಹತ್ಯೆ 6

ಸೆನ್ಸೆಕ್ಸ್	ನಿಫ್ಟಿ	₹/$
57,107	17,026	74.89

ಕೋವಿಡ್: ಹಲವು ದೇಶಗಳಿಗೆ ಹರಡಿದ ‘ಓಮಿಕ್ರಾನ್’ • ವಿಶ್ವ ಆರೋಗ್ಯ ಸಂಸ್ಥೆ ತುರ್ತುಸಭೆ

ಹೊಸ ತಳಿ: ತೀವ್ರ ಕಳವಳ

ಕೇಪ್‌ಟೌನ್/ಸಿಂಗಪುರ/ಲಂಡನ್ (ಎಪಿ/ಎಎಫ್‌ಪಿ/ರಾಯಿಟರ್ಸ್): ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿಗೆ (ಬಿ.1.1.529) ‘ಓಮಿಕ್ರಾನ್’ ಎಂಬ ಹೆಸರಿಡಲಾಗಿದೆ. ಇದು ಜಗತ್ತಿನಾದ್ಯಂತ ಭಾರಿ ಕಳವಳ ಮೂಡಿಸಿದ್ದು, ಅತ್ಯಂತ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ ಎಂದು ಸಿಂಗಪುರ ಹೇಳಿದೆ.

ಈ ತಳಿಯಿಂದ ಎದುರಾಗಬಹುದಾದ ಅಪಾಯದ ಬಗ್ಗೆ ಚರ್ಚಿಸಲು ವಿಶ್ವ ಆರೋಗ್ಯ ಸಂಸ್ಥೆ ಶುಕ್ರವಾರ ಸಭೆ ನಡೆಸಿದೆ.

ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನಾ, ಜಿಂಬಾಬ್ವೆ, ನಮೀಬಿಯಾ ಮತ್ತು ಲೆಸೊಟೊ ದೇಶದಲ್ಲಿ ಈ ತಳಿಯ ವೈರಾಣು ತಗುಲಿರುವ ಪ್ರಕರಣಗಳು ಪತ್ತೆಯಾಗಿವೆ. ದಕ್ಷಿಣ ಆಫ್ರಿಕಾದಲ್ಲಿ ಈ ತಿಂಗಳ ಆರಂಭದಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ಏರಿಕೆಗೆ ಓಮಿಕ್ರಾನ್ ತಳಿಯೇ ಕಾರಣವಾಗಿರಬಹುದು. ದಕ್ಷಿಣ ಆಫ್ರಿಕಾದ ನೆರೆಯ ದೇಶಗಳಿಗೂ ಈ ರೂಪಾಂತರ ತಳಿಯು ಹರಡಿರಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆಯ ಆಫ್ರಿಕಾ ಘಟಕವು ಹೇಳಿದೆ.

ಈ ತಳಿಯ ಜಿನೋಮ್ ಸೀಕ್ವೆನ್ಸ್ ಅಧ್ಯಯನವನ್ನು ಸಿಂಗಪುರ ನಡೆಸಿತ್ತು. ಮೂಲ ಕೊರೊನಾವೈರಸ್ ಮತ್ತು ಹೆಚ್ಚು ವೇಗವಾಗಿ ಹರಡುವ ಸಾಮರ್ಥ್ಯವಿರುವ ಡೆಲ್ಟಾ ರೂಪಾಂತರ ತಳಿಗಿಂತಲೂ ವೇಗವಾಗಿ ಹರಡುವ ಸಾಮರ್ಥ್ಯ ಈ ತಳಿಗೆ ಇದೆ ಎಂಬುದು ಅಧ್ಯಯನದಲ್ಲಿ ಪತ್ತೆಯಾಗಿದೆ.

‘ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಕೊರೊನಾವೈರಾಣುವಿನ ಹೊಸ ತಳಿಯ ವಿರುದ್ಧ ಕೋವಿಡ್–19 ತಡೆ ಲಸಿಕೆಗಳು ಪರಿಣಾಮ ಬೀರುವ ಸಾಧ್ಯತೆ ಕಡಿಮೆ ಇದೆ. ಈ ತಳಿಯ ವೈರಾಣು ಆಫ್ರಿಕಾ ಖಂಡದಿಂದಾಚೆಗೆ ಈಗಾಗಲೇ ಹರಡಿರುವ ಅಪಾಯವಿದೆ. ಇದನ್ನು ನಿಯಂತ್ರಿಸದೇ ಇದ್ದರೆ ಪರಿಸ್ಥಿತಿ ಬಿಗಡಾಯಿಸುವ ಸಾಧ್ಯತೆ ಇದೆ’ ಎಂದು ಬ್ರಿಟನ್‌ನ ಆರೋಗ್ಯ ಸಚಿವಾಲಯ ಕಳವಳ ವ್ಯಕ್ತಪಡಿಸಿದೆ. ಇಸ್ರೇಲ್, ಬೆಲ್ಜಿಯಂ ಮತ್ತು ಹಾಂಗ್‌ಕಾಂಗ್‌ನಲ್ಲಿ ಈ ತಳಿಯ ವೈರಾಣು ತಗುಲಿರುವ ಒಂದೊಂದು ಪ್ರಕರಣಗಳು ಪತ್ತೆಯಾಗಿವೆ.

ಈ ತಳಿಯ ವೈರಾಣು ಪತ್ತೆಯಾಗಿರುವ ಆಫ್ರಿಕಾದ ಆರು ರಾಷ್ಟ್ರಗಳಿಂದ ವಿಮಾನ ಸಂಚಾರವನ್ನು ಹಲವು ದೇಶಗಳು ನಿಷೇಧಿಸಿವೆ. ಬ್ರಿಟನ್, ಜರ್ಮನಿ ಮತ್ತು ಇಟಲಿ ಈ ದೇಶಗಳಿಗೆ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿವೆ. ನಂತರ, ಮಲೇಷ್ಯಾ, ಸಿಂಗಪುರ, ಇಸ್ರೇಲ್ ಇದನ್ನೇ ಅನುಸರಿಸಿದವು. ಆನಂತರ ಐರೋಪ್ಯ ಒಕ್ಕೂಟವೂ ಈ ದೇಶಗಳಿಗೆ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

‘ಈ ತಳಿಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈ ತಳಿಯ ವಿರುದ್ಧವೂ ಲಸಿಕೆಗಳು ರಕ್ಷಣೆ ನೀಡುತ್ತವೆಯೇ ಎಂಬುದನ್ನು ತಿಳಿದುಕೊಳ್ಳಲು ಇನ್ನೂ ಒಂದು ವಾರ ಬೇಕಾಗುತ್ತದೆ’ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಕುಸಿದ ಷೇರು ಮಾರುಕಟ್ಟೆ

ಮುಂಬೈ/ಲಂಡನ್ (ಪಿಟಿಐ/ಎಎಫ್‌ಪಿ): ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾದ ಹೊಸ ತಳಿಯು ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಭೀತಿ ಸೃಷ್ಟಿಸಿದೆ. ಇದರ ಪರಿಣಾಮ ದೇಶದ ಷೇರು ಮಾರುಕಟ್ಟೆಗಳ ಮೇಲೆಯೂ ಆಗಿದೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ 1,687 ಅಂಶ ಕುಸಿದಿದೆ. ಹೂಡಿಕೆದಾರರ ಸಂಪತ್ತು ಮೌಲ್ಯವು ಒಂದೇ ದಿನದಲ್ಲಿ ₹ 7.35 ಲಕ್ಷ ಕೋಟಿಯಷ್ಟು ಕರಗಿದೆ.

ಅಲ್ಲದೆ, ವೈರಾಣುವಿನ ಹೊಸ ತಳಿಯು ಜಾಗತಿಕ ಆರ್ಥಿಕ ವ್ಯವಸ್ಥೆಗೆ ಭಾರಿ ಏಟು ನೀಡುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲ ಬೆಲೆಯಲ್ಲಿ ಇಳಿಕೆ ಆಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 5.62ರಷ್ಟು ಇಳಿಕೆ ಆಗಿದ್ದು, ಪ್ರತಿ ಬ್ಯಾರೆಲ್ ತೈಲದ ಬೆಲೆಯು 77.60 ಅಮೆರಿಕನ್ ಡಾಲರ್‌ಗೆ ತಲುಪಿದೆ.

ವಿವರ 10

45 ವಿದ್ಯಾರ್ಥಿಗಳಿಗೆ ಸೋಂಕು ದೃಢ

ಆನೇಕಲ್: ತಾಲ್ಲೂಕಿನ ದೊಮ್ಮಸಂದ್ರ ಸಮೀಪದ ದಿ ಇಂಟರ್‌ನ್ಯಾಷನಲ್ ಬೆಂಗಳೂರು ವಸತಿ ಶಾಲೆಯ 33 ವಿದ್ಯಾರ್ಥಿಗಳು ಮತ್ತು ಒಬ್ಬ ಸಿಬ್ಬಂದಿಗೆ ಕೊರೊನಾ ಸೋಂಕು ಇರುವುದು ದೃಢಪಟ್ಟಿದೆ. ಈ ಪೈಕಿ 6 ವಿದ್ಯಾರ್ಥಿಗಳು ಹೊರರಾಜ್ಯದವರು. ಅಲ್ಲದೇ, ಮರಸೂರು ಸಮೀಪದ ಸ್ಫೂರ್ತಿ ಕಾಲೇಜಿನ 12 ವಿದ್ಯಾರ್ಥಿಗಳಿಗೆ ಸೋಂಕು ಇರುವುದು ದೃಢಪಟ್ಟಿದೆ. ಮುಂಜಾಗ್ರತಾ ಕ್ರಮವಾಗಿ ಈ ಶಾಲೆ, ಕಾಲೇಜುಗಳಿಗೆ ರಜೆ ನೀಡಲಾಗಿದೆ. ಸ್ಥಳಕ್ಕೆ ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಸೋಂಕಿತರನ್ನು ಕ್ವಾರಂಟೈನ್ ಮಾಡಲಾಗಿದೆ.

ಪರೀಕ್ಷೆಗೆ ಆದ್ಯತೆ ನೀಡಲು ಸೂಚನೆ

ಬೆಂಗಳೂರು: ಕೊರೊನಾ ವೈರಾಣುವಿನ ಓಮಿಕ್ರಾನ್ ತಳಿಯು ದಕ್ಷಿಣ ಆಫ್ರಿಕಾ ಸೇರಿದಂತೆ ಮೂರು ದೇಶಗಳಲ್ಲಿ ಪತ್ತೆಯಾಗಿರುವುದರಿಂದ ವಿದೇಶಗಳಿಂದ ಇಲ್ಲಿಗೆ ಬರುವವರನ್ನು ಕೋವಿಡ್ ತಪಾಸಣೆ ಮತ್ತು ಪರೀಕ್ಷೆಗೆ ಒಳಪಡಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ‘ದಕ್ಷಿಣ ಆಫ್ರಿಕಾ, ಬೋಟ್ಸ್‌ವಾನಾ ಹಾಗೂ ಹಾಂಗ್‌ಕಾಂಗ್‌ನಲ್ಲಿ ಹೊಸ ತಳಿಯ ಪ್ರಕರಣಗಳು ಪತ್ತೆಯಾಗಿವೆ. ಈ ತಳಿಯು ವೇಗವಾಗಿ ಹರಡುವ ಗುಣ ಹೊಂದಿದೆ. ಹೀಗಾಗಿ, ಅಂತರರಾಷ್ಟ್ರೀಯ ಪ್ರಯಾಣಿಕರನ್ನು ಪರೀಕ್ಷಿಸಿ, ಅವರ ಮೇಲೆ ನಿಗಾ ಇಡಬೇಕು’ ಎಂದು ತಿಳಿಸಿದ್ದಾರೆ.

‘ಮೂರು ದೇಶಗಳು ಹೆಚ್ಚಿನ ಅಪಾಯ ತಂದೊಡ್ಡುವ ಸಾಧ್ಯತೆಯಿದೆ. ಅಲ್ಲಿಂದ ಹಾಗೂ ಆ ದೇಶಗಳ ಮಾರ್ಗವಾಗಿ ಬರುವವರ ಮಾದರಿಗಳನ್ನು ಸಂಗ್ರಹಿಸಬೇಕು. ಸೋಂಕು ದೃಢಪಟ್ಟಲ್ಲಿ ವೈರಾಣು ಅನುಕ್ರಮಣಿಕೆ ಪರೀಕ್ಷೆ (ಜೀನೋಮ್ ಸೀಕ್ವೆನ್ಸಿಂಗ್) ನಡೆಸಬೇಕು. ಅವರ ಸಂಪರ್ಕಿತರನ್ನೂ ಪತ್ತೆ ಮಾಡಿ, ಪರೀಕ್ಷೆ ಮಾಡಬೇಕು’ ಎಂದು ಸೂಚಿಸಿದ್ದಾರೆ.

ಸೋಂಕಿತರ ಸಂಖ್ಯೆ 204 ಕ್ಕೆ ಏರಿಕೆ

ಧಾರವಾಡ: ಇಲ್ಲಿನ ಸತ್ತೂರಿನಲ್ಲಿರುವ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಹೊಸದಾಗಿ 138 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ. ಒಟ್ಟಾರೆ ಸೋಂಕಿತರ ಸಂಖ್ಯೆ 204ಕ್ಕೆ ಏರಿಕೆಯಾಗಿದೆ. ಆಸ್ಪತ್ರೆಯ ಹೊರರೋಗಿಗಳ ವಿಭಾಗ ಮುಚ್ಚಲಾಗಿದೆ. 6



ಹೆದ್ದಾರಿ ತಡೆ ದೆಹಲಿಯ ರೈತ ಹೋರಾಟಕ್ಕೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ರೈತ, ಪ್ರಗತಿಪರ ಸಂಘಟನೆಗಳ ಸದಸ್ಯರು ಶ್ರೀರಂಗಪಟ್ಟಣ ತಾಲ್ಲೂಕು ಕಿರಂಗೂರು ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ತಡೆದು ಶುಕ್ರವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ರೈತ ಹೋರಾಟಕ್ಕೆ ವರ್ಷ ರಾಜ್ಯದ ವಿವಿಧೆಡೆ ರಸ್ತೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿ ಮಾಡಿದ್ದ ಮೂರು ಕೃಷಿ ಕಾಯ್ದೆಗಳ ವಿರುದ್ಧ ದೆಹಲಿಯಲ್ಲಿ ಆರಂಭಿಸಿದ ಹೋರಾಟಕ್ಕೆ ಒಂದು ವರ್ಷ ತುಂಬಿದ ನೆನಪಿಗಾಗಿ ರಾಜ್ಯದ ವಿವಿಧ ಜಿಲ್ಲೆಗಳ ರೈತರು ಮತ್ತು ಪ್ರಗತಿಪರ ಸಂಘಟನೆಗಳು ಶುಕ್ರವಾರ ರಸ್ತೆ ತಡೆ ಮೂಲಕ ಪ್ರತಿಭಟನೆ ನಡೆಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಿಕ್ಕಮಗಳೂರು, ಮಂಡ್ಯ, ಚಿಕ್ಕಬಳ್ಳಾಪುರ, ಹೊಸಪೇಟೆ, ತುಮಕೂರು, ಚಿತ್ರದುರ್ಗ, ವಿಜಯನಗರ, ಹುಬ್ಬಳ್ಳಿ ಸೇರಿ ಹಲವು ಜಿಲ್ಲಾ ಕೇಂದ್ರಗಳಲ್ಲಿ ರೈತರು ಹೆದ್ದಾರಿಗಳನ್ನು ತಡೆದು ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲ ಹೊತ್ತು ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಕಾರ್ಪೊರೇಟ್ ಕಂಪನಿ ಪರ ನೀತಿ ಅನುಸರಿಸುತ್ತಿವೆ. ಕೃಷಿ ವಲಯಕ್ಕೆ ಕಾರ್ಪೊರೇಟ್ ಕಂಪನಿಗಳು ಬೇಡವೇ ಬೇಡ. ಕನಿಷ್ಠ ಬೆಂಬಲ ಬೆಲೆಯನ್ನು ಶಾಸನಬದ್ಧಗೊಳಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಹೋರಾಟದಲ್ಲಿ ಹುತಾತ್ಮರಾದ ರೈತ ಕುಟುಂಬಗಳಿಗೆ ತಲಾ ₹50 ಲಕ್ಷ ಪರಿಹಾರ ಮತ್ತು ರೈತರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯಬೇಕು. ರಾಜ್ಯ ಸರ್ಕಾರ ರೂಪಿಸಿದ ಭೂಸ್ವಾಧೀನ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಬೇಕು ಎಂದೂ ಒತ್ತಾಯಿಸಿದರು.

8 ಗಂಟೆ ಹೆದ್ದಾರಿ ತಡೆ: ಚಿಕ್ಕಬಳ್ಳಾಪುರದಲ್ಲಿ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ಚದಲಪುರ ರಾಷ್ಟ್ರೀಯ ಹೆದ್ದಾರಿ ತಡೆ ನಡೆಯಿತು. ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಪ್ರಗತಿಪರ ಸಂಘಟನೆಗಳ ಸದಸ್ಯರು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರು ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು 8 ಗಂಟೆಗಳ ಬಂದ್ ಮಾಡಿದರು. ಹೆದ್ದಾರಿಯಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ, ರಸ್ತೆಯಲ್ಲೇ ಜಾನುವಾರುಗಳನ್ನೂ ಕಟ್ಟಿ ಹಾಕಿದರು.

ಹುಬ್ಬಳ್ಳಿಯಲ್ಲಿ ಕಳಸಾ– ಬಂಡೂರಿ ರೈತ ಹೋರಾಟ ಸಮಿತಿ ಸದಸ್ಯರು ಸ್ವಾಮಿನಾಥನ್ ವರದಿ ಜಾರಿ ಮತ್ತು ಕಳಸಾ ಬಂಡೂರಿ ಕಾಮಗಾರಿಯನ್ನು ತಕ್ಷಣವೇ ಆರಂಭಿಸಬೇಕು ಎಂದು ನಗರದ ಗಬ್ಬೂರು ಬೈಪಾಸ್ ಮತ್ತು ಬೆಂಗಳೂರು– ಪೂನಾ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಧರಣಿ ನಡೆಸಿದರು.

ಕೋಲಾರದಲ್ಲಿ ರೈತ ಸಂಘದ ಕಾರ್ಯಕರ್ತರು ಎತ್ತಿನ ಬಂಡಿ, ನೇಗಿಲುಗಳು, ಕೋಳಿಗಳು ಮತ್ತು ಬೆಳೆಗಳ ಸಮೇತ ಕೋಲಾರ ರಾಷ್ಟ್ರೀಯ ಹೆದ್ದಾರಿ ತಡೆ ಮಾಡಿದರು.

ರೈತರ ಆಂದೋಲನ ಬೆಂಬಲಿಸಿ ಬೆಂಗಳೂರಿನಿಂದ ಯುವಕರ ತಂಡ ಶ್ರೀರಂಗಪಟ್ಟಣದವರೆಗೆ ಬೈಕ್ ಜಾಥಾ ನಡೆಸಿತು.

‘ಕೇಂದ್ರದ ನಡೆ ನೋಡಿ ತೀರ್ಮಾನ’

ಚಿತ್ರದುರ್ಗ: ‘ಕೃಷಿ ಕಾಯ್ದೆಗಳ ಬಗ್ಗೆ ಲೋಕಸಭೆಯ ಅಧಿವೇಶನದಲ್ಲಿ ನಡೆಯುವ ಚರ್ಚೆಯ ಆಧಾರದ ಮೇರೆಗೆ ರಾಜ್ಯದ ಕಾಯ್ದೆಗಳ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಎಪಿಎಂಸಿ ಕಾಯ್ದೆ ಹಾಗೂ ಇತರ ಕಾಯ್ದೆಗಳ ಮಧ್ಯೆ ವ್ಯತ್ಯಾಸವಿದೆ. ಕೇಂದ್ರದ ನಡೆಯನ್ನು ನೋಡಿಕೊಂಡು ನಿರ್ಧಾರ ಕೈಗೊಳ್ಳಲಾಗುವುದು’ ಎಂದಷ್ಟೇ ಹೇಳಿದರು.

ಕಾಂಗ್ರೆಸ್ ನಾಯಕರೇ ಪರ್ಸೆಂಟೇಜ್ ಜನಕರು: ಬಸವರಾಜ ಬೊಮ್ಮಾಯಿ

‘ಕಾಂಗ್ರೆಸ್ ಕಾಲದ ಟೆಂಡರ್ ಸಹ ತನಿಖೆ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಟೆಂಡರ್‌ಗಳಲ್ಲಿನ ಪರ್ಸೆಂಟೇಜ್ ವಿಚಾರದಲ್ಲಿ ಕಾಂಗ್ರೆಸ್ ಮಿತ್ರರು ಬಹಳಷ್ಟು ಆಸಕ್ತಿ ವಹಿಸುತ್ತಿರುವುದರಿಂದ ಕಾಂಗ್ರೆಸ್ ಕಾಲದಲ್ಲಿ ಆಗಿರುವ ಟೆಂಡರ್‌ಗಳನ್ನೂ ಸೇರಿಸಿಕೊಂಡು ತನಿಖೆ ನಡೆಸುತ್ತೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.



ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ಕಾಂಗ್ರೆಸ್ ನಾಯಕರು ರಾಜ್ಯಪಾಲರಿಗೆ ದೂರು ನೀಡಿರುವ ಕುರಿತು ನಗರದಲ್ಲಿ ಶುಕ್ರವಾರ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ‘ಪರ್ಸೆಂಟೇಜ್ ಜನಕರೇನಾದರೂ ಇದ್ದರೆ ಕಾಂಗ್ರೆಸ್‌ನವರೇ ಆಗಿದ್ದಾರೆ. ಪ್ರತಿ ಬಾರಿ ಅಧಿಕಾರಕ್ಕೆ ಬಂದಾಗಲೂ ಪರ್ಸೆಂಟೇಜ್ ಹೆಚ್ಚು ಮಾಡಿಕೊಳ್ಳುತ್ತ ಬಂದಿದ್ದಾರೆ. ಈ ಬಗ್ಗೆ ಕಾಂಗ್ರೆಸ್‌ನ ಇಬ್ಬರು ನಾಯಕರು ಪಿಸು ಮಾತನಾಡಿರುವ ವಿಡಿಯೊ ಮಾಧ್ಯಮಗಳಲ್ಲೂ ಪ್ರಸಾರವಾಗಿದೆ. ಪರ್ಸೆಂಟೇಜ್ ಪ್ರಾರಂಭಿಸಿದವರೇ ಈಗ ಮನವಿ ಕೊಟ್ಟಿದ್ದಾರೆ. ಇದು ಎಲ್ಲಾ ಗುತ್ತಿಗೆದಾರರಿಗೂ ಗೊತ್ತಿದೆ. ಕಾಂಗ್ರೆಸ್‌ನ ಆರೋಪ ಹಾಸ್ಯಾಸ್ಪದವಾಗಿದೆ’ ಎಂದು ಟೀಕಿಸಿದರು.


ಬೊಮ್ಮಾಯಿ ಅವಧಿಯ ಟೆಂಡರ್ ತನಿಖೆ

ಬೆಂಗಳೂರು: ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ವಿವಿಧ ಇಲಾಖೆಗಳು, ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ನಡೆದಿರುವ ₹ 10 ಕೋಟಿಗಿಂತ ಹೆಚ್ಚು ಅನುದಾನದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ ಪಾವತಿಸಿಗೆ ಸಂಬಂಧಿಸಿದಂತೆ ತನಿಖೆ ನಡೆಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಶುಕ್ರವಾರ ಆದೇಶಿಸಿದ್ದಾರೆ.

ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಇಂಧನ, ಆರೋಗ್ಯ ಇಲಾಖೆ ಹಾಗೂ ಬಿಬಿಎಂಪಿ ಸೇರಿದಂತೆ ಕಾಮಗಾರಿಗಳನ್ನು ಕೈಗೊಳ್ಳುವ ಸರ್ಕಾರದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ಪತ್ರ ಬರೆದಿರುವ ಮುಖ್ಯ ಕಾರ್ಯದರ್ಶಿ ತನಿಖೆಗೆ ನಿರ್ದೇಶನ ನೀಡಿದ್ದಾರೆ.

ಮುಖ್ಯ ಕಾರ್ಯದರ್ಶಿಗೆ ಗುರುವಾರ ಪತ್ರ ಬರೆದಿದ್ದ ಬೊಮ್ಮಾಯಿ, ತಾವು ಅಧಿಕಾರ ಸ್ವೀಕರಿಸಿದ ದಿನದಿಂದ ಕೈಗೊಂಡಿರುವ ಬೃಹತ್ ಕಾಮಗಾರಿಗಳ ಟೆಂಡರ್ ಮತ್ತು ಬಿಲ್ ಪಾವತಿಗೆ ಸಂಬಂಧಿಸಿದಂತೆ ತನಿಖೆಗೆ ಆದೇಶಿಸುವಂತೆ ಸೂಚಿಸಿದ್ದರು.

ಶ್ರೇಯಸ್ ಅಯ್ಯರ್ ‘ಚೊಚ್ಚಲ’ ಶತಕ



ಶ್ರೇಯಸ್ ಅಯ್ಯರ್

ಕಾನ್ಪುರ: ಪದಾರ್ಪಣೆ ಟೆಸ್ಟ್ ಪಂದ್ಯದಲ್ಲೇ ಶ್ರೇಯಸ್ ಅಯ್ಯರ್ ಶತಕ ದಾಖಲಿಸಿದರು. ಈ ಸಾಧನೆ ಮಾಡಿದ ಭಾರತದ 16ನೇ ಆಟಗಾರನಾದರು.

ಗ್ರೀನ್ ಪಾರ್ಕ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ನಡೆಯುತ್ತಿರುವ ಟೆಸ್ಟ್‌ನಲ್ಲಿ ಅಯ್ಯರ್ ಶತಕದ ಬಲದಿಂದ ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ 111.1 ಓವರ್‌ಗಳಲ್ಲಿ 345 ರನ್ ಗಳಿಸಿತು. ಅದಕ್ಕುತ್ತರವಾಗಿ ನ್ಯೂಜಿಲೆಂಡ್ ತಂಡವು ಶುಕ್ರವಾರ ದಿನದಾಟದ ಅಂತ್ಯಕ್ಕೆ 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 129 ರನ್ ಗಳಿಸಿದೆ.

ಮುಂಬೈನ 26 ವರ್ಷದ ಆಟಗಾರ ಶ್ರೇಯಸ್ ಅಯ್ಯರ್ 171 ಎಸೆತಗಳಲ್ಲಿ 105 ರನ್ ಗಳಿಸಿದರು. 12

ಕುಟುಂಬ ರಾಜಕಾರಣ: ಮೋದಿ ತರಾಟೆ

ನವದೆಹಲಿ: ‘ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಹರಡಿರುವ ಕುಟುಂಬದ ಪ್ರಾಬಲ್ಯವುಳ್ಳ ರಾಜಕೀಯ ಪಕ್ಷಗಳ ಬಗ್ಗೆ ಸಂವಿಧಾನಕ್ಕೆ ಬದ್ಧರಾಗಿರುವ ಜನರು ಪ್ರಮುಖವಾಗಿ ಚಿಂತನೆ ನಡೆಸಬೇಕಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಎಸ್ಸೆಸ್ಸೆಲ್ಸಿ: ಶೇ 20ರಷ್ಟು ಪಠ್ಯ ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪಠ್ಯಕ್ರಮವನ್ನು ಶೇಕಡ 20ರಷ್ಟು ಕಡಿತಗೊಳಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಕೋವಿಡ್‌ನಿಂದಾಗಿ ಶಾಲೆಗಳು ತಡವಾಗಿ ಆರಂಭವಾಗಿರುವುದನ್ನು ಪರಿಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಶೇಕಡ 100ರಷ್ಟು ಪಠ್ಯಕ್ರಮ ಬೋಧನೆ ಮಾಡುವುದು ಕಷ್ಟಸಾಧ್ಯ ಎಂದು ಶಿಕ್ಷಕರ ವಲಯದಲ್ಲಿ ಅಭಿಪ್ರಾಯಗಳು ವ್ಯಕ್ತವಾಗಿದ್ದವು.

ಪ್ರತಿ ವರ್ಷ 240ಕ್ಕೂ ಹೆಚ್ಚು ಬೋಧನಾ ದಿನಗಳು ಲಭಿಸುತ್ತಿದ್ದವು. ಆದರೆ, ಈ ಬಾರಿ 180 ಬೋಧನಾ ದಿನಗಳು ಮಾತ್ರ ದೊರೆತಿವೆ. ಇದರಿಂದ ವಿದ್ಯಾರ್ಥಿಗಳಿಗೆ ಪಠ್ಯ ಬೋಧನೆಯ ಪುನರಾವರ್ತನೆ ಮಾಡುವುದು ಸಾಧ್ಯವಾಗುವುದಿಲ್ಲ ಎಂದು ಶಿಕ್ಷಕರು ಅಭಿಪ್ರಾಯಪಟ್ಟಿದ್ದರು.

ಪಠ್ಯ ಕಡಿತಗೊಳಿಸುವ ವಿವರಗಳನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಶೀಘ್ರದಲ್ಲೇ ಪ್ರಕಟಿಸಲಿದೆ.

ಪಠ್ಯ ಕಡಿತಗೊಳಿಸುವ ನಿರ್ಧಾರ ಕೈಗೊಂಡಿರುವುದರಿಂದ ಮಾರ್ಚ್–ಏಪ್ರಿಲ್‌ನಲ್ಲೇ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಡೆಯುವ ಸಾಧ್ಯತೆಗಳಿವೆ. ಇದರಿಂದ, ಮೊದಲಿನಂತೆಯೇ ಶೈಕ್ಷಣಿಕ ವರ್ಷಗಳನ್ನು ಆರಂಭಿಸಲು ಅನುಕೂಲವಾಗುತ್ತದೆ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಕೋವಿಡ್‌ನಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಕಡಿತವಾಗಿರುವ ಪಠ್ಯವನ್ನು ಪರೀಕ್ಷೆಗಳ ನಂತರ ಬೋಧನೆ ಮಾಡುವಂತೆ ಶಿಕ್ಷಕರಿಗೆ ಸೂಚಿಸಲಾಗುವುದು. ಇದರಿಂದ, ಪಿಯು ತರಗತಿಯ ಪಠ್ಯದ ಅಧ್ಯಯನ ಮಾಡಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ’ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.



ಶಿಕ್ಷಣಕ್ಕೆ ಸಂಬಂಧಿಸಿದವರ ಅಭಿಪ್ರಾಯ ಪಡೆದು ಎಸ್ಸೆಸ್ಸೆಲ್ಸಿಯ ಎಲ್ಲ ವಿಷಯಗಳ ಶೇಕಡ 20ರಷ್ಟು ಪಠ್ಯ ಕಡಿತ ಮಾಡಲು ನಿರ್ಧರಿಸಲಾಗಿದೆ. ಒಂದೆರಡು ದಿನಗಳಲ್ಲಿ ವಿವರಗಳನ್ನು ಪ್ರಕಟಿಸಲಾಗುವುದು
ಬಿ.ಸಿ. ನಾಗೇಶ್
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಮಳೆ: ಗಿಡದಲ್ಲೇ ಮೊಳಕೆಯೊಡೆದ ತೊಗರಿ

ಬಿಳಿಜೋಳಕ್ಕೆ ಲದ್ದಿಹುಳು ಬಾಧೆ, ಸುಳಿರೋಗ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಕಲಬುರಗಿ: ರಾಜ್ಯದ ವಿವಿಧೆಡೆ ಸುರಿದ ನಿರಂತರ ಮಳೆ ಹಾಗೂ ಮೋಡ ಮುಸುಕಿದ ವಾತಾವರಣದಿಂದ ಬಿಳಿಜೋಳ, ಮೆಕ್ಕೆಜೋಳ ಹಾಗೂ ತೊಗರಿ ಬೆಳೆಗಳು ತೀವ್ರ ಹಾನಿಗೀಡಾಗಿವೆ.

ಬಿಳಿಜೋಳ, ಮೆಕ್ಕೆಜೋಳಕ್ಕೆ ಲದ್ದಿಹುಳು ಬಾಧೆ, ಶಿಲೀಂಧ್ರಬಾಧೆ ಕಾಣಿಸಿಕೊಂಡರೆ ತೊಗರಿ ಬೆಳೆ ಗಿಡದಲ್ಲೇ ಮೊಳಕೆಯೊಡೆಯುತ್ತಿದೆ. ರಾಯಚೂರಿನಲ್ಲಿ ಇದೇ ಮೊದಲ ಬಾರಿಗೆ ಬಿಳಿಜೋಳಕ್ಕೆ ‘ಸುಳಿರೋಗ’ ಕಾಣಿಸಿಕೊಂಡಿದೆ. ಬೀದರ್ ಜಿಲ್ಲೆಯ ಮೂರು ತಾಲ್ಲೂಕಿನಲ್ಲಿ ತೊಗರಿಗೆ ‘ಹಸಿರು ಕಾಯಿಕೊರಕ’ ಬಾಧೆ ಕಂಡುಬಂದಿದೆ.

ಧಾರವಾಡ ಜಿಲ್ಲೆಯಲ್ಲಿ ಬಿಳಿಜೋಳದ ಎಲೆಗಳು ತೇವಾಂಶ ಹೆಚ್ಚಳದಿಂದ ಹಳದಿ ಬಣ್ಣಕ್ಕೆ ತಿರುಗಿವೆ. ಕೊಪ್ಪಳ, ಬಾಗಲಕೋಟೆ, ಯಾದಗಿರಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಬಿಳಿಜೋಳಕ್ಕೆ ಅಲ್ಲಲ್ಲಿ ಲದ್ದಿ ಹುಳು (ಸೈನಿಕ ಹುಳು) ಬಾಧೆ ಕಾಣಿಸಿದೆ.

ಜೋಳ ಬಿತ್ತನೆಯಾಗಿ ಒಂದೂವರೆ ತಿಂಗಳಾಗಿದ್ದು, ಮಳೆ, ಮೋಡ ಕವಿದ ವಾತಾವರಣದಿಂದ ಬಿಳಿಜೋಳದ ಎಲೆ, ಸುಳಿಯಲ್ಲಿ ಲದ್ದಿ ಹುಳು ಮೊಟ್ಟೆ ಇಟ್ಟು ಹಸಿರು ಭಾಗ ತಿನ್ನುತ್ತಿದೆ. ಇದರಿಂದ ಇಳುವರಿ ಕುಂಠಿತವಾಗಲಿದೆ ಎಂಬ ಆತಂಕ ರೈತರದ್ದು.

ಬೀದರ್ ಜಿಲ್ಲೆಯ ಭಾಲ್ಕಿ ಹಾಗೂ ಹುಮನಾಬಾದ್ ತಾಲ್ಲೂಕುಗಳಲ್ಲಿ ಮಳೆ ಹಾಗೂ ಶೀತಗಾಳಿಗೆ ಬಿಳಿಜೋಳಕ್ಕೆ ಲದ್ದಿ ಹುಳುವಿನ ಬಾಧೆ ಕಂಡುಬಂದಿದೆ. ಕೃಷಿ ವಿಜ್ಞಾನಿಗಳ ತಂಡ ಪರಿಶೀಲಿಸಿ ಬಾಧೆ ನಿಯಂತ್ರಣಕ್ಕೆ ಕ್ರಮ ಕೈಗೊಂಡಿದ್ದಾಗಿ ಕೃಷಿ ಇಲಾಖೆ ತಿಳಿಸಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಬಿಳಿಜೋಳ ಮಳೆಯಿಂದ ಹಾನಿಗೀಡಾಗಿದ್ದು ಒಂದೆಡೆಯಾದರೆ, ಮೆಕ್ಕೆಜೋಳ ಬೆಳೆಯ ದಂಟು ಮಳೆಯ ಹೊಡೆತಕ್ಕೆ ಮುರಿದು ಬಿದ್ದು, ಮಣ್ಣಿನ ಸಂಪರ್ಕಕ್ಕೆ ಬಂದ ತೆನೆಯಲ್ಲಿನ ಕಾಳು ಮೊಳಕೆಯಾಗಿವೆ.

ಬಿಳಿಜೋಳಕ್ಕೆ ಸುಳಿರೋಗ: ರಾಯಚೂರು ಜಿಲ್ಲೆಯಲ್ಲಿ ಬಿಳಿಜೋಳಕ್ಕೆ ಮೊದಲಬಾರಿಗೆ ಹುಳದ ಬಾಧೆ ಕಂಡುಬಂದಿದೆ. ಜಿಲ್ಲೆಯಲ್ಲಿ ಒಣಬೇಸಾಯ ಇರುವ ರಾಯಚೂರು, ಲಿಂಗಸುಗೂರು ಹಾಗೂ ಮಾನ್ವಿ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಬಿಳಿಜೋಳ ಬೆಳೆಯಲಾಗುತ್ತದೆ.

'ಬಿಳಿಜೋಳದಲ್ಲಿ ರೋಗ ಬಂದಿರುವುದನ್ನು ಎಂದೂ ನೋಡಿರಲಿಲ್ಲ. ವಿಚಿತ್ರ ಹುಳುಗಳು ಜೋಳದ ಬೆಳೆಯ ಸುಳಿಯಲ್ಲಿ ಸೇರಿಕೊಂಡಿವೆ. ಕೆಲವು ಕೀಟನಾಶಕ ಸಿಂಪರಣೆ ಮಾಡುತ್ತಿದ್ದು, ಹತೋಟಿಗೆ ಬರುತ್ತಿದೆ' ಎಂದು ಕಡಗಂದೊಡ್ಡಿ ರೈತ ಮಹಾದೇವಪ್ಪ ಹೇಳಿದರು.



ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ನಾಗೂರು ಬಳಿ ಲದ್ದಿ ಹುಳು ಬಾಧೆಗೆ ತುತ್ತಾಗಿರುವ ಬಿಳಿಜೋಳ –ಪ್ರಜಾವಾಣಿ ಚಿತ್ರ

ಬಿಳಿಜೋಳ ಬಿತ್ತನೆ ಕ್ಷೇತ್ರ
ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)

ಜಿಲ್ಲೆ	ವಿಸ್ತೀರ್ಣ
ಬಾಗಲಕೋಟೆ	80,000
ಗದಗ	50,000
ಧಾರವಾಡ	35,390
ಕೊಪ್ಪಳ	30,000
ಬೀದರ್	21,000
ಯಾದಗಿರಿ	17,119
ರಾಯಚೂರು	2,000

ಅಕ್ಕಿ ತೌಡು, ಬೆಲ್ಲದ ಜೊತೆ ಕೀಟನಾಶಕ ಸಿಂಪರಣೆ ಮಾಡಿದರೆ ಲದ್ದಿ ಹುಳುಗಳು ಸಾಯುತ್ತವೆ. ಬಿಸಿಲು ಬೀಳುತ್ತಿರುವುದರಿಂದ ಇನ್ನು ಆತಂಕ ಇಲ್ಲ
ಡಾ.ಎಂ.ಬಿ.ಪಾಟೀಲ
ಕೃಷಿ ವಿಜ್ಞಾನಿ,ಕೊಪ್ಪಳ

4ನೇ ಪುಟ ನೋಡಿ

ಒಳ ಪುಟಗಳು

ಈ ಬಾರಿ ಎಷ್ಟಂತೆ? ₹15 ಕೋಟಿ ಬೇಕಂತೆ! 4



ಒತ್ತುವರಿ ತಡೆದ ‘ನಮ್ಮೂರು ನಮ್ಮ ಕೆರೆ’! 6

ಡಿ.15ರಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರ ಪುನರಾರಂಭ 6

ಶನಿವಾರದ ಉಷ್ಣಾಂಶ 27° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಅಲ್ಲಲ್ಲಿ ಮಳೆಯಾಗುವ ಸಾಧ್ಯತೆ ಇದೆ

ಮುನ್ನೋಟ: ಭಾನುವಾರ 28° 18° · ಸೋಮವಾರ 28° 18° · ಮಂಗಳವಾರ 27° 18°

ಸೂರ್ಯೋದಯ: 6:23 ಸೂರ್ಯಾಸ್ತ : 5:50 ಚಂದ್ರೋದಯ: ರಾ. 11:38 ಚಂದ್ರಾಸ್ತ: ಬೆ. 11:51

ಪ್ರಜಾವಾಣಿ

ಸಿ.ಎಂ ಕೈಯಲ್ಲೇ ಬೆಂಗಳೂರು ನಗರಾಭಿವೃದ್ಧಿ ಖಾತೆ ● ಘೋಷಣೆಯಾಗಿಯೇ ಉಳಿದ ಭರವಸೆ

ಸಚಿವರ ಕ್ಷೇತ್ರದ ಕಡತಗಳೂ ಕದಲುತ್ತಿಲ್ಲ!

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಶಿಕ್ಷಣ ಸಚಿವರಾಗಿದ್ದ ಎಸ್. ಸುರೇಶ್‌ಕುಮಾರ್ ತಮ್ಮ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ಕೋರಿದ್ದ ಕಡತ 327 ದಿನಗಳಿಂದ ಬಾಕಿ ಇದೆ. ಸಚಿವರಾಗಿದ್ದ ಅರವಿಂದ ಲಿಂಬಾವಳಿ ತಮ್ಮ ಕ್ಷೇತ್ರದ ರಸ್ತೆ, ಮಳೆ ನೀರು ಚರಂಡಿ ಅಭಿವೃದ್ಧಿಗೆ ಅನುದಾನ ಕೋರಿದ್ದ ಕಡತ 345 ದಿನಗಳಿಂದ ಹಾಗೇ ಉಳಿದಿದೆ. ಶೂನ್ಯ ವೇಳೆಯಲ್ಲಿ ಚರ್ಚಿಸಲು ಶಾಸಕ ಆರ್. ಮಂಜುನಾಥ್ ಕೇಳಿದ್ದ ಪ್ರಶ್ನೆಗೆ ಉತ್ತರ ನೀಡುವ ಕಡತ 722 ದಿನಗಳಿಂದ ಬಾಕಿ ಇದೆ...

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಬಸವರಾಜ ಬೊಮ್ಮಾಯಿ ಅವರು, ತುರಿತಗತಿಯಲ್ಲಿ ಕಡತ ವಿಲೇವಾರಿ ಮಾಡಲಾಗುವುದು ಎಂದು ಘೋಷಣೆ ಮಾಡಿದ್ದರು. ಅವರ ಅಧೀನದಲ್ಲೇ ಇರುವ ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ) ಇಲಾಖೆಯ ವ್ಯಾಪ್ತಿಯಲ್ಲಿ ಎರಡು ವರ್ಷಗಳಿಂದಲೂ ಕಡತಗಳು ವಿಲೇವಾರಿಯಾಗದೆ ದೂಳು ಹಿಡಿಯುತ್ತಿವೆ.

'ಮುಖ್ಯಮಂತ್ರಿ ನವ ಬೆಂಗಳೂರು' ಯೋಜನೆಯಡಿ ಅನುಮೋದನೆ ನೀಡಲಾಗಿದ್ದ ಕಾಮಗಾರಿಗೆ ಅನುದಾನ ಬಿಡುಗಡೆ ಮಾಡಲು ಕೋರಿದ್ದ ಕಡತ 722 ದಿನಗಳಿಂದ ಇದ್ದಲ್ಲೇ ಇದ್ದರೆ, ತೀರಾ ಹಿಂದುಳಿದ ಪ್ರದೇಶವಾಗಿರುವ ವಿ. ನಾಗೇನಹಳ್ಳಿಯಲ್ಲಿ ನಗರೋತ್ಥಾನ ಅನುದಾನದ ಅಡಿಯಲ್ಲಿ ಕೈಗೊಳ್ಳಬೇಕಿದ್ದ ಕಾಮಗಾರಿ ವಿಭಜಿಸುವ ಕಡತವೂ 722 ದಿನಗಳಿಂದ ಅಲುಗಾಡಿಲ್ಲ.

ಘನತ್ಯಾಜ್ಯ ವಿಲೇವಾರಿ ಸಂಬಂಧ ಸಾರ್ವಜನಿಕರಿಂದ ಬಂದ ದೂರುಗಳಿಗೆ ಸಂಬಂಧಿಸಿದ ಆದೇಶಗಳು, ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳ ಕುರಿತ ಮಾಹಿತಿ ಮತ್ತು ದಾಖಲೆ ನೀಡುವಂತೆ ನಿವೃತ್ತ ಐಎಎಸ್ ಅಧಿಕಾರಿ ಜೆ.ವಿ. ಕೃಷ್ಣಪ್ಪ ಕೋರಿದ್ದರು. ಈ ಸಂಬಂಧದ ಕಡತ 714 ದಿನಗಳಿಂದ ಬಾಕಿ ಇದೆ. ವಿಧಾನಸಭೆಯ ಭರವಸೆ ಸಂಖ್ಯೆ 15/2018ಕ್ಕೆ ಉತ್ತರ ನೀಡುವ ಕಡತ 678 ದಿನಗಳಿಂದ ಕದಲಿಲ್ಲ.

ಮುಖ್ಯಮಂತ್ರಿ ವಿವೇಚನಾ ಕೋಟಾದ ಅಡಿಯಲ್ಲಿ ಬಿಬಿಎಂಪಿಗೆ ₹5 ಕೋಟಿ ಅನುದಾನ ಕೋರಿದ್ದ ಕಡತ 506 ದಿನಗಳಿಂದ, ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ಬದಲಿ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಕಡತ 372 ದಿನಗಳಿಂದ, ಮಾಹಿತಿ ಹಕ್ಕು ಕಾರ್ಯಕರ್ತ ಕಿರಣ್ ಸಿ. ನಾರಂಗ್, ವಕೀಲ ಕೆ.ವಿ. ವಿಜಯಕುಮಾರ್ ಮಾಹಿತಿ ಕೋರಿರುವ ಕಡತ 192 ದಿನಗಳಿಂದ ಬಾಕಿ ಉಳಿದುಕೊಂಡಿದೆ.

ಕೋವಿಡ್ ಎರಡನೇ ಅಲೆ ನಿರ್ವಹಣೆಗೆ ಬಿಬಿಎಂಪಿ ಕೋರಿರುವ ಅನುದಾನದ ಕಡತ 185 ದಿನಗಳಿಂದ, ಸಚಿವ ಸಿ.ಎನ್. ಅಶ್ವತ್ಥನಾರಾಯಣ ಪ್ರತಿನಿಧಿಸುವ ಮಲ್ಲೇಶ್ವರ ಕ್ಷೇತ್ರದಲ್ಲಿ 2019ರಲ್ಲಿ ಮಂಜೂರಾಗಿದ್ದ ಕಾಮಗಾರಿಗೆ ಬದಲಾಗಿ ₹10.95 ಕೋಟಿ ಮೊತ್ತದ ಬದಲಿ ಕಾಮಗಾರಿಗೆ ಅನುಮೋದನೆ ನೀಡುವ ಕಡತ 83 ದಿನಗಳಿಂದ, ಮುಖ್ಯಮಂತ್ರಿ ವಿವೇಚನಾ ಕೋಟಾದಲ್ಲಿ ಬಿಬಿಎಂಪಿಗೆ ₹10 ಕೋಟಿ ಅನುದಾನ ನೀಡುವ ಕಡತ 82 ದಿನಗಳಿಂದ ಇದ್ದಲ್ಲೇ ಇವೆ.

ಬಿಬಿಎಂಪಿಯ 198 ವಾರ್ಡ್‌ಗಳಲ್ಲಿ ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಕರೆಯಲಾಗಿದ್ದ ಟೆಂಡರ್‌ಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 24.10ರಷ್ಟು ಮೀಸಲಾತಿ ಕಾಯ್ದಿರಿಸುವ ತಾಂತ್ರಿಕ ಬಿಡ್‌ಗಳನ್ನು ತೆರೆದಿರುವುದಕ್ಕೆ ಸಂಬಂಧಿಸಿದ ಕಡತ 82 ದಿನಗಳಿಂದ, ಮಲ್ಲೇಶ್ವರದ ಸುವರ್ಣ ಭವನದ ಪಕ್ಕದಲ್ಲಿನ ಖಾಲಿ ಸ್ಥಳದಲ್ಲಿ ಸುಸಜ್ಜಿತ ಸಭಾಂಗಣ ನಿರ್ಮಿಸಲು ಅನುಕೂಲ ಆಗುವಂತೆ ಹೆಚ್ಚುವರಿಯಾಗಿ ₹10 ಕೋಟಿ ಬಿಡುಗಡೆ ಮಾಡುವಂತೆ ಕೋರಿರುವ ಕಡತ 79 ದಿನಗಳಿಂದ ಹಾಗೇ ಇವೆ.

ಪ್ರಜಾವಾಣಿ ವಿಶೇಷ

'ಕುಂಭಕರ್ಣ ನಿದ್ರೆಯಲ್ಲಿ ಸರ್ಕಾರ'

'ಪ್ರಸ್ತುತ ಸರ್ಕಾರ ಕುಂಭಕರ್ಣನಂತೆ ನಿದ್ರೆ ಮಾಡುತ್ತಿದ್ದು, ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲ' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಹೇಳಿದರು.

'ಭ್ರಷ್ಟಾಚಾರ ಎಲ್ಲೆ ಮೀರಿದ್ದು, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಭ್ರಷ್ಟಾಚಾರದ ಕಾರಣದಿಂದಾಗಿಯೇ ಸರ್ಕಾರಿ ಇಲಾಖೆಗಳಲ್ಲಿ ಕಡತಗಳು ತಿಂಗಳುಗಟ್ಟಲೆ ಒಂದೇ ಸ್ಥಳದಲ್ಲೇ ಉಳಿಯುತ್ತಿವೆ. ಬೆಂಗಳೂರು ವಿಚಾರದಲ್ಲಿ ನೇರವಾಗಿ ಮುಖ್ಯಮಂತ್ರಿ ಅವರ ಅಧೀನದಲ್ಲೇ ಇದ್ದು, ತಕ್ಷಣವೇ ಅವರು ಕಡತಗಳ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದಾಪುರ ವಿಭಾಗದ ಜಿಗಣಿ ಉಪವಿಭಾಗದಲ್ಲಿ ಕೈಗೊಂಡಿರುವ ಕಾಮಗಾರಿಯಿಂದ ಇದೇ 27ರಂದು ವಿದ್ಯುತ್ ವ್ಯತ್ಯಯವಾಗಲಿದೆ.

ಹಾರಗದ್ದೆ, ಕುಂಬಾರನಹಳ್ಳಿ, ಇಂಡ್ಲವಾಡಿ ಕ್ರಾಸ್, ದ್ಯಾವಸಂದ್ರ, ನೊಸೇನೂರು, ಬೊಮ್ಮಂಡಹಳ್ಳಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಡಲೆಕಾಯಿ ಪರಿಷೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಕಡಲೆಕಾಯಿ ಪರಿಷೆ ನ.29ರಿಂದ ಆರಂಭವಾಗಲಿದ್ದು, ಬಿಬಿಎಂಪಿ ಮತ್ತು ಮುಜರಾಯಿ ಇಲಾಖೆ ಸಿದ್ಧತೆ ಮಾಡಿಕೊಂಡಿವೆ.

ಬಸವಣ್ಣ ದೇವಸ್ಥಾನದ ಸುತ್ತಮುತ್ತ ಬ್ಯಾರಿಕೇಡ್ ಅಳವಡಿಸಲಾಗಿದೆ. ಶಾಮಿಯಾನ, ದೀಪಾಲಂಕಾರ, ಶೌಚಾಲಯ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ ಸೇರಿ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಅಗ್ನಿಶಾಮಕ, ತುರ್ತು ವೈದ್ಯಕೀಯ ನೆರವಿಗೂ ಸಜ್ಜು ಮಾಡಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಜಂಟಿ ಆಯುಕ್ತರು(ದಕ್ಷಿಣ) ತಿಳಿಸಿದ್ದಾರೆ.



ಅಭಿನವ ಪ್ರಕಾಶನ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ತೆರಿಗೆ ಪದಕೋಶ' ಪುಸ್ತಕವನ್ನು ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಬಿಡುಗಡೆಗೊಳಿಸಿದರು. ಲೇಖಕರಾದ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಜಂಟಿ ಆಯುಕ್ತ ಸುಬ್ಬರಾಯ ಎಂ.ಹೆಗಡೆ ಗೌರೀಬೈಲ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಡಿ.ಶಿವಣ್ಣ ಇದ್ದಾರೆ –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ಗಿಡಗಳ ಮಕ್ಕಳಿಗೆಂದೆ' ಸಿಸಿ ನೆಡುವ ಅಭಿಯಾನ: ಆಯೋಜನೆ–ಶೀಲಾ ಫೌಂಡೇಷನ್, ಸ್ಥಳ–ಫಿಡೆಲಿಟಸ್ ಕಾರ್ಪ್, ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್, ಬನಶಂಕರಿ 2ನೇ ಹಂತ, ಬೆಳಿಗ್ಗೆ 8

ಅಂತರ ಕಾಲೇಜು ಪ್ರಬಂಧ ಸ್ಪರ್ಧೆ: ಅಧ್ಯಕ್ಷತೆ–ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ, ಅತಿಥಿಗಳು–ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕ ಹರಿಪ್ರಕಾಶ್ ಕೋಣೆಮನೆ, ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಎನ್.ಎನ್.ಅರುಣ್ ಕುಮಾರ್, ಆಯೋಜನೆ–ಶ್ರೀಗುರುರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್, ಸ್ಥಳ–ಸಿಇಪ್ರಶ್ನೆ ಕಲಾ ಭವನ, ಎನ್.ಆರ್.ಕಾಲೋನಿ, ಬೆಳಿಗ್ಗೆ 10

ಪುಸ್ತಕಲೋಕ: ಅತಿಥಿಗಳು–ಮಲ್ಲೇಪುರಂ ಜಿ.ವೆಂಕಟೇಶ, ಕೊರ್ಗಿ ಶಂಕರ ನಾರಾಯಣ ಉಪಾಧ್ಯಾಯ, ಗುರುರಾಜ ಕರಜಗಿ, ವೀಣಾ ಬನ್ನಂಜೆ, ಸತ್ಯೇಶ್ ಬೆಳ್ಳೂರು, ಸ್ಥಳ–ಗೋಖಲೆ ಸಾರ್ವಜನಿಕ ಸಭಾಂಗಣ, ಬೆಳಿಗ್ಗೆ 10

ಬಿ.ಎಸ್.ಚಂದ್ರಶೇಖರ್ ಅವರ 'ಕುಂಚಿಟಿಗರ ಬೆಳ್ಳಿಹೋಳ ವೀರರಂಗಪ್ಪ ಮತ್ತವರ ವಂಶಜರು' ಪುಸ್ತಕ ಬಿಡುಗಡೆ: ಸಿ.ಕೆ.ರಾಮೇಗೌಡ, ಉದ್ಘಾಟನೆ–ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ, ಅಧ್ಯಕ್ಷತೆ–ವೂಡೇ ಪಿ.ಕೃಷ್ಣ, ಅತಿಥಿಗಳು–ನಾಗೇಂದ್ರ ಪ್ರಸಾದ್, ಎಸ್.ಅನಿಲ್ ಕುಮಾರ್, ರಾಮಯ್ಯ, ಬಂಧುವು ಪ್ರಕಾಶ್, ಕೆ.ಪಿ. ಪರಶಿವಪ್ಪ, ಆಯೋಜನೆ–ಪದ್ಮಶ್ರೀ ಕಲಾ ಸಂಘ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 10

ಎಂಬಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಅತಿಥಿಗಳು–ಎಸ್.ರವೀಶ್, ಕೆ.ಎಂ.ನಾರಾಯಣ್, ಆಯೋಜನೆ ಮತ್ತು ಸ್ಥಳ–ಕನ್ನಡ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಸಭಾಂಗಣ, ಜಯನಗರ 2ನೇ ಬ್ಲಾಕ್, ಬೆಳಿಗ್ಗೆ 10

ಕನ್ನಡ ರಾಜ್ಯೋತ್ಸವದ ಅಂಗವಾಗಿ 66 ಕನ್ನಡ ಪುಸ್ತಕಗಳ ಬಿಡುಗಡೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಸಾಹಿತಿ ಕಮಲಾ ಹಂಪನಾ, ಅತಿಥಿಗಳು–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಸಾಹಿತಿ ಎಚ್.ಎಸ್.ವೆಂಕಟೇಶ ಮೂರ್ತಿ, ವಿಮರ್ಶಕ ಸಿ.ಎನ್.ರಾಮಚಂದ್ರನ್, ಕನ್ನಡಪ್ರಭ ಪತ್ರಿಕೆಯ ಸಂಪಾದಕ ರವಿ ಹೆಗಡೆ, ಆಯೋಜನೆ–ಸಪ್ನ ಬುಕ್ ಹೌಸ್, ಸ್ಥಳ–ಗಾಂಧಿಭವನ, ಬೆಳಿಗ್ಗೆ 10

ಗ್ರಂಥಾಲಯ ಪತ್ರಿಕೆ ಬಿಡುಗಡೆ: ಅಧ್ಯಕ್ಷತೆ–ವಿಜಯಾ ಕುಲಪತಿ ಕರಿಸಿದ್ದಪ್ಪ, ಸ್ಥಳ–ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಆಡಳಿತ ಕಚೇರಿ, ಪೂರ್ಣಪ್ರಜ್ಞ ನಗರ, ನಾಗರಬಾವಿ, ಬೆಳಿಗ್ಗೆ 10.30

ರಾಜ್ಯಮಟ್ಟದ ಪ್ರಾಥಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್: ಅತಿಥಿಗಳು–ರಮೇಶ್ ಜಿಗಜಿನಗಿ, ಪ್ರಭಾವತಿ ರಮೇಶ್, ಗಿರೀಶ್ ಕುಮಾರ್ ನಾಯ್ಡು, ಎಸ್.ಎನ್.ಎಸ್.ಆರ್. ರಾವ್, ಎಂ.ಎಮ್.ಚಂದ್ರ, ಆಯೋಜನೆ–ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ, ಸ್ಥಳ–ಸ್ಕೈಲಿಂಕ್ ಸ್ಪೋರ್ಟ್ಸ್ ಸೆಂಟರ್, ಜೆಪಿ ನಗರ 7ನೇ ಹಂತ, ಬೆಳಿಗ್ಗೆ 10.30

ಪಿಟಿಯಾಟಿಕ್ ಎಪಿಟ್ಟಿ ಕ್ರಿಕೆಟ್ ಉದ್ಘಾಟನೆ ಹಾಗೂ ವಾಕಥಾನ್: ಅತಿಥಿಗಳು–ನಟ ಮಯೂರಿ, ಪ್ರಶಾಂತ್ ವೇಮರ್ಳ, ರಶ್ಮಿ ಅಡಿಗ, ಸ್ಥಳ–ಗ್ರೌಂಡ್ ಫ್ಲೋರ್, ದೈನ್ ಬೋ ಮತ್ತೊಕ್ಕ ಆವರಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

ಸಿಪಿಎಂ ಬೆಂಗಳೂರು ಉತ್ತರ ಜಿಲ್ಲಾ ಸಮ್ಮೇಳನ: ದ್ವಜಾರೋಹಣ–ಎನ್.ಎನ್. ಗೋಪಾಲರೆಡ್ಡಿ, ಉದ್ಘಾಟನಾ ಭಾಷಣ–ಕೆ.ಎನ್.ಉಮೇಶ್, ಮೀನಾಕ್ಷಿ ಸುಂದರಂ, ಗೌರಮ್ಮ, ಗೋಪಾಲಕೃಷ್ಣ ಅರಳಹಳ್ಳಿ, ಅಧ್ಯಕ್ಷತೆ–ಲೀಲಾವತಿ, ಸ್ಥಳ–ಫೆಡರಲ್ ಮೋಗಲ್ ಕಾಮಿಕರ ಸಭಾಂಗಣ, ಯಲಹಂಕ, ಬೆಳಿಗ್ಗೆ 10.30

ಹಮನಾಲೋತ್ಸವ ವಿದ್ಯಾಕ್ರಮಿಸಿ ವಿತರಣೆ: ಸಾನ್ನಿಧ್ಯ–ತೋಂಟದಾರ್ಯ ಮಠದ ಸಿದ್ದರಾಮ ಸ್ವಾಮೀಜಿ, ಅತಿಥಿಗಳು–ಎಲ್.ಹನುಮಂತಯ್ಯ, ಅಧ್ಯಕ್ಷತೆ–ಎಲ್. ರೇವಣಸಿದ್ದಯ್ಯ, ಆಯೋಜನೆ–ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ಸ್ಥಳ–ಸಂಸ್ಥೆಯ ಶತಮಾನೋತ್ಸವ ಸ್ಮಾರಕ ಸಭಾಂಗಣ, ತೋಟದಪ್ಪ ವಿದ್ಯಾರ್ಥಿನಿಲಯ, ಗುಬ್ಬಿ ತೋಟದಪ್ಪ ರಸ್ತೆ, ರೈಲ್ವೆ ನಿಲ್ದಾಣದ ರಸ್ತೆ, ಬೆಳಿಗ್ಗೆ 11

ಕಥಾ ಸಂಭ್ರಮ: ಅತಿಥಿಗಳು–ಎಸ್.ಆರ್.ಸೇತುರಾಂ, ಎಂ.ಪ್ರಕಾಶ ಮೂರ್ತಿ, ಮನೋಹರ ನಂದಿಯಾರ್, ರಾಧಾಕೃಷ್ಣ ಹೆಗಡೆ, ಆಯೋಜನೆ–ಲಯನ್ಸ್ ಇಂಟರ್ ನ್ಯಾಷನಲ್ 317ನೇ ಜಿಲ್ಲೆ, ಸ್ಥಳ–ಕೋಟಿ ಬಸವ ಸಭಾಂಗಣ, ಆರಮನೆ ರಸ್ತೆ, ಮಧ್ಯಾಹ್ನ 3

ವಿವಿಧ ಲೇಖಕರು ಬರೆದಿರುವ 'ಚೈತನ್ಯಮಯಿ' ಪುಸ್ತಕ ಬಿಡುಗಡೆ: ವಿ.ಶಾಂತಕ್ಕ, ಪುಸ್ತಕ ಪರಿಚಯ–ವಿನಾರಾಧಾರ್, ಆಯೋಜನೆ–ಸುಕೃಪಾ ಟ್ರಸ್ಟ್, ಸ್ಥಳ–ವಿದಿಕ್ ನೊಸ್ಲಿಕ, ನೃಪತುಂಗ ರಸ್ತೆ, ಸಂಜೆ 4


ಸಂಗೀತ ಸ್ವಾಸ ಸುಧಾ–ಸಂಗೀತ ಮತ್ತು ನೃತ್ಯ ಕಾರ್ಯಕ್ರಮ: ಅತಿಥಿಗಳು–ಉದಯ್ ಬಿ.ಗುರುರಾಜರ್, ಆರ್.ಎಸ್. ನಂದಕುಮಾರ್, ಆಯೋಜನೆ–ಶ್ರೀವಿದ್ಯಾ ಪ್ರತಿಷ್ಠಾನ, ಸ್ಥಳ–ಆರ್.ವಿ.ಶಿಕ್ಷಕರ ಕಾಲೇಜು ಸಭಾಂಗಣ, ಜಯನಗರ 2ನೇ ಬ್ಲಾಕ್, ಸಂಜೆ 5

ಸಿ.ರಾಮಚಂದ್ರ ಅವರಿಗೆ 'ಕರ್ನಾಟಕ ಧ್ರುವತಾರೆ' ಪ್ರಶಸ್ತಿ ಪ್ರದಾನ: ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಉದ್ಘಾಟನೆ–ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಸಿ.ಎನ್.ಮಂಜುನಾಥ್, ನಕ್ಷತ್ರ ಸ್ವರಾ ಸಂಚಿಕೆ ಬಿಡುಗಡೆ–ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, ಅಧ್ಯಕ್ಷತೆ–ಯಲ್ಲಪ್ಪರೆಡ್ಡಿ, ಆಯೋಜನೆ–ವಿಶ್ವಕನ್ನಡ ಕಲಾ ಕೂಟ, ಸ್ಥಳ–ಎಂಎಂ ಹಾಲ್, ವಿಂಡ್ಸರ್ ಆಶ್ರಯ ಎದುರು, ಸಂಜೆ 5

ಪ್ರೊ.ಟಿ.ಕೆ.ರಾಮಚಂದ್ರ ರಾವ್ ರಚನೆಯ 'ಸ್ವರ್ಣ ಪ್ರಾಥಮಿಕ ಸರ್ಕಾರಿ ಶಾಲೆ' ಮಕ್ಕಳ ನಾಟಕ ಪ್ರದರ್ಶನ: ಅತಿಥಿಗಳು–ಬುಕ್ಕಾಪಟ್ಟಣ ವಾಸು, ವಿಕ್ರಂ ಸೂರಿ, ರಾಧಾಕೃಷ್ಣ ಉರಾಳ, ವೆಂಕಟಸುಬ್ಬ ರಾಜು, ಯದುಕುಮಾರ್, ಆಯೋಜನೆ–ಕಲಾ ಕರಂಟ್ ಆರ್ಟ್ ಸೆಂಟರ್, ಸ್ಥಳ–ಶನೇಶ್ವರ ದೇವಾಲಯ, ಜನವರಿಶಿ ಸಂಸ್ಕೃತಿ ವೇದಿಕೆ, ವಿನಾಯಕ ನಗರ, ಗುಬ್ಬಲಾಳ, ಸುಬ್ರಹ್ಮಣ್ಯಪುರ, ಸಂಜೆ 6

'ನವರಾತ' ನಾಟಕ ಪ್ರದರ್ಶನ: ಆಯೋಜನೆ–ಸ್ಪಂದನ ನಾಟಕ ತಂಡ, ಸ್ಥಳ–ರಂಗಶಂಕರ, ಮಧ್ಯಾಹ್ನ 3.30 ಹಾಗೂ ಸಂಜೆ 7

ಎಂ.ಜಿ.ಹೆಗಡೆ ಅವರ 'ಜಿಎಸ್ ದೇವಿ ಯ ಬರಹಗಳು' ಅನುವಾದಿತ ಪುಸ್ತಕದ ಕುರಿತು ತಿಂಗಳ ಮಾತು ಕತೆ: ಪುಸ್ತಕ ಕುರಿತು–ಎಸ್.ಸಿರಾಜ್ ಅಹ್ಮದ್, ಆಯೋಜನೆ–ಪುಸ್ತಕ ಪ್ರೀತಿ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)



ಜಾನಪದ ಸೂಫಿ ಗಾಯಕ ಸಲೀಂ ಹಸನ್ ಚಿಶ್ತಿ ಅವರಿಗೆ ಎಚ್.ಎಲ್.ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ ಪ್ರದಾನ: ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಸಾನ್ನಿಧ್ಯ–ಆದಿಚುಂಚನ ಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು–ವಿದ್ವಾನ್ ಗೊ.ರು.ಚನ್ನಬಸಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಎಸ್.ರಂಗಪ್ಪ, ಕಾರ್ಯದರ್ಶಿ ಎನ್.ಮಂಜುಳಾ, ಅಧ್ಯಕ್ಷತೆ–ಟಿ.ತಿಮ್ಮೇಗೌಡ, ಆಯೋಜನೆ–ಕರ್ನಾಟಕ ಜಾನಪದ ಪರಿಷತ್ತು, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 5

ಸಲೀಂ ಹಸನ್ ಚಿಶ್ತಿ

ಜನೌಷಧಿ ಕೇಂದ್ರಗಳ ಪ್ರಾರಂಭಕ್ಕೆ ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜನೌಷಧಿ ಕೇಂದ್ರಗಳನ್ನು ಸ್ಥಾಪಿಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ.

ಈಗಾಗಲೇ ಕೆಲವು ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿ ಜನೌಷಧಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಇದನ್ನು ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ. ಅರ್ಹ ಸರ್ಕಾರೇತರ ಸಂಸ್ಥೆಗಳು, ದತ್ತಿ ಸಂಸ್ಥೆಗಳು, ನಿರುದ್ಯೋಗಿ ಯುವಜನರು, ಔಷಧ ವಿಭಾಗದ ಪದವೀಧರರು ಕೇಂದ್ರಗಳ ಪ್ರಾರಂಭಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಹ ದಾಖಲಾತಿಯೊಂದಿಗೆ ಸಲ್ಲಿಕೆಯಾದ ಅರ್ಜಿಗಳನ್ನು ಇಲಾಖೆಯ ನಿರ್ದೇಶಕ ನಾಲ್ಕು ವಾರಗಳಲ್ಲಿ ಕಳುಹಿಸಬೇಕು ಎಂದು ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ ಕಾರ್ಯವೈಖರಿಗೆ ಹೈಕೋರ್ಟ್ ಚಾಟಿ

ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ' ಎಂದು ಬಿಬಿಎಂಪಿ ಕಾರ್ಯವೈಖರಿಗೆ ಚಾಟಿ ಬೀಸಿರುವ ಹೈಕೋರ್ಟ್, 'ಸರ್ಕಾರ ಮಾಡಬೇಕಾದ ಕೆಲಸವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮಾಡುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ 'ಲೆಟ್ಸ್‌ಕಿಟ್' ಪ್ರತಿಷ್ಠಾನ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ಹಾಗೂ ನ್ಯಾಯಮೂರ್ತಿ ಕೆ.ಎಸ್.ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲೆ ಬಿ.ವಿ. ವಿದ್ಯುಲ್ಲತಾ, 'ಶೌಚಾಲಯಗಳ ಸ್ಥಿತಿಗತಿ ಮತ್ತು ನಿರ್ವಹಣೆಯ ಕುರಿತಂತೆ ಪ್ರಾಧಿಕಾರ ಈಗಾಗಲೇ ಸಮೀಕ್ಷೆ ನಡೆಸಿ ಈ ಸಂಬಂಧ ಬಿಬಿಎಂಪಿಗೆ ವರದಿ ಸಲ್ಲಿಸಿದೆ. ಅಂತೆಯೇ, ಇನ್ನೂ ಹೆಚ್ಚಿನ ಕೆಲಸ ಮಾಡಲು ಪ್ರಾಧಿಕಾರದ ಬಳಿ ಸಮರ್ಪಕ ಸಿಬ್ಬಂದಿ ಇಲ್ಲ' ಎಂದರು.

ಮಹಿಳಾ ಶೌಚಾಲಯಕ್ಕೆ ಕಿಟಕಿ...!

'ಕಾನೂನು ಸೇವಾ ಪ್ರಾಧಿಕಾರದ ವರದಿಯಲ್ಲಿ ಆಘಾತಕಾರಿ ಅಂಶಗಳು ಇವೆ' ಎಂದು ನ್ಯಾಯಪೀಠಕ್ಕೆ ವಿವರಿಸಿದ ಪ್ರತಿಷ್ಠಾನದ ಪರ ವಕೀಲ ರಮೇಶ್ ಪುತ್ತಿಗೆ, 'ಮಹಿಳಾ ಶೌಚಾಲಯಕ್ಕೆ ಕಿಟಕಿ ಜಾಗ ಬಿಡಲಾಗಿದೆ ಮತ್ತು ಸಾರ್ವಜನಿಕ ಶೌಚಾಲಯವನ್ನು ಅಡುಗೆ ಕೋಣೆಯನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಸಂಬಂಧ ಬಿಬಿಎಂಪಿ ತಕ್ಷಣ ಕ್ರಮ ಕೈಗೊಳ್ಳಬೇಕಿದೆ' ಎಂದು ಈ ಕುರಿತ ಫೋಟೋಗಳನ್ನು ಒದಗಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಬಿಎಂಪಿ ಪರ ವಕೀಲ ವಿ. ಶ್ರೀನಿಧಿ, 'ಶೌಚಾಲಯಗಳನ್ನು ಮೇಲ್ದರ್ಜೆಗೇರಿಸಲು ಮೂರು ವಾರ ಕಾಲಾವಕಾಶ ನೀಡಬೇಕು. ಕಾನೂನು ಸೇವಾ ಪ್ರಾಧಿಕಾರದ ವರದಿಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ' ಎಂದರು.

'ಬಿಬಿಎಂಪಿ ಮಾಡಬೇಕಾದ ಕೆಲಸವನ್ನು ಪ್ರಾಧಿಕಾರ ಮಾಡುತ್ತಿದೆ. ಪ್ರಾಧಿಕಾರವು ಅರೆನ್ಯಾಯಿಕ ಸ್ವಯಂ ಸೇವಾ ಕಾರ್ಯಕರ್ತರನ್ನು ಬಳಸಿಕೊಂಡು ತನ್ನ ಕೆಲಸ ಮುಂದುವರಿಸಲು ನ್ಯಾಯಾಲಯ ಅನುಮತಿ ನೀಡಬೇಕು. ಸ್ವಯಂ ಸೇವಾ ಕಾರ್ಯಕರ್ತರಿಗೆ ಬಿಬಿಎಂಪಿ ವತಿಯಿಂದ ಸಂಭಾವನೆ ಕೊಡಿಸಬೇಕು. ಒಂದೊಮ್ಮೆ ಕೋರ್ಟ್ ಬಿಬಿಎಂಪಿಗೆ ದಂಡ ವಿಧಿಸಿದರೆ ಆ ಹಣವನ್ನು ಕಾರ್ಯಕರ್ತರ ಸಂಭಾವನೆಗೆ ಬಳಸಿಕೊಳ್ಳಬಹುದು' ಎಂದು ಮನವಿ ಮಾಡಿದರು.

ಈ ಹೇಳಿಕೆಗೆ ಕೆರಳಿದ ನ್ಯಾಯಪೀಠ, 'ಎಲ್ಲ ಕೆಲಸವನ್ನೂ ಪ್ರಾಧಿಕಾರವೇ ಮಾಡಿದೆ. ಸರ್ಕಾರ ಏನೊಂದೂ ಕೆಲಸ ಮಾಡುತ್ತಿಲ್ಲ. ಒಂದೊಮ್ಮೆ ಕೆಲಸ ಮಾಡಿದ್ದರೆ, ಈ ಪ್ರಮಾಣದ ಸಾರ್ವಜನಿಕ ಹಿತಾಸಕ್ತಿ ಪ್ರಕರಣಗಳು ಕೋರ್ಟ್ ಮುಂದೆ ಬರುತ್ತಿರಲಿಲ್ಲ' ಎಂದು ಕಿಡಿ ಕಾರಿತು.

ಇದಕ್ಕೆ ಬಿಬಿಎಂಪಿ ಪರ ವಕೀಲ ವಿ.ಶ್ರೀನಿಧಿ ಅವರು, 'ಪ್ರಾಧಿಕಾರ ತನ್ನ ವರದಿಯಲ್ಲಿ ತಿಳಿಸಿರುವಂತೆ ಎಲ್ಲೆಲ್ಲಿ ಶೌಚಾಲಯಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆಯೋ ಅಲ್ಲೆಲ್ಲಾ ಕೂಡಲೇ ಕಾಮಗಾರಿ ಆರಂಭಿಸಲಾಗುವುದು ಮತ್ತು ಹೊಸ ಶೌಚಾಲಯಗಳನ್ನು ನಿರ್ಮಿಸಬೇಕಾದ ಸ್ಥಳಗಳಲ್ಲಿ ಅದಕ್ಕೆ ಬೇಕಾದ ಕ್ರಮ ಕೈಗೊಳ್ಳಲು ಮೂರು ವಾರ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು.

ಈ ಮನವಿಯನ್ನು ಮನ್ನಿಸಿದ ನ್ಯಾಯಪೀಠ, ಶೌಚಾಲಯಗಳನ್ನು ಮೇಲ್ದರ್ಜೆಗೇರಿಸುವ ಬಿಬಿಎಂಪಿ ಕಾರ್ಯವನ್ನು ಕಾಲಕಾಲಕ್ಕೆ ಪರಿಶೀಲಿಸುವಂತೆ ಕಾನೂನು ಸೇವೆಗಳ ಪ್ರಾಧಿಕಾರದ ವಕೀಲರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.



ಸರ್ಕಾರ ಮಾಡಬೇಕಾದ ಕೆಲಸವನ್ನು ಪ್ರಾಧಿಕಾರ, ಕೋರ್ಟ್ ಮಾಡಬೇಕಾಗಿದೆ. ಅಗತ್ಯ ಸಿಬ್ಬಂದಿ ಇಲ್ಲದೆ ಕಾನೂನು ಸೇವಾ ಪ್ರಾಧಿಕಾರ ಒದ್ದಾಡುತ್ತಿದೆ

ನ್ಯಾ.ಬಿ.ವೀರಪ್ಪ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರು

ರಾಜ್ಯ ಕೋವಿಡ್ ಅಂಕಿ–ಅಂಶ

29,94,963 ▲ ಒಟ್ಟು ಸೋಂಕಿತರು (29,94,561 ನಿನ್ನೆಯ ವಿವರ)

6,611 ▲ ಸಕ್ರಿಯ ಪ್ರಕರಣಗಳು

29,50,130 ▲ ಗುಣಮುಖರಾದವರು

38,193 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	402	▲
ಗುಣಮುಖ	277	▲
ಸಾವು	06	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,55,835 ▲ ಒಟ್ಟು ಸೋಂಕಿತರು (12,55,611 ನಿನ್ನೆಯ ವಿವರ)

5,235 ▲	12,34,272 ▲	16,327 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	224	▲
ಗುಣಮುಖ	129	▼
ಸಾವು	01	▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಶಕ್ತಿಧಾಮದಲ್ಲಿ ಶಾಲೆ ನಿರ್ಮಾಣ; ಶೀಘ್ರ ತೀರ್ಮಾನ'

ಮೈಸೂರು: 'ಡಾ.ರಾಜ್‌ಕುಮಾರ್ ಕುಟುಂಬ ಇಲ್ಲಿ ನಡೆಸುತ್ತಿರುವ ಮಹಿಳೆಯರ ಪುನರ್ವಸತಿ ಮತ್ತು ಅಭಿವೃದ್ಧಿ ಕೇಂದ್ರವಾದ ಶಕ್ತಿಧಾಮದಲ್ಲಿ ಶಾಲೆ ನಿರ್ಮಿಸಲಾಗುವುದು' ಎಂದು ನಟ ಶಿವರಾಜ್‌ಕುಮಾರ್ ಹೇಳಿದರು.

ನಟ ಪುನೀತ್ ರಾಜ್‌ಕುಮಾರ್ ನಿಧನದ ಬಳಿಕ ಮೊದಲ ಬಾರಿಗೆ ಶಕ್ತಿಧಾಮಕ್ಕೆ ಪತ್ನಿ ಗೀತಾ ಅವರೊಂದಿಗೆ ಶುಕ್ರವಾರ ಭೇಟಿ ನೀಡಿದ ಅವರು ಮಕ್ಕಳ ಯೋಗಕ್ಷೇಮ ವಿಚಾರಿಸಿದರು. ಟ್ರಸ್ಟಿಗಳ ಜತೆ ಸಭೆ ನಡೆಸಿದರು.

ಮಾಧ್ಯಮದವರ ಜತೆ ಮಾತನಾಡಿ, 'ಶಾಲೆ ನಿರ್ಮಾಣ ಸಂಬಂಧ ಚರ್ಚಿಸಲು ಈಗಾಗಲೇ ಒಂದು ಸುತ್ತಿನ ಸಭೆ ನಡೆಸಲಾಗಿದೆ. 2–3 ವಾರಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

ಶಾಸನಗಳಿಗೆ ಡಿಜಿಟಲ್ ಸಂರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಸುತ್ತಲಿನ ನೂರಾರು ಊರುಗಳ ಕಥೆ ಹಾಗೂ ಚರಿತ್ರೆ ಸಾರುವ ಶಾಸನಗಳು ನಶಿಸಿ ಹೋಗುತ್ತಿವೆ. ಅವುಗಳನ್ನು ಸಂರಕ್ಷಿಸುವ ಉದ್ದೇಶದಿಂದ ಡಿಜಿಟಲ್ ಸಂರಕ್ಷಣೆ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದು ದೇಶದಲ್ಲೇ ಮೊದಲ ಪ್ರಯೋಗ' ಎಂದು ದಿ ಮಿಥಿಕ್ ಸೊಸೈಟಿಯ ಪಿ.ಎಲ್. ಉದಯ ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಈ ಕಾರ್ಯಕ್ಕಾಗಿಯೇ ಪ್ರಯೋಗಾಲಯವೊಂದನ್ನು ಸ್ಥಾಪಿಸಲಾಗಿದೆ. ಅಮೆರಿಕದಿಂದ 'ಆರ್ಟೆಕ್ ಸ್ಪೇಸ್ ಸ್ಪೈಡರ್' ಕ್ಯಾಮೆರಾ ಖರೀದಿಸಲಾಗಿದೆ. ಈ ಕ್ಯಾಮೆರಾ ಕೂದಲೆಳೆಯಷ್ಟು ಚಿಕ್ಕ ಗಾತ್ರದ ಅಕ್ಷರಗಳನ್ನೂ ಗುರುತಿಸುವ ಸಾಮರ್ಥ್ಯ ಹೊಂದಿದೆ. ಇದರ ನೆರವಿನಿಂದ ದುಸ್ಥಿತಿಯಲ್ಲಿರುವ ಕಲ್ಲಿನ ಶಾಸನಗಳನ್ನು ಸಂಪೂರ್ಣವಾಗಿ ಸ್ಕ್ಯಾನ್ ಮಾಡಿ ಅದಕ್ಕೆ 3ಡಿ ಸ್ಪರ್ಶ ನೀಡಲಾಗುತ್ತದೆ' ಎಂದರು.

'ನಾಗರಿಕರು ತಮ್ಮ ಊರಿನ ಸುತ್ತ ಪತ್ತೆಯಾಗುವ ಶಾಸನಗಳ ಬಗ್ಗೆ ಮಾಹಿತಿ ನೀಡಿದರೆ ನಮ್ಮ ತಂಡವು ಸ್ಥಳಕ್ಕೆ ಹೋಗಿ ಪರಿಶೀಲಿಸಲಿದೆ. 'ಆರ್ಟೆಕ್ ಸ್ಪೇಸ್ ಸ್ಪೈಡರ್' ಕ್ಯಾಮೆರಾ ಜೊತೆ ಬ್ಯಾಟರಿಯೂ ಇರುತ್ತದೆ. ಹೀಗಾಗಿ ವಿದ್ಯುತ್ ಇಲ್ಲದಿದ್ದರೂ ಸುಮಾರು 6 ಗಂಟೆ ಕ್ಯಾಮೆರಾ ಕಾರ್ಯನಿರ್ವಹಿಸುತ್ತದೆ' ಎಂದು ಮಾಹಿತಿ ನೀಡಿದರು.



'ಆರ್ಟೆಕ್ ಸ್ಪೇಸ್ ಸ್ಪೈಡರ್' ಕ್ಯಾಮೆರಾ

ಮಿಥಿಕ್ ಸೊಸೈಟಿಯ ಕಾರ್ಯದರ್ಶಿ ವಿ.ನಾಗರಾಜ್, 'ಪ್ರಕೃತಿ ವಿಕೋಪ, ಜನರ ನಿರ್ಲಕ್ಷ್ಯ, ನಗರೀಕರಣದಿಂದಾಗಿ ಕಲ್ಲಿನ ಶಾಸನಗಳು ನಶಿಸಿ ಹೋಗುತ್ತಿವೆ. ಅವುಗಳ ರಕ್ಷಣೆಗಾಗಿ ಈ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ವಿಶೇಷ ಸಾಫ್ಟ್‌ವೇರ್‌ಗಳನ್ನು ಖರೀದಿಸಲಾಗಿದೆ' ಎಂದು ತಿಳಿಸಿದರು.

ಒಕ್ಕಲಿಗರ ಸಂಘದ ಚುನಾವಣೆ: 221 ಅಭ್ಯರ್ಥಿಗಳು ಕಣದಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಆಡಳಿತ ಮಂಡಳಿ ಚುನಾವಣೆಯ ಸ್ಪರ್ಧಾ ಕಣ ಅಂತಿಮಗೊಂಡಿದ್ದು, 35 ಸ್ಥಾನಗಳಿಗೆ 221 ಉಮೇದುವಾರರು ಕಣದಲ್ಲಿ ಉಳಿದಿದ್ದಾರೆ.

ಆರು ಪ್ರಬಲ 'ಸಿಂಡಿಕೇಟ್'ಗಳೂ ಸೇರಿದಂತೆ ಹಲವು ಬಣಗಳು ಸಂಘದ ಆಡಳಿತ ಮಂಡಳಿಯ ಚುಕ್ಕಾಣಿ ಹಿಡಿಯಲು ಈ ಬಾರಿ ಪೈಪೋಟಿ ನಡೆಸುತ್ತಿವೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಒಟ್ಟು 15 ಸ್ಥಾನಗಳಿಗೆ 141 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದಾರೆ. ಮಂಡ್ಯ ಜಿಲ್ಲೆಯ ನಾಲ್ಕು ಸ್ಥಾನಗಳಿಗೆ 16, ಕೋಲಾರ– ಚಿಕ್ಕಬಳ್ಳಾಪುರ ಜಿಲ್ಲೆಗಳ ಮೂರು ಸ್ಥಾನಗಳಿಗೆ 12, ಹಾಸನ ಜಿಲ್ಲೆಯ ಮೂರು ಸ್ಥಾನಗಳಿಗೆ 11, ಮೈಸೂರು ಜಿಲ್ಲೆಯ ಮೂರು ಸ್ಥಾನಗಳಿಗೆ ಒಂಭತ್ತು, ತುಮಕೂರು ಜಿಲ್ಲೆಯ ಎರಡು ಸ್ಥಾನಗಳಿಗೆ ಏಳು ಮಂದಿ ಕಣದಲ್ಲಿದ್ದಾರೆ.

ಶಿವಮೊಗ್ಗ– ಉತ್ತರ ಕನ್ನಡ ಜಿಲ್ಲೆಗಳ ಒಂದು ಸ್ಥಾನಕ್ಕೆ ಒಂಭತ್ತು ಮಂದಿ ಸ್ಪರ್ಧೆಯಲ್ಲಿದ್ದಾರೆ. ಚಿತ್ರದುರ್ಗದ ಒಂದು ಸ್ಥಾನಕ್ಕೆ ಐದು, ಕೊಡಗು ಜಿಲ್ಲೆಯ ಒಂದು ಸ್ಥಾನಕ್ಕೆ ನಾಲ್ಕು, ಚಿಕ್ಕಮಗಳೂರು ಜಿಲ್ಲೆಯ ಒಂದು ಸ್ಥಾನಕ್ಕೆ ನಾಲ್ಕು ಹಾಗೂ ದಕ್ಷಿಣ ಕನ್ನಡ– ಉಡುಪಿ ಜಿಲ್ಲೆಗಳ ಒಂದು ಸ್ಥಾನಕ್ಕೆ ಮೂವರು ಅಭ್ಯರ್ಥಿಗಳು ಅಖಾಡದಲ್ಲಿದ್ದಾರೆ.

ತೀವ್ರ ಪೈಪೋಟಿ: ಕಿಮ್ಸ್ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಟಿ.ಎಚ್.ಆಂಜನಪ್ಪ, ಸಂಘದ ಹಿಂದಿನ ಪ್ರಧಾನ ಕಾರ್ಯದರ್ಶಿ ಪ್ರೊ. ಎಂ.ನಾಗರಾಜ್, ಹಿಂದಿನ ಅಧ್ಯಕ್ಷ ಬಿ. ಕೆಂಚಪ್ಪಗೌಡ, ನೇತ್ರ ತಜ್ಞ ಡಾ.ಅಪ್ಪಾಜಿಗೌಡ ವಿಧಾನ ಪರಿಷತ್ ಸದಸ್ಯ ಅ. ದೇವೇಗೌಡ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊ. ಮಲ್ಲಯ್ಯ ನೇತೃತ್ವದಲ್ಲಿ ತಲಾ 15ಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು 'ಸಿಂಡಿಕೇಟ್' ರಚಿಸಿಕೊಂಡಿದ್ದಾರೆ. ಮೂರರಿಂದ ಐದು ಮಂದಿ ಅಭ್ಯರ್ಥಿಗಳ ಚಿಕ್ಕ 'ಸಿಂಡಿಕೇಟ್'ಗಳೂ ಈ ಬಾರಿ ಹೆಚ್ಚು ಸಂಖ್ಯೆಯಲ್ಲಿವೆ.

ಆಂಜನಪ್ಪ ಬಣ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಸೇರಿದಂತೆ ಹಲವರ ಬೆಂಬಲದಲ್ಲಿ ಚುನಾವಣೆ ಎದುರಿಸುತ್ತಿದೆ. ವೈದ್ಯರು, ವಕೀಲರು, ಸರ್ಕಾರದ ನಿವೃತ್ತ ಅಧಿಕಾರಿಗಳು, ಪ್ರಾಧ್ಯಾಪಕರು ಈ ಬಾರಿ ಒಕ್ಕಲಿಗರ ಸಂಘದ ಚುನಾವಣೆಗೆ ಸ್ಪರ್ಧಿಸಿರುವವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಂಘದ ಆಡಳಿತದ ಚುಕ್ಕಾಣಿ ಹಿಡಿಯಲು ಬೆಂಗಳೂರಿನ 15 ಸ್ಥಾನಗಳ ಗೆಲುವು ನಿರ್ಣಾಯಕವಾಗಿದ್ದು, ನಗರ ಸೇರಿದಂತೆ ಮೂರು ಜಿಲ್ಲೆಗಳಲ್ಲಿ ಚುನಾವಣೆಯ ಕಾವು ಏರಿದೆ.

5.20 ಲಕ್ಷ ಮತದಾರರು

ಒಕ್ಕಲಿಗರ ಸಂಘದ ಚುನಾವಣೆಯಲ್ಲಿ 5,20,721 ಮತದಾರರಿಗೆ ಹಕ್ಕು ಚಲಾಯಿಸುವ ಅವಕಾಶವಿದೆ. ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಅತ್ಯಧಿಕ 1,97,125 ಮತದಾರರಿದ್ದಾರೆ.

ಡಿಸೆಂಬರ್ 12ರಂದು ಮತದಾನ ನಡೆಯಲಿದೆ. ಡಿ. 15ರಂದು ಮತಗಳ ಎಣಿಕೆ ನಡೆಸಲಾಗುತ್ತದೆ. ಚುನಾವಣೆಗಾಗಿ 1,049 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ಒಕ್ಕಲಿಗರ ಸಂಘದ ಚುನಾವಣಾಧಿಕಾರಿಯಾಗಿರುವ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ನಗರದಲ್ಲಿ ಭಾರಿ ಶಬ್ದ

ಬೆಂಗಳೂರು: ಬೆಂಗಳೂರಿನ ಹಲವು ಕಡೆ ಶುಕ್ರವಾರ ಮಧ್ಯಾಹ್ನ 12 ಗಂಟೆ ಸುಮಾರಿಗೆ ಭೂಮಿ ಕಂಪಿಸಿದ ರೀತಿಯಲ್ಲಿ ಭಾರಿ ಸದ್ದಿನ ಅನುಭವವಾಗಿದೆ. ಆದರೆ, ರಿಕ್ಟರ್ ಮಾಪಕದಲ್ಲಿ ಭೂಕಂಪನ ಆಗಿರುವ ಬಗ್ಗೆ ಯಾವುದೇ ವರದಿಯಾಗಿಲ್ಲ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಸ್ಪಷ್ಟಪಡಿಸಿದೆ.

ನಗರದ ಹೆಮ್ಮಿಗೆಪುರ, ಕಗ್ಗಲೀಪುರ, ಕೆಂಗೇರಿ, ರಾಜರಾಜೇಶ್ವರಿ ನಗರ, ಜ್ಞಾನಭಾರತಿ, ಮೈಸೂರು ರಸ್ತೆಯ ಕೆಲವು ಪ್ರದೇಶಗಳಲ್ಲಿ 11.50ರಿಂದ 12.15ರ ನಡುವೆ ಭೂಮಿ ಕಂಪಿಸಿದೆ ಎಂದು ಈ ಭಾಗದ ಜನರು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರಕ್ಕೆ ಮಾಹಿತಿ ನೀಡಿದ್ದರು.

ಮನೆಯಲ್ಲಿದ್ದವರು ಭೂಮಿ ನಡುಗಿದ ಶಬ್ದ ಕೇಳಿ ಗಾಬರಿಯಿಂದ ಹೊರಬಂದಿದ್ದರು. 'ಕೆಂಗೇರಿ ಉಪನಗರದ ಇಂದಿರಾ ಗಾಂಧಿ ಸರ್ಕಲ್ ಬಳಿ ಗೆಳೆಯರೊಬ್ಬರನ್ನು ಭೇಟಿ ಮಾಡಲು ಹೋಗಿದ್ದೆ. ಭೂಮಿ ಕಂಪಿಸಿದ ಅನುಭವ ನನಗೂ ಆಯಿತು' ಎಂದು ಟಿ.ಪ್ರಭಾಕರ್ ಹೇಳಿದರು.

ಈ ಸಂಬಂಧ ಸುತ್ತೋಲೆ ಹೊರಡಿಸಿದ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ,'ಭೂಮಿ ಕಂಪಿಸಿರುವ ಸಾರ್ವಜನಿಕರು ಮಾಹಿತಿ ನೀಡಿರುವ ಅನ್ವಯ ಭೂಕಂಪನದ ಮಾಪನಗಳಿಂದ ದತ್ತಾಂಶ ಸಂಗ್ರಹಿಸಲಾಗಿದ್ದು, ಆ ಅವಧಿಯಲ್ಲಿ ಯಾವುದೇ ಭೂಕಂಪನದ ಸಂಕೇತಗಳು ಬೆಂಗಳೂರಿನಲ್ಲಿ ವರದಿಯಾಗಿಲ್ಲ' ಎಂದು ಸ್ಪಷ್ಟಪಡಿಸಿದೆ.

ಸಣ್ಣ ಪ್ರಮಾಣದ ಭೂಕಂಪನ ಆಗಿದೆ: 'ನಗರದಲ್ಲಿ ಸಣ್ಣ ಪ್ರಮಾಣದಲ್ಲಿ ಭೂಕಂಪನ ಆಗಿದೆ' ಎಂದು ಭೂವಿಜ್ಞಾನಿ ಎಚ್.ಎಸ್.ಎಂ.ಪ್ರಕಾಶ್ 'ಪ್ರಜಾವಾಣಿ'ಗೆ ತಿಳಿಸಿದರು. 'ವೋಲ್ಕ್ಯಾನೊಸ್ ಆ್ಯಂಡ್ ಅರ್ಥ್‌ಕ್ವೇಕ್ಸ್' ಎಂಬ ಆ್ಯಪ್‌ನಲ್ಲಿ ಜಗತ್ತಿನ ಯಾವುದೇ ಮೂಲೆಯಲ್ಲಿ ಭೂಕಂಪನ ನಡೆದ ಕೂಡಲೇ ವರದಿಯಾಗುತ್ತದೆ. ಶುಕ್ರವಾರ ಮಧ್ಯಾಹ್ನ ಬೆಂಗಳೂರಿನ ಕೆಲವು ಭಾಗಗಳಲ್ಲಿ ಭೂಕಂಪನ ಆಗಿರುವ ಬಗ್ಗೆ ಈ ತಂತ್ರಾಂಶದಲ್ಲಿ ಮಾಹಿತಿಯೂ ಇದ್ದು, 3.0 ತೀವ್ರತೆಯ ಸಣ್ಣ ಪ್ರಮಾಣದ ಭೂಕಂಪನ ಆಗಿದೆ' ಎಂದು ವಿವರಿಸಿದರು.

ಹಂಸಲೇಖಗೆ ಮಾನಸಿಕ ದಾಳಿ ವಿರೋಧಿಸಿ ಜಾಥ

ಬೆಂಗಳೂರು: ಸಂಗೀತ ನಿರ್ದೇಶಕ ಹಂಸಲೇಖ ಅವರ ಮೇಲೆ ಮಾನಸಿಕ ದಾಳಿ ನಡೆಸಲಾಗುತ್ತಿದೆ ಎಂದು ಆರೋಪಿಸಿ ಸಂವಿಧಾನ ಸಂರಕ್ಷಣಾ ಏಕತಾ ಸಮಿತಿಯು (ಕರ್ನಾಟಕ) ಶುಕ್ರವಾರ ಜಾಥಾ ಹಮ್ಮಿಕೊಂಡಿತ್ತು.

ಸಂಗೊಳ್ಳಿರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ನಡೆದ ಜಾಥಾದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು. 'ಜೈ ಭೀಮ್', ಜೈ ಸಂವಿಧಾನ', 'ಬ್ರಾಹ್ಮಣ್ಯವೇ ಭಾರತ ಬಿಟ್ಟು ತೊಲಗಲಿ', 'ಬಾಡೆ ನಮ್ ಗಾಡು'... ಹೀಗೆ ವಿವಿಧ ಬರಹಗಳಿರುವ ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಹಂಸಲೇಖ ಪರ ಹೋರಾಟಕ್ಕೆ ಜಯವಾಗಲಿ' ಎಂಬ ಘೋಷ ವಾಕ್ಯಗಳೂ ಪ್ರತಿಧ್ವನಿಸಿದವು.

'ವೈಯಕ್ತಿಕ ತೇಜೋವಧೆಗೆ ಮುಂದಾಗುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು'ಎಂದು ಒತ್ತಾಯಿಸಿದರು.

'ವಿಡಿಯೊ ಗೇಮ್ಸ್' ಮಳಿಗೆ: ಸಿಸಿಬಿ ದಾಳಿ

ಬೆಂಗಳೂರು: ದೇವರ ಜೀವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿದ್ದ 'ವಿಡಿಯೊ ಗೇಮ್ಸ್' ಮಳಿಗೆ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಐವರು ಆರೋಪಿಗಳನ್ನು ಬಂಧಿಸಿದ್ದಾರೆ. ವಿಡಿಯೊ ಗೇಮ್ಸ್‌ಗೆ ಬಳಸುತ್ತಿದ್ದ 83 ಯಂತ್ರಗಳನ್ನು, ₹10 ಸಾವಿರ ಜಪ್ತಿ ಮಾಡಲಾಗಿದೆ.

'ಆ್ಯಪ್' ಸಾಲ; 'ಲಿಕೋರೈಸ್' ಉದ್ಯೋಗಿಗಳ ಬಂಧನ

ಬೆಂಗಳೂರು: ಮೊಬೈಲ್ 'ಆ್ಯಪ್' ಮೂಲಕ ಜನರಿಗೆ ಸಾಲ ಕೊಟ್ಟು, ಮೀಟರ್ ಬಡ್ಡಿ ಲೆಕ್ಕದಲ್ಲಿ ಹಣ ವಸೂಲಿ ಮಾಡುತ್ತ ಕಿರುಕುಳ ನೀಡುತ್ತಿದ್ದ ಆರೋಪದಡಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ಪ್ರಮುಖ ಆರೋಪಿಗಳಾಗಿರುವ ಚೀನಾ ಪ್ರಜೆಗಳು ತಲೆಮರೆಸಿಕೊಂಡಿದ್ದಾರೆ.

'ಮಾರತ್ತಹಳ್ಳಿ ಮುನೇಕೊಳಾಲು ಪ್ರದೇಶದಲ್ಲಿರುವ 'ಲಿಕೋರೈಸ್ ಟೆಕ್ನಾಲಜಿ' ಕಂಪನಿಯ ಮಾನವ ಸಂಪನ್ಮೂಲ (ಎಚ್‌ಆರ್) ಅಧಿಕಾರಿ ಕಾಮರಾಜ್ ಮೋರೆ (25) ಹಾಗೂ ಗುಂಪಿನ ಮುಖ್ಯಸ್ಥ ದರ್ಶನ್ ಚವ್ಹಾಣ (21) ಬಂಧಿತರು. ಕಂಪನಿ ನಡೆಸುತ್ತಿದ್ದ ಚೀನಾ ಪ್ರಜೆಗಳು ತಲೆಮರೆಸಿಕೊಂಡಿದ್ದಾರೆ. ಅವರೆಲ್ಲರ ವಿರುದ್ಧ ಮಾರತ್ತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

ಮೀಟರ್ ಬಡ್ಡಿ ಕಿರುಕುಳ: 'ನಿಗದಿತ ಅವಧಿಯಲ್ಲಿ ಸಾಲದ ಕಂತು ತುಂಬಿದರೂ ಮೀಟರ್ ಬಡ್ಡಿಗಾಗಿ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದರು. ಮೀಟರ್ ಬಡ್ಡಿ ನೀಡಲು ಒಪ್ಪದಿದ್ದಾಗ, ಮೊಬೈಲ್ ಹಾಗೂ ಅಂತರ್ಜಾಲ ಕರೆ ಮಾಡಿ ಅಸಭ್ಯ ಪದಗಳಿಂದ ನಿಂದಿಸಿ ಕಿರುಕುಳ ನೀಡುತ್ತಿದ್ದರು' ಎಂದು ಸಿಸಿಬಿ ಮೂಲಗಳು ವಿವರಿಸಿವೆ.

52 ನಕಲಿ ಕಂಪನಿ ಸೃಷ್ಟಿ: 'ಲಿಕೋರೈಸ್ ಟೆಕ್ನಾಲಜಿ ಕಂಪನಿ ಕಚೇರಿ ಮೇಲೂ ದಾಳಿ ಮಾಡಿ ದಾಖಲೆಗಳನ್ನು ಪರಿಶೀಲಿಸಲಾಯಿತು. ಚೀನಾ ಪ್ರಜೆಗಳೇ ಕಂಪನಿ ಆರಂಭಿಸಿದ್ದ ಸಂಗತಿ ತಿಳಿಯಿತು' ಎಂದೂ ಮೂಲಗಳು ವಿವರಿಸಿವೆ.

'ಹೂಡಿಕೆ ಹೆಸರಿನಲ್ಲೂ ವಂಚನೆ'

'ಟ್ರೈ ಕಾನ್' ಆ್ಯಪ್ ಸೃಷ್ಟಿಸಿದ್ದ ಚೀನಾ ಪ್ರಜೆಗಳು, ಹೂಡಿಕೆ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸುತ್ತಿದ್ದರು. ಲಾಭದ ಆಸೆಗೆ ಬಿದ್ದು ಉತ್ತರ ಭಾರತದ ನೂರಾರು ಮಂದಿ ಹಣ ಹೂಡಿಕೆ ಮಾಡಿದ್ದರು' ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಜೈಲಿನಿಂದ ಹೊರಬಂದು ಕಳ್ಳತನ

ಬೆಂಗಳೂರು: ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಸುರೇಶ್ ಅಲಿಯಾಸ್ ಸೂರಿ (27) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ನಗರದ ಹಲವೆಡೆ 2008ರಿಂದಲೇ ಸುರೇಶ್ ಕೃತ್ಯ ಎಸಗಲಾರಂಭಿಸಿದ್ದ. ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿದ್ದ ಆತ, ಜಾಮೀನು ಮೇಲೆ ಹೊರಬಂದಿದ್ದ. ತನ್ನ ಹಳೇ ಚಾಳಿ ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಸೆ. 4ರಂದು ಬೇರೆ ಊರಿಗೆ ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದ್ದನ್ನು ಖಾತ್ರಿಪಡಿಸಿಕೊಂಡು ಆರೋಪಿ ಕೃತ್ಯಕ್ಕೆ ಸಂಚು ರೂಪಿಸಿದ್ದ. ಮನೆಯ ಬೀಗ ಮುರಿದು ಒಳನುಗ್ಗಿದ್ದ ಆತ, ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಕದ್ದುಕೊಂಡು ಪರಾರಿಯಾಗಿದ್ದ.

ಐವರು ಬಾಂಗ್ಲಾ ಪ್ರಜೆಗಳ ಬಂಧನ

ಬೆಂಗಳೂರು: ದೇಶದೊಳಗೆ ಅಕ್ರಮವಾಗಿ ನುಸುಳಿ ಬೆಂಗಳೂರಿಗೆ ಬಂದು ಉಳಿದುಕೊಂಡಿದ್ದ ಬಾಂಗ್ಲಾದೇಶದ ಐವರು ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ನಾಮಪತ್ರ ವಾಪಸು ಪಡೆದವರಿಗೆ ಅಭಿನಂದನೆ!

ಮೈಸೂರು: ಮೈಸೂರು-ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿದ್ದ ಪಿ.ಎಸ್. ಯಡೂರಪ್ಪ ಎಂಬುವವರು ಕೊನೆ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆದರು.

ವಿಶೇಷವೆಂದರೆ ಅವರನ್ನು ಬಿಜೆಪಿ ಅಭ್ಯರ್ಥಿ ಆರ್. ರಘು (ಕೌಟಿಲ್ಯ) ಭೇಟಿಯಾಗಿ ಅಭಿನಂದಿಸಿದರು. ಅವರು ತಮಗೆ ಬೆಂಬಲ ಸೂಚಿಸಿದ್ದಾರೆ ಎಂದು ರಘು ಹೇಳಿದ್ದಾರೆ.

ಪಿರಿಯಾಪಟ್ಟಣ ತಾಲ್ಲೂಕಿನ 67 ವರ್ಷದ ಯಡೂರಪ್ಪ, ಹಿಂದಿನ ಹಲವು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಯಡೂರಪ್ಪ ಎಂಬ ಹೆಸರಿರುವ ಕಾರಣ ಮತದಾರರು ಗೊಂದಲಕ್ಕೆ ಸಿಲುಕಿದ್ದೂ ಇದೆ. ಉಮೇದುವಾರಿಕೆ ವಾಪಸ್ ಪಡೆಯಲು ಶುಕ್ರವಾರ ಅಂತಿಮ ದಿನವಾಗಿತ್ತು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ವಾಟಾಳ್ ನಾಗರಾಜ್ ಹಾಗೂ ಮೂವರು ಪಕ್ಷೇತರರು ಸೇರಿ ಏಳು ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರ: ಹಣದ್ದೇ ಮಾತು

ಈ ಬಾರಿ ಎಷ್ಟಂತೆ? ₹15 ಕೋಟಿ ಬೇಕಂತೆ!

• ಕೆ.ಓಂಕಾರ ಮೂರ್ತಿ



ತಲೆಗಿಷ್ಟು ಎಂದು ಹಣ ನಿಗದಿ ಮಾಡಿದರೆ ಸದಸ್ಯರನ್ನು ಅವಮಾನ ಮಾಡಿದಂತೆ. ದುರ್ಬಳಕೆ ಮಾಡಿಕೊಂಡ ಪಕ್ಷಗಳು ಹಣದ ಬಗ್ಗೆ ಮಾತನಾಡುತ್ತವೆ

ಆರ್.ರಘು, ಬಿಜೆಪಿ ಅಭ್ಯರ್ಥಿ



ಮೊದಲ ಬಾರಿ ಸ್ಪರ್ಧಿಸುತ್ತಿದ್ದು, ಹಣದ ಪ್ರಭಾವ ಗೊತ್ತಿಲ್ಲ. ಕಾಂಗ್ರೆಸ್ ಬೆಂಬಲಿತ ಗ್ರಾ.ಪಂ ಸದಸ್ಯರು ಹೆಚ್ಚಿರುವುದರಿಂದ ಹಣ ಖರ್ಚು ಮಾಡಬೇಕಿಲ್ಲ

ಡಾ.ಡಿ.ತಿಮ್ಮಯ್ಯ
ಕಾಂಗ್ರೆಸ್ ಅಭ್ಯರ್ಥಿ



ಅಧಿಕಾರದಲ್ಲಿದ್ದಾಗ ಕೆಲಸ ಮಾಡದ ಪಕ್ಷ ಹಣ ನೀಡಿ ಮತ ಪಡೆಯಬೇಕಾಗುತ್ತದೆ. ಕುಮಾರಣ್ಣನ ಕೆಲಸವೇ ನನಗೆ ಶ್ರೀರಕ್ಷೆ

ಸಿ.ಎನ್.ಮಂಜೇಗೌಡ
ಜೆಡಿಎಸ್ ಅಭ್ಯರ್ಥಿ

ಮೈಸೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಮೈಸೂರು-ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಚುನಾವಣೆಗೆ 'ಕೋಟ್ಯಧಿಪತಿ' ಅಭ್ಯರ್ಥಿಗಳು ಕಣಕ್ಕಿಳಿಯುತ್ತಿದ್ದಂತೆ 'ಈ ಬಾರಿ ರೇಟು ಎಷ್ಟಂತೆ? ಒಬ್ಬೊಬ್ಬರು ₹15 ಕೋಟಿಗೂ ಅಧಿಕ ಖರ್ಚು ಮಾಡ್ತರಂತೆ' ಎಂಬ ಮಾತು ಗ್ರಾಮ ಪಂಚಾಯಿತಿ ಪಡಸಾಲೆಗಳಲ್ಲಿ ಕೇಳಿ ಬರುತ್ತಿದೆ.

ಈ ಬಾರಿ ಕಣಕ್ಕಿಳಿದಿರುವ ಕಾಂಗ್ರೆಸ್‌ನ ಡಾ.ಡಿ.ತಿಮ್ಮಯ್ಯ, ಬಿಜೆಪಿಯ ಆರ್.ರಘು (ಕೌಟಿಲ್ಯ) ಹಾಗೂ ಜೆಡಿಎಸ್‌ನ ಸಿ.ಎನ್.ಮಂಜೇಗೌಡ ಈಗಾಗಲೇ ಪ್ರಚಾರ ಆರಂಭಿಸಿದ್ದು, ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಸಭೆ ಆಯೋಜನೆ, ವ್ಯಕ್ತಿಗತ ಭೇಟಿ ಮೂಲಕ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳನ್ನು ಸೆಳೆಯಲು ನಾನಾ ಕಸರತ್ತು ನಡೆಸುತ್ತಿದ್ದಾರೆ.

'ಹೋದ ಸಲ ಒಂದು ವೋಟಿನ ರೇಟು ₹ 20 ಸಾವಿರದಿಂದ 25 ಸಾವಿರ ಇತ್ತು. ಈ ಬಾರಿಯೂ ಘಟಾನುಘಟಿಗಳೇ ಸ್ಪರ್ಧಿಸಿದ್ದು, ₹30 ಸಾವಿರ ರಿಂದ 50 ಸಾವಿರದವರೆಗೆ ಏರಬಹುದು' ಎಂದು ಮೂರೂ ಪಕ್ಷದ ಸಭೆಗಳಲ್ಲಿ ಮುಖಂಡರು, ಕಾರ್ಯಕರ್ತರು ಮಾತನಾಡಿಕೊಳ್ಳುತ್ತಿದ್ದಾರೆ.

'ಈ ಚುನಾವಣೆಯಲ್ಲಿ ಖರ್ಚಿಗೆ ಪಕ್ಷದಿಂದ ಅಭ್ಯರ್ಥಿಗೆ ಹಣ ಕೊಡುವುದಿಲ್ಲ. ಏಕೆಂದರೆ ಚುನಾವಣೆಯಿಂದ ಪಕ್ಷಕ್ಕೆ ಲಾಭವಿಲ್ಲ. ಪ್ರತಿಷ್ಠೆ ಹಾಗೂ ಸಂಖ್ಯೆ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಆರ್ಥಿಕವಾಗಿ ಪ್ರಬಲರಾಗಿರುವವರನ್ನೇ ಕಣಕ್ಕಿಳಿಸುತ್ತಾರೆ. 25 ಸ್ಥಾನಗಳಿಗೆ ನಡೆಯಲಿರುವ ಈ ಚುನಾವಣೆಯಲ್ಲಿ ಕನಿಷ್ಠ ₹1 ಸಾವಿರ ಕೋಟಿ ಹರಿದಾಡಲಿದೆ' ಎಂದು ಬಿಜೆಪಿ ರಾಜ್ಯಮಟ್ಟದ ನಾಯಕರೊಬ್ಬರು ತಿಳಿಸಿದರು.

ಇತ್ತ ಇಷ್ಟು ದಿನ ಪಕ್ಷಗಳ ಜೊತೆ ಗುರುತಿಸಿಕೊಳ್ಳುತ್ತಿದ್ದ ಗ್ರಾಮ ಪಂಚಾಯಿತಿ ಸದಸ್ಯರು 'ನಾನು ತಟಸ್ಥ' ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಕೆಲವರು ಮೂರೂ ಪಕ್ಷಗಳ ಅಭ್ಯರ್ಥಿಗಳೊಂದಿಗೆ ಗುರುತಿಸಿಕೊಳ್ಳುತ್ತಿದ್ದಾರೆ.

ಏಜೆಂಟ್ ನೇಮಕ: ಮೈಸೂರು ಹಾಗೂ ಚಾಮರಾಜನಗರ ಸೇರಿ 380 ಗ್ರಾಮ ಪಂಚಾಯಿತಿಗಳಿದ್ದು, ಅಭ್ಯರ್ಥಿಗಳು ಪ್ರತಿ ಪಂಚಾಯಿತಿಗೊಬ್ಬ ಏಜೆಂಟ್ ನೇಮಿಸುತ್ತಿದ್ದಾರೆ. 'ಅವರ ಮೂಲಕವೇ ಉಡುಗೊರೆಯ ವಿತರಣೆ ನಡೆಯಲಿದೆ' ಎನ್ನಲಾಗಿದೆ.

ವಿಶೇಷವೆಂದರೆ ಅಭ್ಯರ್ಥಿಗಳು ತಮ್ಮ ಪಕ್ಷದ ಕಾರ್ಯಕರ್ತರಿಗೆ ಮಣೆ ಹಾಕದೆ ಬಾಂಧವರು, ಪರಿಚಯಸ್ಥರು, ನಂಬಿಕಸ್ಥರು ಹಾಗೂ ತಮ್ಮ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನೇ ಈ ಉದ್ದೇಶಕ್ಕೆ ನಿಯೋಜಿಸುತ್ತಿದ್ದಾರೆ.

ಬಿಡಿಗಾಸಿಗೆ ಕೈಯೊಡ್ಡಲ್ಲ: 'ಆರು ವರ್ಷಗಳ ಅವಧಿಯಲ್ಲಿ ಒಮ್ಮೆಯಾದರೂ ಗ್ರಾಮಕ್ಕೆ ಬಂದು ಅಭಿವೃದ್ಧಿ ಕೆಲಸ ಮಾಡಿಕೊಟ್ಟರೆ ಸಾಕು. ಹಿಂದೆ ಯಾರೂ ಭೇಟಿಯೇ ಕೊಟ್ಟಿಲ್ಲ. ಅಭ್ಯರ್ಥಿಗಳು ನೀಡುವ ಬಿಡಿಗಾಸಿಗೆ ಕೈಯೊಡ್ಡುವವರು ನಾವಲ್ಲ' ಎಂದು ಹುಣಸೂರು ತಾಲ್ಲೂಕು ಚಿಲ್ಕುಂದ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಜಯಣ್ಣ ಹೇಳಿದರು.

'ಚುನಾವಣೆಯಲ್ಲಿ ಹಣದ ಶಕ್ತಿ'

'ವಿಧಾನ ಪರಿಷತ್ ಚುನಾವಣೆಯಲ್ಲಿ ಗೆಲ್ಲುವವರು ಸೋಲುತ್ತಾರೆ, ಸೋಲುವವರು ಗೆಲ್ಲುತ್ತಾರೆ. ಹಣ ಸೇರಿದಂತೆ ಹಲವು ಶಕ್ತಿಗಳು ಕೆಲಸ ಮಾಡುತ್ತವೆ. ಗುಪ್ತವಾಗಿ ಏನೇನು ನಡೆಯುತ್ತದೆ ಎಂಬುದು ಗೊತ್ತಾಗುವುದಿಲ್ಲ. ಜನರೇ ಈ ವಿಚಾರವಾಗಿ ಧ್ವನಿ ಎತ್ತಬೇಕು' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಸುದ್ದಿ 2 ನಿಮಿಷ

'ನನ್ನ ಸೋಲಿಸಿದವರಿಗೆ ಪಾಠ ಕಲಿಸಿ'


ಮಧುಗಿರಿ: 'ಕಳೆದ ಲೋಕಸಭಾ ಚುನಾವಣೆಯಲ್ಲಿ ನನ್ನ ಸೋಲಿಗೆ ಕಾರಣರಾದವರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಇಲ್ಲಿ ಶುಕ್ರವಾರ ಮನವಿ ಮಾಡಿದರು.

ಜೆಡಿಎಸ್ ಅಭ್ಯರ್ಥಿ ಆರ್. ಅನಿಲ್ ಕುಮಾರ್ ಪರ ಹಮ್ಮಿಕೊಂಡಿದ್ದ ಪ್ರಚಾರ ಸಭೆಯಾದ 'ಜನತಾ ಸಂಗಮ' ಸಮಾವೇಶದಲ್ಲಿ ಮಾತನಾಡಿ, 'ನನಗೆ ಆಗಿರುವ ನೋವು ಸರಿಪಡಿಸಲು ನಿಮಗೆ ಇದೊಂದು ಅವಕಾಶ ಸಿಕ್ಕಿದೆ' ಎಂದರು.

'ಕಳೆದ ಲೋಕಸಭಾ ಚುನಾವಣೆಯಲ್ಲಿ ಜಿಲ್ಲೆಯಿಂದ ಸ್ಪರ್ಧಿಸುವಂತೆ ಮಾಡಿದರು. ಕೆಲವರು ರಾಜಕೀಯ ಷಡ್ಯಂತ್ರ ಮಾಡಿ ಸೋಲಿಗೆ ಕಾರಣರಾದರು. ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಗೆಲ್ಲಿಸುವ ಮೂಲಕ ನನ್ನ ಸೋಲಿಗೆ ಕಾರಣರಾದವರಿಗೆ ಉತ್ತರ ಕೊಡಬೇಕು' ಎಂದು ಕೇಳಿಕೊಂಡರು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕೆ.ಎನ್. ರಾಜಣ್ಣ ಅವರ ಹೆಸರು ಹೇಳದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು. 'ಅವರ ಪುತ್ರ ಆರ್. ರಾಜೇಂದ್ರ ಅವರನ್ನು ಸೋಲಿಸಿ ಕಳೆದ ಚುನಾವಣೆಯಲ್ಲಿ ಆಗಿರುವ ತಪ್ಪನ್ನು ಸರಿಪಡಿಸಬೇಕು. ನನ್ನನ್ನು ಸೋಲಿಸಿದ್ದರಿಂದ ಎದೆಗುಂದಿಲ್ಲ' ಎಂದು ತಿಳಿಸಿದರು.

'ಇದು ನನ್ನ ಕೊನೆಯ ಚುನಾವಣೆಯ ಪ್ರಚಾರ. ಮುಂದೆ ಬರುತ್ತೇನೊ, ಇಲ್ಲವೊ ಗೊತ್ತಿಲ್ಲ. ಯಾವ ಜನ ನನ್ನ ಕೈಬಿಟ್ಟಿದ್ದಾರೆಯೊ ಅವರೇ ನನ್ನನ್ನು ಎತ್ತಿಕೊಂಡು ಬರುತ್ತಾರೆ. ಪ್ರಾದೇಶಿಕ ಪಕ್ಷ ಉಳಿಸಿ' ಎಂದರು.



ನಕಲಿ ಮತದಾನ ತಡೆಗೆ ಎಸ್‌ಪಿ ಆಗ್ರಹ

ಲಖನೌ (ಪಿಟಿಐ): ಮುಂಬರಲಿರುವ, ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ನಕಲಿ ಮತದಾನವನ್ನು ತಡೆಯುವುದಕ್ಕಾಗಿ, ಮತದಾರರ ಪಟ್ಟಿಯಲ್ಲಿರುವ ಎಲ್ಲ ನಕಲಿ ಹೆಸರುಗಳನ್ನು ತೆಗೆದುಹಾಕಿದ ಬಗ್ಗೆ ಚುನಾವಣಾ ಆಯೋಗವು ಭರವಸೆ ನೀಡಬೇಕು ಎಂದು ಸಮಾಜವಾದಿ ಪಕ್ಷ ಶುಕ್ರವಾರ ಆಗ್ರಹಿಸಿದೆ.

ಚುನಾವಣಾ ಆಯೋಗವು ಮತದಾರರ ಪಟ್ಟಿಯಿಂದ ಸಾಕಷ್ಟು ಸಂಖ್ಯೆಯಲ್ಲಿ ಖೊಟ್ಟಿ ಮತದಾರರ ಹೆಸರುಗಳನ್ನು ತೆಗೆದುಹಾಕಿದೆ. ಆ ನಂತರವೂ ನ.1ರಂದು ಪ್ರಕಟಿಸಲಾದ ಮತದಾರರ ಪಟ್ಟಿಯಲ್ಲಿ ಅಂಥ ಹೆಸರುಗಳು ಇನ್ನೂ ಉಳಿದಿರುವುದು ಕಳವಳಕಾರಿಯಾಗಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಸೂಚನೆ ಮೇರೆಗೆ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನರೇಶ್ ಉತ್ತಮ್ ಪಟೇಲ್ ಅವರು ಈ ವಿಚಾರವಾಗಿ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ ಎಂದು ಸಮಾಜವಾದಿ ಪಕ್ಷವು ಪ್ರಕಟಣೆಯಲ್ಲಿ ತಿಳಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಅವಧಿಯನ್ನು ನ.30ರಿಂದ ಡಿ.31ರ ವರೆಗೆ ವಿಸ್ತರಿಸಬೇಕು ಎಂದು ಆಗ್ರಹಿಸಿರುವ ಸಮಾಜವಾದಿ ಪಕ್ಷ, ಇದರಿಂದ, ಪ್ರತಿಯೊಂದು ಮತಗಟ್ಟೆಯಲ್ಲಿಯೂ ಇರಬಹುದಾದ ಖೊಟ್ಟಿ ಮತದಾರರನ್ನು ಗುರುತಿಸಲು ಪಕ್ಷದ ಕಾರ್ಯಕರ್ತರಿಗೆ ಸಾಧ್ಯವಾಗಲಿದೆ ಎಂದು ಹೇಳಿದೆ.

'ಅಂಬೇಡ್ಕರ್–ಲೋಹಿಯಾ ಅನುಯಾಯಿಗಳ ಮೈತ್ರಿ'

ಲಖನೌ (ಪಿಟಿಐ): ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನ ಸಭೆ ಚುನಾವಣೆಯಲ್ಲಿ ಅಂಬೇಡ್ಕರ್‌ವಾದಿಗಳು ಮತ್ತು ಸಮಾಜವಾದಿಗಳು ಜತೆಯಾಗಿ ಬಿಜೆಪಿಯನ್ನು ಸೋಲಿಸಲಿದ್ದಾರೆ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಹೇಳಿದ್ದಾರೆ. ಈ ಮೂಲಕ, ಬಿ.ಆರ್. ಅಂಬೇಡ್ಕರ್ ಅವರ ಅನುಯಾಯಿಗಳ ಜತೆಗೆ ಕೆಲಸ ಮಾಡಬೇಕು ಎಂಬ ರಾಮಮನೋಹರ ಲೋಹಿಯಾ ಅವರ ಅಪೇಕ್ಷೆ ಈಡೇರಲಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿಯನ್ನು ಅಧಿಕಾರದಿಂದ ಉಚ್ಚಾಟಿಸಲು ಜನರು ಈಗಾಗಲೇ ನಿರ್ಧರಿಸಿದ್ದಾರೆ. ಸಮಯ ಬಂದಾಗ ಜನರು ತಮ್ಮ ಶೋಷಕರಿಗೆ ಪಾಠ ಕಲಿಸುತ್ತಾರೆ ಎಂದು ಸಂವಿಧಾನ ದಿನಕ್ಕೆ ಸಂಬಂಧಿಸಿದ ಕಾರ್ಯಕ್ರಮದಲ್ಲಿ ಅಖಿಲೇಶ್ ಹೇಳಿದ್ದಾರೆ.

ಇಲ್ಲಿಂದ ದೆಹಲಿಗೆ ಹೋದವರ (ಮೋದಿ) ಬಾಗಿಲನ್ನು ಉತ್ತರ ಪ್ರದೇಶದ ಜನರು ಮುಚ್ಚಲಿದ್ದಾರೆ. ಅವರನ್ನು ಅಧಿಕಾರದಿಂದ ಉಚ್ಚಾಟಿಸಲಿದ್ದಾರೆ

ಅಖಿಲೇಶ್ ಯಾದವ್
ಎಸ್‌ಪಿ ಮುಖ್ಯಸ್ಥ

ಮಾಜಿ ಸಂಸದೆ ಸಾವಿತ್ರಿಬಾಯಿ ಫುಲೆ, ಅಂಬೇಡ್ಕರ್ ಅವರ ಮೊಮ್ಮಕ್ಕಳಾದ ಪ್ರಕಾಶ್ ಅಂಬೇಡ್ಕರ್, ಭೀಮರಾವ್ ಯಶವಂತ ರಾವ್ ಅಂಬೇಡ್ಕರ್, ಬಿಎಸ್‌ಪಿ ಸ್ಥಾಪಕ ಕಾನ್ಶೀರಾಂ ಸಹೋದರಿ ಸ್ವರ್ಣ ಕೌರ್, ಎಸ್‌ಬಿಎಸ್‌ಪಿ ಮುಖ್ಯಸ್ಥ ಓಂಪ್ರಕಾಶ್ ರಾಜ್‌ಭರ್ ಮತ್ತು ಅಪ್ನಾ ದಳ (ಕೆ) ನಾಯಕಿ ಪಲ್ಲವಿ ಪಟೇಲ್ ಅವರು ಈ ಕಾರ್ಯಕ್ರಮ ಸಂಘಟಿಸಿದ್ದರು.

'ಅಂಬೇಡ್ಕರ್ ಅವರೊಂದಿಗೆ ಕೆಲಸ ಮಾಡಬೇಕು ಎಂಬ ಕನಸನ್ನು ಲೋಹಿಯಾ ಹೊಂದಿದ್ದರು. ಈ ಕನಸು ಈಡೇರಿಲ್ಲ. ಅದನ್ನು ಈಡೇರಿಸುವ ಕನಸನ್ನು ನಾವು ಕೈಬಿಟ್ಟಿಲ್ಲ. 2022ರಲ್ಲಿ ಈ ಕನಸು ಖಂಡಿತವಾಗಿ ಈಡೇರಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಣದಿಂದ ಹಿಂದೆ ಸರಿದ ಇಸಾಕ್ ಖಾನ್

ಕೊಡಗು: ಸುಜಾ ಕುಶಾಲಪ್ಪ–ಮಂಥರ್‌ಗೌಡ ನಡುವೆ ನೇರ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ವಿಧಾನ ಪರಿಷತ್ ಚುನಾವಣೆಗೆ ಕೊಡಗು ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದ ಜೆಡಿಎಸ್ ಅಭ್ಯರ್ಥಿ ಇಸಾಕ್ ಖಾನ್ ಕೊನೆಯ ಕ್ಷಣದಲ್ಲಿ ಕಣದಿಂದ ಹಿಂದೆ ಸರಿದಿದ್ದಾರೆ.



ಇಸಾಕ್ ಖಾನ್

ಶುಕ್ರವಾರ ನಡೆದ ಮಹತ್ವದ ಬೆಳವಣಿಗೆಯಲ್ಲಿ ಅವರು ನಾಮಪತ್ರ ವಾಪಸ್ ಪಡೆದರು. 'ನಾಮಪತ್ರ ವಾಪಸ್ ಪಡೆಯುವಂತೆ ಮಾಡುವಲ್ಲಿ ಕಾಂಗ್ರೆಸ್ ಸ್ಥಳೀಯ ನಾಯಕರು ಯಶಸ್ವಿಯಾಗಿದ್ದಾರೆ' ಎಂಬ ಚರ್ಚೆಯೂ ನಡೆದಿದೆ. ಸದ್ಯ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುಜಾ ಕುಶಾಲಪ್ಪ, ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್‌ಗೌಡ ಉಳಿದಿದ್ದು ಇಬ್ಬರ ನಡುವೆ ಪೈಪೋಟಿ ಏರ್ಪಟ್ಟಿದೆ.


ನಾಮಪತ್ರ ವಾಪಸ್ ಪಡೆಯುವ ಸಂಬಂಧ ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ, ಮಾಜಿ ಸದಸ್ಯ ಅರುಣ್ ಮಾಚಯ್ಯ ಹಾಗೂ ಮುಖಂಡ ಎಚ್.ಎಸ್.ಚಂದ್ರಮೌಳಿ ಅವರು ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ್ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು. 'ಕಾಂಗ್ರೆಸ್ ಮುಖಂಡರು ನಮ್ಮ ಮೇಲೆ ಒತ್ತಡ ಹಾಕಿದ್ದರು' ಎಂದು ಗಣೇಶ್ ಸ್ಪಷ್ಟಪಡಿಸಿದ್ದಾರೆ.

'ಕಣದಲ್ಲಿ ಉಳಿದರೆ ಬಿಜೆಪಿ ಅಭ್ಯರ್ಥಿಗೆ ಅನುಕೂಲ ಆಗುತ್ತಿತ್ತು. ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆಂದು ನಮ್ಮ ಕಾರ್ಯಕರ್ತರೂ ಟೀಕಿಸುತ್ತಿದ್ದರು. ಹೀಗಾಗಿ, ನಾಮಪತ್ರ ವಾಪಸ್ ಪಡೆದುಕೊಂಡೆ' ಎಂದು ಇಸಾಕ್ ಖಾನ್ ಹೇಳಿದರು.

'ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹಾಗೂ ಸಂಸದ ಪ್ರಜ್ವಲ್ ರೇವಣ್ಣ ಕರೆ ಮಾಡಿ ನಾಮಪತ್ರ ವಾಪಸ್ ಪಡೆಯುವಂತೆ ಸೂಚಿಸಿದರು' ಎಂದೂ ತಿಳಿಸಿದರು.

'ಮುಂದಿನ ದಿನಗಳಲ್ಲಿ ಪಕ್ಷದಲ್ಲಿ ಉನ್ನತ ಸ್ಥಾನಮಾನ ನೀಡುವ ಭರವಸೆಯನ್ನು ಕುಮಾರಸ್ವಾಮಿ ನೀಡಿದ್ದಾರೆ. ಅವರ ಮಾತು ತೃಪ್ತಿ ತಂದಿದೆ' ಎಂದು ಹೇಳಿದರು.

ಯಾರಿಗೆ ಬೆಂಬಲ; ಮುಂದಿನ ದಿನಗಳಲ್ಲಿ ನಿರ್ಧಾರ



ಎಚ್.ಡಿ. ಕುಮಾರಸ್ವಾಮಿ

ಚಿಕ್ಕಬಳ್ಳಾಪುರ: 'ವಿಧಾನ ಪರಿಷತ್ ಚುನಾವಣೆಯಲ್ಲಿ ಯಾರಿಗೆ ಬೆಂಬಲ ಕೊಡಬೇಕು ಎನ್ನುವ ಬಗ್ಗೆ ಮುಂದಿನ ದಿನಗಳಲ್ಲಿ ನಿರ್ಧರಿಸುತ್ತೇವೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಷತ್ ಚುನಾವಣೆಯ ಆರು ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧಿಸಿದೆ. ಉಳಿದ ಕ್ಷೇತ್ರಗಳಲ್ಲಿ ಯಾವ ಪಕ್ಷವನ್ನು ಗೆಲ್ಲಿಸಬೇಕು ಎನ್ನುವ ನಿರ್ಣಾಯಕ ಪಾತ್ರ ವಹಿಸುವ ಶಕ್ತಿ ಜೆಡಿಎಸ್‌ಗೆ ಇದೆ ಎಂದರು.

'ಕಾಂಗ್ರೆಸ್ ಮತ್ತು ಬಿಜೆಪಿ ಸಖ್ಯ ಮಾಡಿಯೇ ನಾವು ಹಾಳಾಗಿದ್ದೇವೆ. ನಮಗೆ ಯಾರ ಸಹವಾಸವೂ ಬೇಡ. 2023ರ ವಿಧಾನಸಭಾ ಚುನಾವಣೆಯಲ್ಲಿ 123 ಸ್ಥಾನ ಗೆಲ್ಲಬೇಕು ಎನ್ನುವುದು ನಮ್ಮ ಗುರಿ. ಆ ಆಧಾರದಲ್ಲಿ ಎಲ್ಲಿ ಯಾವ ತೀರ್ಮಾನಗಳನ್ನು ಕೈಗೊಳ್ಳಬೇಕೊ ಆ ರೀತಿಯಲ್ಲಿ ತೀರ್ಮಾನಗಳನ್ನು ಕೈಗೊಳ್ಳುತ್ತೇವೆ' ಎಂದು ಹೇಳಿದರು

'ಅಭಿವೃದ್ಧಿಯಿಂದಲೇ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲ. ಬಿಜೆಪಿಯವರು ಆಪರೇಷನ್ ಕಮಲ ಮಾಡಿ ಗೆಲುವು ಸಾಧಿಸಿದರು. ಸಿಂದಗಿ ಉಪ ಚುನಾವಣೆಯ ವೇಳೆ ದೇವೇಗೌಡರು ನೀರಾವರಿ ವ್ಯವಸ್ಥೆ ಮಾಡಿದ್ದರಿಂದಲೇ ಅನ್ನ ತಿನ್ನುತ್ತಿದ್ದೇವೆ ಎಂದು ಅಲ್ಲಿನ ಜನರು ಹೇಳಿದರು. ಆ ಕ್ಷೇತ್ರದ 22 ಸಾವಿರ ಕುಟುಂಬಗಳ ಸಾಲ ಮನ್ನಾ ಮಾಡಿದ್ದೇನೆ. ಹೀಗಿದ್ದರೂ ನಮ್ಮ ಪಕ್ಷದ ಅಭ್ಯರ್ಥಿ ಪಡೆದಿದ್ದು 4 ಸಾವಿರ ಮತಗಳು' ಎಂದು ಹೇಳಿದರು.

ಸೀಟು ಹಂಚಿಕೆ ಫಲಿತಾಂಶ ಮುಂದೂಡಿದ ಕೆಇಎ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಮೊದಲ ಸುತ್ತಿನ ಸೀಟುಗಳ ಹಂಚಿಕೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಮುಂದೂಡಿದೆ.

ಈ ಮೊದಲು ನಿಗದಿಪಡಿಸಿದ ವೇಳಾಪಟ್ಟಿ ಅನ್ವಯ ಶುಕ್ರವಾರ ಸಂಜೆ ಮೊದಲ ಸುತ್ತಿನ ಸೀಟುಗಳ ಹಂಚಿಕೆಯನ್ನು ಪ್ರಕಟಿಸಬೇಕಾಗಿತ್ತು.

ಆದರೆ, ನ.25ರಂದು ಅಧಿಸೂಚನೆ ಹೊರಡಿಸಿರುವ ಸರ್ಕಾರ, ಎರಡು ಎಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳನ್ನು ಕಡಿಮೆ ಮಾಡಿದೆ ಮತ್ತು ಒಂದು ಎಂಜಿನಿಯರಿಂಗ್ ಕಾಲೇಜಿನ ಎಲ್ಲ ಸೀಟುಗಳನ್ನು ಹಿಂಪಡೆದಿದೆ. ಜತೆಗೆ ಆಡಳಿತ ಮಂಡಳಿಗಳು ಸರ್ಕಾರಕ್ಕೆ ಕೆಲವು ಸೀಟುಗಳನ್ನು ನೀಡಿವೆ. ಹೀಗಾಗಿ, ಈ ಎಲ್ಲ ಸೀಟುಗಳ ಪರಿಷ್ಕರಣೆ ನಡೆಸಿ ಮೊದಲನೇ ಸುತ್ತಿನ ಸೀಟುಗಳ ಹಂಚಿಕೆಯ ಫಲಿತಾಂಶವನ್ನು ಶನಿವಾರ ಬೆಳಿಗ್ಗೆ 11ಕ್ಕೆ ಪ್ರಕಟಿಸುವುದಾಗಿ ಕೆಇಎ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ http://kea.kar.nic.in ವೀಕ್ಷಿಸಬಹುದು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	13,481	13,272
ಹಾರಂಗಿ	2,859	2,857.46	603	766
ಕಬಿನಿ	2,284	2,283.95	1,700	700
ಹೇಮಾವತಿ	2,922	2,913.32	3,307	630
ಲಿಂಗನಮಕ್ಕಿ	1,819	1,812.95	2154	-
ಸೂಪಾ (ಮೀ)	564	555.06	533	1,399
ಮಾಣಿ	594.36	586.66	-	-
ತುಂಗಭದ್ರಾ	1,633	1,632.99	20,957	717
ಮಲಪ್ರಭಾ	2,079.50	2,077.00	769	769
ಘಟಪ್ರಭಾ	2,175	2,165.73	1,052	179
ಭದ್ರಾ	186	186	5161	3946
ಆಲಮಟ್ಟಿ (ಮೀ)	519.60	518.48	7,797	830
ನಾರಾಯಣಪುರ (ಮೀ)	492.25	492.03	1,080	430

* ನೆಲಮಟ್ಟದಿಂದ

'ಲಂಚ ಪಡೆದವರ ಹೆಸರು ಬಹಿರಂಗಪಡಿಸಿ'



ಸಿ.ಸಿ.ಪಾಟೀಲ

ಬೆಂಗಳೂರು: 'ಗುತ್ತಿಗೆದಾರರಿಂದ ಶೇಕಡ 40ರಷ್ಟು ಲಂಚ ಪಡೆದವರ ಹೆಸರನ್ನು ಗುತ್ತಿಗೆದಾರರ ಸಂಘದವರು ದಾಖಲೆ ಸಮೇತ ಬಹಿರಂಗಪಡಿಸಬೇಕು' ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಒತ್ತಾಯಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಗುತ್ತಿಗೆದಾರರ ಸಂಘದವರ ದೂರಿನಲ್ಲಿ ಖಚಿತವಾದ ವಿವರಗಳಿಲ್ಲ. ಶೇ 40ರಷ್ಟು ಲಂಚ ಕೊಡಲಾಗುತ್ತಿದೆ ಎಂಬ ದೂರನ್ನು ಯಾರು ಒಪ್ಪಲು ಸಾಧ್ಯ? ನಿಜವಾಗಿಯೂ ಹಣ ಕೊಟ್ಟಿದ್ದರೆ ಗುತ್ತಿಗೆದಾರರೇ ಬಹಿರಂಗಪಡಿಸಲಿ. ನಾನಾಗಲೀ, ಇತರ ಸಚಿವರಾಗಲೀ ಲಂಚ ಪಡೆದಿದ್ದರೆ ಹೇಳಲಿ' ಎಂದು ಆಗ್ರಹಿಸಿದರು.

ಗುತ್ತಿಗೆದಾರರ ಸಂಘದ ದೂರಿನ ಹಿಂದೆ ಯಾವುದೋ ಷಡ್ಯಂತ್ರ ಇದ್ದಂತೆ ಕಾಣಿಸುತ್ತಿದೆ. ಆರೋಪಕ್ಕೆ ಯಾವ ಆಧಾರಗಳೂ ಇಲ್ಲ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶೇ 10ರಷ್ಟು ಲಂಚ ಪಾವತಿಯಾಗುತ್ತಿದೆ ಎಂದು ಬಿಜೆಪಿ ಆರೋಪಿಸಿತ್ತು. ಅದಕ್ಕೆ ಶೇ 30 ಸೇರಿಸಿ ಈಗ ಆರೋಪ ಮಾಡುತ್ತಿರುವ ಅನುಮಾನ ಇದೆ ಎಂದರು.

ಬಿಳಿಜೋಳಕ್ಕೆ ಲದ್ದಿಹುಳು ಬಾಧೆ, ಸುಳಿರೋಗ

ಒಂದನೇ ಪುಟದಿಂದ...

ಕೊಪ್ಪಳದಲ್ಲಿ ಮೆಕ್ಕೆಜೋಳ ಕೊಯ್ಲಿನ ನಂತರ ಬಿಳಿಜೋಳದ ಬೆಳೆಗಳಿಗೆ ಬಾಧೆ ಕಾಡುತ್ತಿದೆ. ಈಚೆಗೆ ಮಳೆಯಾಗಿದ್ದರಿಂದ ಬಾಧೆ ಹೆಚ್ಚಳವಾಗುವ ಆತಂಕ ರೈತರಲ್ಲಿ ಇದೆ.

ಮೆಕ್ಕೆಜೋಳಕ್ಕೆ ಶಿಲೀಂಧ್ರಬಾಧೆ: ಉತ್ತರ ಕನ್ನಡ ಜಿಲ್ಲೆಯಲ್ಲಿ ಅಕಾಲಿಕ ಮಳೆಯಿಂದಾಗಿ ಶೇ 30ರಷ್ಟು ಮೆಕ್ಕೆಜೋಳ ಫಸಲು ಶಿಲೀಂಧ್ರಬಾಧೆಗೆ ತುತ್ತಾಗಿದೆ. ಶಿರಸಿ ತಾಲ್ಲೂಕಿನ ಬನವಾಸಿ ಹೋಬಳಿ, ಮುಂಡಗೋಡ, ಯಲ್ಲಾಪುರದ ಕಿರವತ್ತಿ ಭಾಗ ಮತ್ತು ಹಳಿಯಾಳ ತಾಲ್ಲೂಕಿನಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತದೆ. ನವೆಂಬರ್ ಆರಂಭದಲ್ಲಿ ಬಹುತೇಕ ರೈತರು ಬೆಳೆ ಕಟಾವು ಮಾಡಿದ್ದರು. ಜೋಳದ ಕಾಳುಗಳನ್ನು ಒಣಗಿಸಲು ಮಳೆ ಅಡ್ಡಿಪಡಿಸಿದ್ದು, ಹೆಚ್ಚಿನ ತೇವಾಂಶದ ಕಾರಣ ಕಾಳುಗಳು ಹಾಳಾಗಿವೆ.

ಬನವಾಸಿ ಭಾಗದಲ್ಲಿ ಹಲವು ರೈತರು ಮಳೆಯ ಕಾರಣ ಕಟಾವಿಗೆ ವಿಳಂಬ ಮಾಡಿದ್ದು ನೀರಿನಲ್ಲಿ ನೆನೆದ ಜೋಳದ ತೆನೆಗಳು ಮೊಳಕೆಯೊಡೆದು ಗಿಡದಲ್ಲೇ ಹಾಳಾಗಿವೆ.

ಸಂಗ್ರಹದಲ್ಲೇ ಮೊಳಕೆ...: ಬೆಳಗಾವಿ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಮೆಕ್ಕೆಜೋಳಕ್ಕೆ ಲದ್ದಿ ಹುಳು ಬಾಧೆ ಕಾಣಿಸಿಕೊಂಡಿದೆ. ಸವದತ್ತಿ ತಾಲ್ಲೂಕಿನ ಹಂಚಿನಾಳ ಗ್ರಾಮದಲ್ಲಿ ಕಟಾವು ಮಾಡಿ ರಾಶಿ ಹಾಕಿದ್ದ ಮೆಕ್ಕೆಜೋಳ ಮಳೆಯಿಂದ ಹಾನಿಗೀಡಾಗಿದೆ. ಜಿಲ್ಲೆಯಲ್ಲಿ ಸುಮಾರು 6 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದ ಮೆಕ್ಕೆಜೋಳ ಸಂಗ್ರಹದಲ್ಲೇ ಮೊಳಕೆ ಒಡೆದಿದೆ.

ಗದಗ ಜಿಲ್ಲೆಯಲ್ಲಿ 4,279 ಹೆಕ್ಟೇರ್‌ನಷ್ಟು ಮೆಕ್ಕೆಜೋಳಕ್ಕೆ ಹಾನಿಯಾಗಿದೆ. ಜಮೀನುಗಳ ನೀರು ನಿಂತು ಬೆಳೆ ಕೊಳೆಯುತ್ತಿವೆ. ಲಕ್ಷ್ಮೇಶ್ವರ ತಾಲ್ಲೂಕಿನ ಎರೆಭೂಮಿಯಲ್ಲಿ ಬಿತ್ತನೆಯಾಗಿದ್ದ 1,500 ಹೆಕ್ಟೇರ್‌ನಲ್ಲಿ ಜೋಳ ಹೊಲದಲ್ಲಿ ನೀರು ನಿಂತು ಶೇ 50ರಷ್ಟು ಹಾಳಾಗಿದೆ. ವಿಜಯನಗರ ಜಿಲ್ಲೆಯಲ್ಲಿ 280 ಹೆಕ್ಟೇರ್ ನಷ್ಟು ಪ್ರದೇಶದಲ್ಲಿ ಮೆಕ್ಕೆಜೋಳ ಹಾಳಾಗಿದೆ.

ಜೋಳ, ಮೆಕ್ಕೆಜೋಳಕ್ಕೆ ಲದ್ದಿ ಹುಳು ಬಾಧೆ ಕಾಣಿಸಿಕೊಂಡಲ್ಲಿ ಇಮಾಮೆಕ್ಟಿನ್ ಬೆಂಜೋಯೇಟ್ 0.5 ದ್ರಾವಣವನ್ನು ಒಂದು ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು

ಎಸ್.ಬಿ.ಕೊಂಗುವಾಡ, ಕೃಷಿ ಇಲಾಖೆ ಉಪನಿರ್ದೇಶಕ, ಬಾಗಲಕೋಟೆ

ಮೊಳಕೆಯೊಡೆದ ತೊಗರಿಕಾಳು: ಮುಂಗಾರು ಹಂಗಾಮಿನ ತೊಗರಿ ಈಗ ಬಹುತೇಕ ಕಟಾವಿನ ಹಂತಕ್ಕೆ ಬಂದಿವೆ. ಈ ವಾರದಲ್ಲಿಯೇ ಒಕ್ಕಲು ಮಾಡಲು ಬೆಳೆಗಾರರು ಸಿದ್ಧತೆ ನಡೆಸಿದ್ದರು. ಆದರೆ ಎಡೆಬಿಡದೆ ಸುರಿದ ಮಳೆಯಿಂದ ತೊಗರಿ ಕಾಯಿ ತೇವಗೊಂಡು ಉಬ್ಬಿ ಸಿಪ್ಪೆ ಸುಲಿದು ಕಾಳು ಹೊರಬಂದು ಮೊಳಕೆಯೊಡೆದಿದೆ.

'ಇದುನಮಗೆವರ್ಷದತುತ್ತಿನಚೀಲ. ಕೈಗೆ ಬಂದ ತುತ್ತು ಬಾಯಿಗೆ ಬಾರದಾಗಿದೆ' ಎಂದು ಹುನಗುಂದ ತಾಲ್ಲೂಕಿನ ಚಿತ್ತವಾಡಗಿಯ ಸಿದ್ದಣ್ಣ ಗದ್ದನಕೇರಿ ಎಂದು ಅಳಲು ತೋಡಿಕೊಂಡರು.

ಮಳೆ ಕೊರತೆ: ಒಣಗುತ್ತಿದೆ ತೊಗರಿ...

ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ತೆಲಸಂಗ ಹೋಬಳಿ ಭಾಗದಲ್ಲಿ 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗಿದೆ. ಅಲ್ಲಿ ಮಳೆ ಕೊರತೆಯಿಂದ ಬೆಳೆ ಒಣಗುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಮಳೆ ಹಾಗೂ ಶೀತಗಾಳಿಯ ವಾತಾವರಣದಿಂದ ಜೋಳ ಹಾಗೂ ಕಡಲೆ ಬೆಳೆಗೆ ಒಳ್ಳೆಯದಾಗಿದೆ. ಬಹುತೇಕ ಕಡೆ ಬೆಳೆ ಚೆನ್ನಾಗಿ ಇದೆ ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕಿ ತಾರಾಮಣಿ ಹೇಳುತ್ತಾರೆ.

ಬಾಗಲಕೋಟೆ ಜಿಲ್ಲೆಯಲ್ಲಿ ಕೃಷಿ ಇಲಾಖೆ ಪ್ರಾಥಮಿಕ ಅಂದಾಜಿನಂತೆ 21,541 ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಹಾಳಾಗಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ.

'ಹಸಿರು ಕಾಯಿಕೊರಕ' ಬಾಧೆ...

ಬೀದರ್ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಕಳೆದ 15 ದಿನಗಳಿಂದ ತೊಗರಿಗೆ 'ಹಸಿರು ಕಾಯಿಕೊರಕ' ಬಾಧೆ ಕಂಡು ಬಂದಿದೆ. ಹವಾಮಾನದಲ್ಲಿ ನಿರಂತರ ತೇವಾಂಶದಿಂದ ಈ ಬಾಧೆ ಕಾಡುತ್ತಿದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.

ಬೀದರ್ ತಾಲ್ಲೂಕಿನ ಕೊಳಾರ, ಭಾಲ್ಕಿ ತಾಲ್ಲೂಕಿನ ಹಾಲಹಳ್ಳಿ, ಹುಮನಾಬಾದ್ ತಾಲ್ಲೂಕಿನ ಸಿಂದಬಂದಗಿ, ನಿರ್ಣಾ, ವಿಠ್ಠಲಪುರ, ಬೇಮಳಖೇಡದಲ್ಲಿ ಬಾಧೆ ಕಾಣಿಸಿದೆ. ಹಾನಿ ಪ್ರಮಾಣದ ಸಮೀಕ್ಷೆಗೆ ತಂಡ ರಚಿಸಿದ್ದು, ಕಾರ್ಯಾರಂಭ ಮಾಡಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮಕ್ಕಳ ದತ್ತು ಸ್ವೀಕಾರ: ಕರಡು ನಿಯಮ ಸಿದ್ಧ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮಕ್ಕಳನ್ನು ದತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಪೋಷಕರ ಪೂರ್ವಾಪರ ವಿಚಾರಣೆ ನಡೆಸುವ ನಿಟ್ಟಿನಲ್ಲಿ ನ್ಯಾಯಾಲಯ ನೀಡಿರುವ ನಿರ್ದೇಶನದಂತೆ ಕರಡು ನಿಯಮಗಳನ್ನು ಸಿದ್ಧಪಡಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಲೆಟ್ಸ್‌ಕಿಟ್' ಪ್ರತಿಷ್ಠಾನ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲೆ ಎಚ್.ವೀಣಾ, 'ಮಕ್ಕಳನ್ನು ದತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ 2021ರ ಆಗಸ್ಟ್ 19ರಂದು ಹಲವು ನಿರ್ದೇಶನಗಳನ್ನು ನೀಡಿತ್ತು. ಅದರಲ್ಲಿ ಬಾಲ ನ್ಯಾಯ ಕಾಯ್ದೆಯ ಕಲಂ 11ರ ಅಡಿ ನಿಯಮಗಳನ್ನು ರೂಪಿಸುವಂತೆ ಆದೇಶಿಸಲಾಗಿತ್ತು. ಈ ಆದೇಶದನ್ವಯ ಕರಡು ನಿಯಮಗಳನ್ನು ಸಿದ್ಧಪಡಿಸಲಾಗಿದ್ದು ಅವುಗಳನ್ನು ಅಂತಿಮಗೊಳಿಸಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗುವುದು' ಎಂದರು.

ಇದಕ್ಕೆ ಪ್ರತಿಷ್ಠಾನದ ಪರ ವಕೀಲ ರಮೇಶ್ ಪುತ್ತಿಗೆ, 'ಕರಡು ನಿಯಮಗಳನ್ನು ಅರ್ಜಿದಾರರಿಗೆ ಮತ್ತು ಬಾಲ ನ್ಯಾಯ ಮಂಡಳಿಗಳಿಗೆ ನೀಡಿದರೆ ಏನಾದರೂ ತಿದ್ದುಪಡಿಗಳಿದ್ದರೆ ಸೂಚಿಸಬಹುದು' ಎಂದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಅಧಿವೇಶನ ಆರಂಭವಾಗಲಿದೆಯಲ್ಲಾ ಅಲ್ಲಿ ಒಪ್ಪಿಗೆ ಪಡೆದುಕೊಳ್ಳಿ' ಎಂದಿತು.


ಇದೇ ವೇಳೆ ಸರ್ಕಾರಿ ವಕೀಲೆ ವೀಣಾ ಅವರು, 'ಮೈಸೂರಿನ ಜೀವನ್ ಜ್ಯೋತಿ ಟ್ರಸ್ಟ್‌ನಲ್ಲಿ 12 ದಿನದ ಹೆಣ್ಣು ಶಿಶುವನ್ನು ಪೋಷಕರು ಬಿಟ್ಟು ಹೋದ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ನ್ಯಾಯಾಲಯದ ಆದೇಶದಂತೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ವಿದ್ವಾಂಸ ನಾರಾಯಣಾಚಾರ್ಯ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡು-ನುಡಿ, ಸಂಸ್ಕೃತಿ, ಸಂಪ್ರದಾಯ ಮತ್ತು ಸಂಸ್ಕಾರಗಳ ಬಗ್ಗೆ ಅಧಿಕಾರಯುತವಾಗಿ ಮಾತನಾಡುತ್ತಿದ್ದ, ವಿದ್ವತ್‌ಪೂರ್ಣ ಬರವಣಿಗೆಯ ಮೂಲಕ ಭಾರತೀಯ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ್ದ ಬಹುಭಾಷಾ ವಿದ್ವಾಂಸ ಕೆ.ಎಸ್. ನಾರಾಯಣಾಚಾರ್ಯ (89) ಅವರು ಶುಕ್ರವಾರ ಬೆಳಗಿನ ಜಾವ ನಿಧನರಾದರು.

ಕನ್ನಡ, ಇಂಗ್ಲಿಷ್, ಸಂಸ್ಕೃತ ಹಾಗೂ ತಮಿಳು ಭಾಷೆಯಲ್ಲಿ 'ರಾಮಾಯಣ'ದ ಬಗ್ಗೆ ಉಪನ್ಯಾಸ ನೀಡುತ್ತಿದ್ದ ಅವರು, 'ರಾಮಾಯಣಾಚಾರ್ಯರು' ಎಂದೇ ಜನಜನಿತರಾಗಿದ್ದರು. ಮಹಾಭಾರತ, ರಾಮಾಯಣ, ವೇದ, ಸಂಸ್ಕೃತಿ ಮತ್ತು ಸನಾತನ ಪರಂಪರೆಯನ್ನು ತಮ್ಮ ಬರಹಗಳ ಮೂಲಕ ಹೊಸ ತಲೆಮಾರಿಗೆ ಪರಿಚಯಿಸಿದ್ದರು.



ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಅವರು, ಸಂಜಯನಗರದಲ್ಲಿರುವ ತಮ್ಮ ನಿವಾಸದಲ್ಲಿ ಮೃತಪಟ್ಟರು. ಅವರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ಶುಕ್ರವಾರ ಮಧ್ಯಾಹ್ನ 1 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಸಂಜೆ 5 ಗಂಟೆಗೆ ಚಾಮರಾಜಪೇಟೆಯ ಟಿ.ಆರ್.ಮಿಲ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಬೆಂಗಳೂರಿನ ಕನಕನಹಳ್ಳಿಯಲ್ಲಿ 1933ರಲ್ಲಿ ಕೆ.ಎನ್. ಶ್ರೀನಿವಾಸ ದೇಶಿಕಾಚಾರ್ ಮತ್ತು ರಂಗನಾಯಕಮ್ಮ ದಂಪತಿಗೆ ಜನಿಸಿದನಾರಾಯಣಾಚಾರ್ಯ ಅವರು, ಮೈಸೂರಿನ ಮಹಾರಾಜ ಕಾಲೇಜಿನಿಂದ ಬಿ.ಎಸ್ಸಿ ಪದವಿ ಪಡೆದಿದ್ದರು. ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ, 'ಡಬ್ಲ್ಯು.ಬಿ. ಯೇಟ್ಸ್ ಮತ್ತು ಟಿ.ಎಸ್. ಎಲಿಯೆಟ್ ಅವರ ಕಾವ್ಯದ ಮೇಲೆ ಭಾರತೀಯ ತತ್ವಶಾಸ್ತ್ರದ ಪ್ರಭಾವ' ಎಂಬ ವಿಷಯದ ಮೇಲೆ ಡಾಕ್ಟರೇಟ್ ಪಡೆದಿದ್ದರು.

ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿದ ಅವರು, ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು. ವೇದ ಸಂಸ್ಕೃತಿಯ ಪರಿಚಯ, ರಾಮಾಯಣಸಹಶ್ರೀ, ಗೀತಾರತ್ನನಿಧಿ, ರಾಮಾಯಣ ಪಾತ್ರ ಪ್ರಪಂಚ, ಅಗಸ್ತ್ಯ, ಆಚಾರ್ಯ ಚಾಣಕ್ಯ, ತಿರುಪ್ಪಾವೈ', ತಿರುಮಲೈ, ಸ್ತೋತ್ರರತ್ನಂ, ವಿಶಿಷ್ಟಾದ್ವೈತ ಮೂಲ ಪರಿಕಲ್ಪನೆಗಳು, ವಾಲ್ಮೀಕಿ ಯಾರು?, ಮಹಾಮಾತೆ ಕುಂತಿ ಕಣ್ತೆರೆದಾಗ, ದೇವಕಿಯ ಚಿಂತನೆಗಳು, ಮಹಾ ಪ್ರಸ್ಥಾನ, ಶ್ರೀ ರಾಮಾಯಣದ ಮಹಾ ಪ್ರಸಂಗಗಳು, ಶ್ರೀ ಕೃಷ್ಣ ಮತ್ತು ಮಹಾಭಾರತ ಯುದ್ಧ ಸೇರಿದಂತೆ 180ಕ್ಕೂ ಅಧಿಕ ಕೃತಿ ರಚಿಸಿದ್ದಾರೆ.

ವಿಶ್ವ ರಾಮಾಯಣ ಸಮ್ಮೇಳನದಲ್ಲಿ ಅವರಿಗೆ 'ವಾಲ್ಮೀಕಿ ಪ್ರಶಸ್ತಿ' ನೀಡಲಾಗಿತ್ತು. ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವು ಡಿ.ಲಿಟ್, ರಾಜ್ಯ ಸರ್ಕಾರವು 'ರಾಜ್ಯೋತ್ಸವ ಪ್ರಶಸ್ತಿ' ನೀಡಿದೆ. ವಿದ್ವನ್ಮಣಿ, ವೇದಭೂಷಣ, ಗಮಕ ರತ್ನಾಕರ, ಕರ್ನಾಟಕ ಕಲಾಶ್ರೀ, ಉಪನ್ಯಾಸ ಕೇಸರಿ ಎಂಬ ಬಿರುದುಗಳು ಸಂದಿವೆ.

ಮೊದಲರ್ಧ ಗಿಮಿಕ್ಕು; ಎರಡನೇ ಅರ್ಧ ಪಿಕಪ್ಪು!

ನಾವು ನೋಡಿದ ಸಿನಿಮಾ

ಸಖತ್ (ಕನ್ನಡ)

- **ನಿರ್ಮಾಣ: ನಿಶಾ ವೆಂಕಟ್ ಕೋಣಂಕಿ**
- **ನಿರ್ದೇಶನ: ಸುನಿ**
- **ತಾರಾಗಣ: ಗಣೇಶ್, ಸುರಭಿ, ನಿಶ್ವಿಕಾ ನಾಯ್ಡು, ರಂಗಾಯಣ ರಘು, ಮಾಳವಿಕಾ, ಶೋಭರಾಜ್**

ಅಂಧರ ವಾಕಿಂಗ್ ಸ್ಟಿಕ್‌ನಲ್ಲಿ ಹೊಡೆದರೆ ಗಿರಗಿರನೆ ತಿರುಗಿ ಖಳರು ಡ್ರಮ್‌ಗೆ ಬಡಿದುಕೊಂಡು ಬೀಳುತ್ತಾರೆಯೇ ಎಂಬ ತರ್ಕ ಕೇಳಲು ಹೋಗಬಾರದು. ಈಗಲೂ ಗೋಲ್ಡನ್ ತಾರೆಯ ಬಿರುದನ್ನೇ ಉಜ್ಜುತ್ತಾ ಹಾಡನ್ನು ಯಾಕೆ ಬರೆಯಬೇಕು ಎಂದೆನ್ನುವ ಗೊಡವೆ ಬೇಡ. ಎರಡನೇ ಅರ್ಧದ ಭಾವುಕ, ಆಸಕ್ತಿಕರ ಕಥೆಯನ್ನು ನಿಲ್ಲಿಸಿಕೊಳ್ಳಲು ಏರುಪೇರು ಗ್ರಾಫುಗಳ ಮೊದಲರ್ಧ ಬೇಕಿತ್ತೆ ಎಂಬ ಪ್ರಶ್ನೆಯನ್ನೂ ನಮ್ಮಷ್ಟಕ್ಕೆ ಕೇಳಿಕೊಳ್ಳಬಹುದು.

'ಸಖತ್' ಎಂಬ ಶೀರ್ಷಿಕೆಯೇ ಸುಖಾಸುಮ್ಮನೆ ರಂಜಿಸುವ, ಸಸ್ಪೆನ್ಸನ್ನು ಭುಂಜಿಸುವ ಉಮೇದನ್ನು ಹೇಳುತ್ತದೆ. ಶೀರ್ಷಿಕೆಯನ್ನು ಹೀಗಿಟ್ಟಮಾತ್ರಕ್ಕೆ ಎಲ್ಲವೂ 'ಸಖತ್' ಆಗಲಾರದು. ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಹೇಳಿದ್ದಂತೆ ಸಖತ್ ಎನ್ನುವುದು ಸಕಾರಾತ್ಮಕ ಗುಣವಿಶೇಷಣವೇನಲ್ಲ. ಹಿಂದೆ 'ಸಖತ್ ಜ್ವರ' ಎಂದು ಇದನ್ನು ಬಳಸುತ್ತಿದ್ದರು. ಹೊಸ ಕಾಲದಲ್ಲಿ ಅದರ ಧ್ವನಿಯೂ ಬದಲಾಗಿರುವುದರಿಂದ ಈ ಚಿತ್ರವನ್ನು ಅಂತೆಯೇ ಗ್ರಹಿಸಬೇಕಿದೆ.

ನಾಯಕನಿಗೆ ಕಣ್ಣಿದೆ. ಆದರೂ ಅಂಧನಾಗಲು ಸುಂದರಿಯ ಮೇಲಿನ ಮೋಹವೇ ಇಂಬು. ಅದೇ ಮುಂದೆ ಅವನೊಂದು ಬಲೆಯೊಳಗೆ ಸಿಲುಕಲು, ಅದರಲ್ಲಿಯೇ ಭಾವುಕ ಪಯಣವ ದಾಟಲು ಎಡೆಮಾಡಿಕೊಡುತ್ತದೆ. ಮನರಂಜನೆಯನ್ನು ಅಲ್ಲಲ್ಲಿ ಇಡುತ್ತಾ, ಕೋರ್ಟ್ ಡ್ರಾಮಾದ ದುರ್ಬಲ ಎಪಿಸೋಡುಗಳನ್ನು ಕೊಲಾಜ್ ಮಾಡಿ, ಸಾಮಾಜಿಕ ಕಳಕಳಿಯ ಭಾವುಕತೆಯನ್ನೂ ಬೆಸೆದಿರುವ ಚಿತ್ರವಿದು. ಕೊನೆಯಲ್ಲೊಂದು ಅಚ್ಚರಿ ತೆರೆದುಕೊಳ್ಳುವಂಥ ಸಸ್ಪೆನ್ಸ್.



'ಸಖತ್' ಚಿತ್ರದ ದೃಶ್ಯ

ನಿರ್ದೇಶಕ ಸುನಿ ಅವರಿಗೆ ನಾಯಕನನ್ನು ಕುರುಡನನ್ನಾಗಿ ನಟಿಸುವಂತೆ ಮಾಡಲು ಸಕಾರಣವೊಂದನ್ನು ಸೃಷ್ಟಿಸಬೇಕಿದೆ. ಅದು ತಮಾಷೆಗೆ ಶುರುವಾಗುವುದು ಆಮೇಲೆ ಪಡೆದುಕೊಳ್ಳುವ ತಿರುವು ಆಸಕ್ತಿಕರ. ಹೀಗಾಗಿ ಅವರು ಸಕಾರಣವನ್ನು ಬಲವಾಗಿಸಲು ಹೋಗುವುದಿಲ್ಲ. ಅದನ್ನೊಂದು ಟೈಂಪಾಸ್ ಸರಕಿನಂತೆ ತೇಲಿಬಿಡುತ್ತಾರೆ. ಟಿ.ವಿ. ರಿಯಾಲಿಟಿ ಷೋವನ್ನು ವ್ಯಂಗ್ಯ ಮಾಡಹೊರಟ ಅವರಿಗೆ ತಮ್ಮ ವಸ್ತುವೂ ತೆಳುವಾಗಿಬಿಟ್ಟಿದೆ ಎನ್ನುವುದು ಅರಿವಾದಂತಿಲ್ಲ.

ಮೊದಲರ್ಧ ಎಲ್ಲೆಲ್ಲಿಯೋ ಹಾಡುಗಳು ಬಂದು, ಆಗೀಗ ಕಚಗುಳಿ ಇಡುವ ಸನ್ನಿವೇಶಗಳು ಮೂಡಿ ವಿಪರೀತ ಹಂಪ್‌ಗಳಿರುವ ರಸ್ತೆಯಲ್ಲಿನ ಪ್ರಯಾಣದಂತೆನಿಸುತ್ತದೆ. ನಟಿ ನಿಶ್ವಿಕಾ ನಾಯ್ಡು ಅವರ ನಿಯಂತ್ರಿತವೂ ಘನತೆಯದ್ದೂ ಆದ ಅಭಿನಯದ ಬೋನಸ್ ಸಿಗುವುದು ಎರಡನೇ ಅರ್ಧದಲ್ಲಿ. ಚೂರು ಚೂರೇ ವೈವಿಧ್ಯಮಯ ರಂಜನೆಯೂ ಆ ಭಾಗದಲ್ಲೇ ಒದಗುತ್ತದೆ. ಇದಕ್ಕಾಗಿ ಮೊದಲರ್ಧವನ್ನು ಹೆಚ್ಚೇ ಸಹಿಸಿಕೊಳ್ಳಬೇಕೆನ್ನುವುದು ಚಿತ್ರದ ಮಿತಿ.

ನಾಯಕ ಗಣೇಶ್‌ಗೆ ಈ ಪಾತ್ರ ಲೀಲಾಜಾಲ. ಸಂತೋಷ್ ರೈ ಪಾತಾಜೆ ಕ್ಯಾಮೆರಾ ಕೆಲಸದ ವೃತ್ತಿಪರತೆ ಎದ್ದುಕಾಣುತ್ತದೆ. ಜೂಡ ಸ್ಯಾಂಡಿ ಸಂಗೀತದ ರ್‍ಯಾಪ್ ರಾಗ ಕಾಲುಗಳ ಕುಣಿಸುವಂತೆ ಮಾಡುತ್ತದೆನ್ನುವುದೂ ಬೋನಸ್ಸು. ಸಿದ್ ಶ್ರೀರಾಮ್ ಪಲುಕುಗಳು ಚೆಂದವಾದರೂ ಕನ್ನಡದ ಉಚ್ಚಾರ ಕರ್ಣಾನಂದವಲ್ಲ. ಸುರಭಿ ಮುಖದಲ್ಲಿ ಅಭಿನಯದ ಗೆರೆಗಳು ಮೂಡಬೇಕಷ್ಟೆ.

'ಕಾಬಿಲ್', 'ಅಂಧಾಧುನ್' ರೀತಿಯ ಗಟ್ಟಿಯಾದ ಅಂಧರ ಆಟದ, ಮಾಟದ ಕಥನಗಳ ಜತೆಗೆ ತಕ್ಕಡಿಯಲ್ಲಿಟ್ಟರೆ ಇದು 'ಸಖತ್' ಏನಲ್ಲ ಬಿಡಿ.

ವಿಶಾಖ ಎನ್.

ಕಸಾಪ: 'ಒಬ್ಬರಿಗೆ ಒಮ್ಮೆಯುಷ್ಟೇ ಅಧ್ಯಕ್ಷಗಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕ, ಜಿಲ್ಲಾ ಘಟಕ ಮತ್ತು ತಾಲ್ಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ಒಮ್ಮೆ ಆಯ್ಕೆಯಾದವರು ಮತ್ತೆ ಆ ಸ್ಥಾನಕ್ಕೆ ಏರುವುದು ಸರಿಯಲ್ಲ. ಈ ಬಗ್ಗೆ ಪರಿಷತ್ತಿನ ನಿಬಂಧನೆಗಳಿಗೆ ಆಮೂಲಾಗ್ರ ತಿದ್ದುಪಡಿ ತರಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದರು.

ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಲ್ಲಾ ಘಟಕ ಮತ್ತು ತಾಲ್ಲೂಕು ಘಟಕಗಳಲ್ಲಿ ಹೊಸಬರಿಗೂ ಅವಕಾಶಗಳು ಸಿಗಬೇಕು. ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೂ ಚುನಾವಣೆ ನಡೆಸುವ ವ್ಯವಸ್ಥೆ ರೂಪಿಸಬೇಕು. ಡಿ.4ರಂದು ಪ್ರಥಮ ಕಾರ್ಯಕಾರಿಣಿ ಸಭೆ ನಡೆಸಿ, ಈ ಬಗ್ಗೆ ಚರ್ಚಿಸಲಾಗುವುದು. ನಿಬಂಧನೆ ಬದಲಾವಣೆಗೆ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು' ಎಂದರು.

'ಕಾರ್ಯಕಾರಿ ಸಮಿತಿಯನ್ನು ಸಶಕ್ತಿಕರಣ ಮಾಡಲಾಗುವುದು. ಈಗ ಇರುವ 49 ಸ್ಥಾನಗಳ ಜೊತೆಗೆ 26 ಸ್ಥಾನಗಳನ್ನು ಸೇರ್ಪಡೆ ಮಾಡಲಾಗುವುದು. ಸದಸ್ಯತ್ವ ಶುಲ್ಕವನ್ನು ₹ 250ಕ್ಕೆ ಇಳಿಕೆ ಮಾಡಿ, ಐದು ವರ್ಷಗಳ ಅವಧಿಯಲ್ಲಿ ಒಂದು ಕೋಟಿ ಜನರನ್ನು ಸದಸ್ಯರನ್ನಾಗಿ ಮಾಡಲಾಗುವುದು. ಶುಲ್ಕ ಇಳಿಕೆ ಬಗ್ಗೆ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಳ್ಳುತ್ತೇನೆ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಕನ್ನಡ ವಿರೋಧಿ ನಡೆ ತಾಳಿದರೆ ಹೋರಾಟದ ಜೊತೆಗೆ ಕಾನೂನು ಕ್ರಮಕ್ಕೂ ಮುಂದಾಗುತ್ತೇನೆ. ನಾನು ಯಾವುದೇ ಪಂಥಕ್ಕೆ ಸೇರಿದವನಲ್ಲ' ಎಂದು ಹೇಳಿದರು.



ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿ ಎಸ್‌. ರಂಗಪ್ಪ ಅವರು ಮಹೇಶ ಜೋಶಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ವಿ. ಸುನಿಲ್ ಕುಮಾರ್ ಮತ್ತು ಮನು ಬಳಿಗಾರ್ ಇದ್ದರು – ಪ್ರಜಾವಾಣಿ ಚಿತ್ರ

ಮಹೇಶ ಜೋಶಿ ಅಧಿಕಾರ ಸ್ವೀಕಾರ

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) 26ನೇ ಅಧ್ಯಕ್ಷರಾಗಿ ಮಹೇಶ ಜೋಶಿ ಶುಕ್ರವಾರ ಅಧಿಕಾರ ಸ್ವೀಕರಿಸಿದರು.

ಪರಿಷತ್ತಿನ ಕೃಷ್ಣರಾಜ ಪರಿಷನ್ಮಂದಿರದಲ್ಲಿ ನಡೆದ ಸಮಾರಂಭದಲ್ಲಿ ಆಡಳಿತಾಧಿಕಾರಿ ಎಸ್‌. ರಂಗಪ್ಪ ಅವರು ಕನ್ನಡದ ಧ್ವಜ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಇದ್ದರು.

ಜಾನಪದ ಕಲಾ ತಂಡಗಳು ನೂತನ ಅಧ್ಯಕ್ಷರನ್ನು ಬರಮಾಡಿಕೊಂಡವು. 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ದೊಡ್ಡರಂಗೇಗೌಡ, ಕಸಾಪ ಮಾಜಿ ಅಧ್ಯಕ್ಷ ಹಂ.ಪ. ನಾಗರಾಜಯ್ಯ, ಮೊದಲಾದವರಿದ್ದರು.

ಉಡುಗೊರೆ ಕೊಟ್ಟವರ ವಿರುದ್ಧ ಕ್ರಮ

'ಮೂಗುತಿ ಉಡುಗೊರೆ ಕೊಟ್ಟವರ ವಿರುದ್ಧ ಕ್ರಮ ಜರುಗಿಸುವ ಬಗ್ಗೆ ಕಾರ್ಯಕಾರಿಣಿ ಮುಂದೆ ಪ್ರಸ್ತಾವ ಮಂಡಿಸಲಾಗುವುದು' ಎಂದು ಮಹೇಶ್ ಜೋಶಿ ಹೇಳಿದರು.

'ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದವರು ಚುನಾವಣೆ ನೀತಿ ಸಂಹಿತೆ ಜಾರಿಯಾದ ಬಳಿಕ ಆದರ್ಶ ದಂಪತಿ ಕಾರ್ಯಕ್ರಮ ನಡೆಸಿ, ಮೂಗುತಿ ಸೇರಿದಂತೆ ಕೆಲವೊಂದು ಉಡುಗೊರೆ ನೀಡಿದರು. ಇದಕ್ಕೆ ಸಾಹಿತ್ಯ ಪರಿಷತ್ತಿನ ಲಾಂಛನವನ್ನೂ ಬಳಸಿಕೊಂಡಿದ್ದರು. ಕಸಾಪ ನಿಬಂಧನೆಗಳ ವಿರುದ್ಧ ನಡೆದುಕೊಂಡವರನ್ನು ಮೂರು ವರ್ಷ ಅಮಾನತು ಮಾಡುವ ಬಗ್ಗೆ ಕಾರ್ಯಕಾರಿಣಿಯಲ್ಲಿ ಪ್ರಸ್ತಾಪಿಸಲಾಗುವುದು' ಎಂದರು.

ಶಾಂತಗೌಡ ಖಾತೆಯಲ್ಲಿ ₹ 50 ಲಕ್ಷ

ಬೆಂಗಳೂರು: 'ಲೋಕೋಪಯೋಗಿ ಇಲಾಖೆಯ ಜೇವರ್ಗಿ ಉಪ ವಿಭಾಗದ ಕಿರಿಯ ಎಂಜಿನಿಯರ್ ಶಾಂತಗೌಡ ಬಿರಾದಾರ ಅವರ ಬ್ಯಾಂಕ್ ಖಾತೆಗಳಲ್ಲಿ ₹ 50 ಲಕ್ಷ ಪತ್ತೆಯಾಗಿದೆ' ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಎಸಿಬಿ ದಾಳಿ ನಡೆಸಿದಾಗ, ಅವರ ಮನೆಯ ಪ್ಲಂಬಿಂಗ್ ಪೈಪ್‌ನಲ್ಲಿ ₹13 ಲಕ್ಷ ಸೇರಿದಂತೆ ಒಟ್ಟು ₹54 ಲಕ್ಷ ನಗದು ಪತ್ತೆಯಾಗಿತ್ತು. ಶಾಂತಗೌಡ ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರ ಬಳಿ ₹ 4.15 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿತ್ತು. ಶುಕ್ರವಾರವೂ ಶೋಧ ಮುಂದುವರಿಸಿದ್ದು, ಈವರೆಗೆ ಒಟ್ಟು ₹ 4.65 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಲಾಗಿದೆ.

ಕುಷ್ಠರೋಗ ನಿಯಂತ್ರಣಾಧಿಕಾರಿ ಪೊಲೀಸ್ ವಶಕ್ಕೆ



ಡಾ.ರತ್ನಾಕರ್

ಮಂಗಳೂರು: ಕಚೇರಿಯ ಮಹಿಳಾ ಸಿಬ್ಬಂದಿ ಜೊತೆಗೆ ಅಸಭ್ಯವಾಗಿ ವರ್ತಿಸಿದ ಕುಷ್ಠರೋಗ ನಿಯಂತ್ರಣ ಅಧಿಕಾರಿ ಡಾ. ರತ್ನಾಕರ್ ವಿರುದ್ಧ ನಗರ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಡಾ.ರತ್ನಾಕರ್ ಅವರನ್ನು ಶುಕ್ರವಾರ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

'ಲೈಂಗಿಕ ದೌರ್ಜನ್ಯ ಕುರಿತು ಮಹಿಳಾ ಸಂಘಟನೆಯ ಸದಸ್ಯರೊಬ್ಬರು ನಗರ ಮಹಿಳಾ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಡಾ. ರತ್ನಾಕರ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ.ರತ್ನಾಕರ್ ಕಚೇರಿಯ ಮಹಿಳಾ ಸಿಬ್ಬಂದಿ ಜೊತೆಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎನ್ನಲಾದ ವಿಡಿಯೊಗಳು ವೈರಲ್ ಆಗಿದ್ದು, ಡಾ.ರತ್ನಾಕರ್ ಅವರನ್ನು ನ.8 ರಂದು ಅಮಾನತು ಮಾಡಲಾಗಿದೆ.

ಆಯುಷ್ಮಾನ್ ನೋಡೆಲ್ ಅಧಿಕಾರಿ, ಕುಷ್ಠರೋಗ ನಿಯಂತ್ರಣಾಧಿಕಾರಿಯೂ ಆಗಿದ್ದ ಡಾ.ರತ್ನಾಕರ್ ವಿರುದ್ಧ ಕೆಲ ತಿಂಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ದೂರು ಸಲ್ಲಿಕೆಯಾಗಿತ್ತು. ಆರೋಗ್ಯ ಇಲಾಖೆ ಜಿಲ್ಲಾ ದೂರು ಸಮಿತಿಯಲ್ಲೂ ತನಿಖೆ ನಡೆದಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು.

Sl. No.	Name of the Course	Seats under External Funding Category *
1	Ph.D. Degree in Biophysics	3
2	Ph.D. Degree in Biostatistics	4
3	Ph.D. Degree in Clinical Psychology	19
4	Ph.D. Degree in Clinical Psychopharmacology and Toxicology	3
5	Ph.D. Degree in Human Genetics	3
6	Ph.D. Degree in Mental Health Education	1
7	Ph.D. Degree in Neurochemistry	3
8	Ph.D. Degree in Neuroimaging and Interventional Radiology	9
9	Ph.D. Degree in Neurology	12
10	Ph.D. Degree in Neurological Rehabilitation	2
11	Ph.D. Degree in Neuromicrobiology	3
12	Ph.D. Degree in Neuropathology	3
13	Ph.D. Degree in Neurophysiology	7
14	Ph.D. Degree in Neurovirology	2
15	Ph.D. Degree in Nursing	2
16	Ph.D. Degree in Psychiatric Social Work	15
17	Ph.D. Degree in Psychiatry Ph.D. Degree in History of Psychiatry Ph.D. Degree in Mental Health Rehabilitation	29
18	Ph.D. Degree in Speech Pathology & Audiology	5
19	Ph.D. Degree in Integrative Medicine	2
20	Ph.D. Degree in Psychosocial Support in Disaster Management	2

Post Doctoral Fellowship Programs

Sl. No.	Name of the Course	Total Seats	Seats under Institute Stipendiary Category
1	Postdoctoral Fellowship in Epilepsy	1	1
2	Postdoctoral Fellowship in Movement Disorder	1	1
3	Postdoctoral Fellowship in Neuromuscular Disorder	1	1

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ ಜಲ ಜಾಗೃತಿ • ಗ್ರಾಮೀಣ ಕೆರೆಗಳಿಗೆ ಮರುಜೀವ

ಒತ್ತುವರಿ ತಡೆದ 'ನಮ್ಮೂರು ನಮ್ಮ ಕೆರೆ'!

• ಗುರು ಪಿ.ಎಸ್.

ಬೆಂಗಳೂರು: 'ನಮ್ಮೂರ ಕೆರೆ ಇಷ್ಟು ದೊಡ್ಡದಾಗಿತ್ತು ಎಂಬುದು ನಮಗೇ ಗೊತ್ತಿರಲಿಲ್ಲ...', '1000 ಅಡಿ ಕೊರೆದರೂ ಕೊಳವೆಬಾವಿಯಲ್ಲಿ ನೀರು ಬರುತ್ತಿರಲಿಲ್ಲ, ಈಗ 350 ಅಡಿಗೇ ನೀರು ಸಿಗುತ್ತಿದೆ...' 'ನಮ್ಮೂರ ಕೆರೆ ಕ್ರಿಕೆಟ್ ಮೈದಾನವಾಗಿಬಿಟ್ಟಿತ್ತು, ಈಗ ಮತ್ತೆ ನೀರಿನಿಂದ ತುಂಬಿ ಕೋಡಿ ಬಿದ್ದಿದೆ....'

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಗ್ರಾಮೀಣ ಕೆರೆಗಳ ಪುನಶ್ಚೇತನಕ್ಕಾಗಿ ಹಮ್ಮಿಕೊಂಡಿರುವ 'ನಮ್ಮೂರು ನಮ್ಮ ಕೆರೆ' ಯೋಜನೆಯ ಫಲಾನುಭವಿಗಳು ಹೇಳುವ ಮಾತುಗಳಿವು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ


ರಾಜ್ಯದಲ್ಲಿ 40 ಸಾವಿರಕ್ಕೂ ಹೆಚ್ಚು ಕೆರೆಗಳಿವೆ. ಆದರೆ, ಅವುಗಳಲ್ಲಿ ಬಹುತೇಕ ಕೆರೆಗಳು ಹೂಳು ಮತ್ತು ಒತ್ತುವರಿಯ ಕಾರಣ ಹಾಳಾಗಿವೆ. ಧರ್ಮಸ್ಥಳ ಸಂಸ್ಥೆಯು ರಾಜ್ಯದಲ್ಲಿ ಒಟ್ಟು 367 ಕೆರೆಗಳನ್ನು ಪುನಶ್ಚೇತನಗೊಳಿಸಿದ ನಂತರ, ಅಂತರ್ಜಲ ಮಟ್ಟ ಹೆಚ್ಚಾಗಿದೆಯಲ್ಲದೆ, ಕೆರೆ ಒತ್ತುವರಿ ಪ್ರಕರಣಗಳು ಬಹಳಷ್ಟು ತಗ್ಗಿವೆ.

'ನೀರಾವರಿ ಕೆರೆಗಳ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ಬರುತ್ತದೆ. ಆದರೆ, ಊರಿನ ಕೆರೆಗಳು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತಿದೆ. ಪಂಚಾಯಿತಿಯಲ್ಲಿ ಸಾಕಷ್ಟು ಅನುದಾನವಿರದಿದ್ದರೆ ಇಂತಹ ಕೆರೆಗಳ ಅಭಿವೃದ್ಧಿ ಆಗುವುದೇ ಇಲ್ಲ. ಈ ಕಾರಣ, ಗ್ರಾಮ ಪಂಚಾಯಿತಿಗಳ ಜೊತೆಗೆ ಕೈಜೋಡಿಸಿರುವ ನಾವು ಊರ ಕೆರೆಗಳನ್ನು ಪುನಶ್ಚೇತನಗೊಳಿಸುತ್ತಿದ್ದೇವೆ' ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ತಿಳಿಸಿದರು.

'ಕೆರೆಗಳ ಹೂಳು ಎತ್ತುವ ಕಾರ್ಯವನ್ನು ಧರ್ಮಸ್ಥಳ ಸಂಸ್ಥೆ ಮಾಡಿದರೆ, ಅದನ್ನು ಸಾಗಿಸುವ ಕೆಲಸವನ್ನು ಆಯಾ ಗ್ರಾಮ ಪಂಚಾಯಿತಿಗಳು ಮಾಡುತ್ತಿವೆ. ಧರ್ಮಸ್ಥಳ ಸಂಸ್ಥೆ, ಸ್ಥಳೀಯರ ನೆರವಿನಿಂದ ಸಣ್ಣ ಕೆರೆಗಳನ್ನು, ಸರ್ಕಾರದ ಸಹಭಾಗಿತ್ವದೊಂದಿಗೆ ಕೆರೆ ಸಂಜೀವಿನಿ ಯೋಜನೆಯಡಿ ದೊಡ್ಡ ಕೆರೆಗಳನ್ನು ಪುನಶ್ಚೇತನಗೊಳಿಸುತ್ತಿದೆ' ಎಂದರು.

'ನಮ್ಮೂರಿನ ಕೆರೆ ಚಿಕ್ಕ ಕಟ್ಟೆ ರೀತಿ ಇತ್ತು. ಇಷ್ಟು ವಿಶಾಲವಾಗಿದೆ ಎಂಬುದೇ ಗೊತ್ತಿರಲಿಲ್ಲ. 12 ಎಕರೆ ವಿಸ್ತಾರದ ಕೆರೆಯಲ್ಲಿ ನಾಲ್ಕು ಎಕರೆಯಷ್ಟು ಮಾತ್ರ ನೀರು ಇತ್ತು. ಹೂಳು ಎತ್ತಿ ಪುನಶ್ಚೇತನಗೊಳಿಸಿದ ನಂತರ ಉಳಿದ ಎಂಟು ಎಕರೆಯ ಜಾಗದಲ್ಲಿಯೂ ನೀರು ತುಂಬಿದೆ' ಎಂದು ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಪಟ್ರಾವುತನಹಳ್ಳಿ ಗ್ರಾಮದ ಪುಟ್ಟರಾಜು ಹೇಳಿದರು.

'ನಮ್ಮೂರಿನ ಕೆರೆ ಅಭಿವೃದ್ಧಿಗೊಂಡ ನಂತರ, ಭದ್ರಾ ಮೇಲ್ದಂಡೆ ನೀರು ಹರಿಸಲಾಗುವುದು ಎಂದು ಸರ್ಕಾರ ಹೇಳಿದೆ. ಕೆರೆ ಅಭಿವೃದ್ಧಿಯಾಗದೇ ಇದ್ದರೆ ಇಲ್ಲೊಂದು ಕೆರೆ ಇತ್ತು ಎನ್ನುವುದೇ ತಿಳಿಯುತ್ತಿರಲಿಲ್ಲ' ಎಂದು ಶಿರಾ ತಾಲ್ಲೂಕಿನ ಬೆಂಚೆ ಗ್ರಾಮದ ಪುಟ್ಟರಾಜು ಅಭಿಪ್ರಾಯಪಟ್ಟರು.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಿಂದ 'ನಮ್ಮೂರು ನಮ್ಮ ಕೆರೆ' ಯೋಜನೆಯಡಿ ಪುನಶ್ಚೇತನಗೊಂಡ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಬೆಂಚೆ ಗ್ರಾಮದ ಹೊಸ ಕೆರೆ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.



ಈ ಯೋಜನೆಯಡಿ ಒಟ್ಟು 42 ಲಕ್ಷ ಲೋಡ್ ಹೂಳು ತೆಗೆಯಲಾಗಿದೆ. ಈ ವರ್ಷ 120 ಕೆರೆಗಳನ್ನು ಪುನಶ್ಚೇತನಗೊಳಿಸಲಿದ್ದೇವೆ
ಡಾ.ಎಲ್. ಎಚ್. ಮಂಜುನಾಥ್, ಕಾರ್ಯನಿರ್ವಾಹಕ ನಿರ್ದೇಶಕ



ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 24 ಕೆರೆಗಳನ್ನು ₹3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಕೆರೆಯ ಸುತ್ತ ಹೂವು–ಹಣ್ಣುಗಳ ಸಸಿ ನೆಡಲಾಗಿದೆ.
ವಿ. ರಾಮಸ್ವಾಮಿ, ಜನಜಾಗೃತಿ ವೇದಿಕೆ ಅಧ್ಯಕ್ಷ



ಕುಡಿಯುವ ನೀರಿಗೆ ತುಂಬಾ ಅಭಾವ ಇತ್ತು. ಈಗ ಅಂತರ್ಜಲ ಮಟ್ಟ ವೃದ್ಧಿಸಿದೆ. ನಮ್ಮ ಊರಿನ ಸಾವಿರ ಕುಟುಂಬಗಳಿಗೆ ಶಾಶ್ವತ ಕುಡಿಯುವ ನೀರು ಸಿಗುತ್ತಿದೆ.
ಪುಟ್ಟರಾಜು, ಬೆಂಚೆ, ಶಿರಾ



ನಮ್ಮೂರಿನ ಕೊಳವೆ ಬಾವಿಗಳು ಮರುಪೂರಣಗೊಂಡಿವೆ. ಈಗ ನಾಲ್ಕು ಎಕರೆಯಲ್ಲಿ ಎರಡು ಬೆಳೆ ಬೆಳೆದರೂ ಕೊಳವೆಬಾವಿಗಳಲ್ಲಿ ಒಂದಿಂಚು ನೀರೂ ಕಡಿಮೆಯಾಗಿಲ್ಲ
ರಮೇಶ್, ಬಸವನಹಳ್ಳಿ, ಮಧುಗಿರಿ

'ಸಾಮಾಜಿಕ ಹೊಣೆಗಾರಿಕೆ ಮೂಡಬೇಕು'


ಡಿ. ವೀರೇಂದ್ರ ಹೆಗ್ಗಡೆ

'ಮೊದಲು, ಗ್ರಾಮಸ್ಥರೆಲ್ಲ ಹೋಗಿ ಕೆರೆಗಳ ಹೂಳು ತೆಗೆಯುತ್ತಿದ್ದರು. ಅವುಗಳ ಸಂರಕ್ಷಣೆಯನ್ನೂ ಮಾಡುತ್ತಿದ್ದರು. ಸ್ವಾತಂತ್ರ್ಯಾನಂತರ ಕೆರೆಗಳ ಸಂರಕ್ಷಣೆ ಜವಾಬ್ದಾರಿ ಸರ್ಕಾರದ್ದು ಎಂಬಂತಾಗಿಬಿಟ್ಟಿತು. ಜನರು ಕೆರೆಗಳನ್ನು ನಿರ್ಲಕ್ಷಿಸತೊಡಗಿದರು' ಎಂದು ಧರ್ಮಸ್ಥಳ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಹೇಳಿದರು.

'ನಮ್ಮೂರು ನಮ್ಮ ಕೆರೆ ಯೋಜನೆಯಿಂದ 2.5 ಲಕ್ಷ ಕುಟುಂಬಗಳಿಗೆ ಅನುಕೂಲವಾಗಿದೆ. ಈಗ ಪುನಶ್ಚೇತನಗೊಳಿಸಿರುವ ಕೆರೆಗಳಿಗೆ ಮತ್ತೆ ಹೂಳು ತುಂಬದಂತೆ ಗ್ರಾಮಸ್ಥರೇ ಎಚ್ಚರ ವಹಿಸಬೇಕು. ಯೋಜನೆ ಯಶಸ್ವಿಯಾಗಬೇಕೆಂದರೆ ಸಾಮಾಜಿಕ ಹೊಣೆಗಾರಿಕೆ ಮೂಡಬೇಕು' ಎಂದು ಅವರು ಸಲಹೆ ನೀಡಿದರು.

ಸುದ್ದಿ 2 ನಿಮಿಷ

'ಬಿಜೆಪಿ ಸರ್ಕಾರದ ದೌರ್ಜನ್ಯ ನೆನಪಿಸುವ ರೈತರ ಸತ್ಯಾಗ್ರಹ'

ನವದೆಹಲಿ: ರೈತರ ಸತ್ಯಾಗ್ರಹವು ಒಂದು ವರ್ಷ ಪೂರ್ಣಗೊಳಿಸಿದ್ದು ಈ ಪ್ರತಿಭಟನೆಯು ಬಿಜೆಪಿ ಸರ್ಕಾರದ ದೌರ್ಜನ್ಯ, ದುರಹಂಕಾರ ಮತ್ತು ಹುತಾತ್ಮರಾದ 700 ರೈತರ ತ್ಯಾಗವನ್ನು ನೆನಪಿಸಲಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಹೇಳಿದ್ದಾರೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿದ ರೈತರು ಕಳೆದ ವರ್ಷದ ನವೆಂಬರ್ 26ರಿಂದ ದೆಹಲಿಯ ವಿವಿಧ ಗಡಿಗಳಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಒಂದು ವರ್ಷದ ರೈತರ ಸತ್ಯಾಗ್ರಹವು ರೈತರ ದೃಢ ನಿಲುವು ಮತ್ತು ಅನ್ನದಾತರ ಮೇಲೆ ಸರ್ಕಾರ ನಡೆಸಿದ ದೌರ್ಜನ್ಯವನ್ನು ನೆನಪಿಸುತ್ತದೆ ಎಂದು ಅವರು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಆದರೆ ಭಾರತದಲ್ಲಿ ರೈತರನ್ನು ಎಂದಿಗೂ ಕಡೆಗಣಿಸಲು ಸಾಧ್ಯವಿಲ್ಲ. ರೈತರ ಹೋರಾಟಕ್ಕೆ ಸಿಕ್ಕ ಗೆಲುವೇ ಇದಕ್ಕೆ ನಿದರ್ಶನ ಎಂದಿರುವ ಅವರು 'ಜೈ ಕಿಸಾನ್' ಘೋಷಣೆಯನ್ನೂ ಟ್ವೀಟ್‌ನಲ್ಲಿ ಸೇರಿಸಿದ್ದಾರೆ.

ವಿವಾದಾತ್ಮಕ ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಂಡಿರುವುದಾಗಿ ಅಧಿಕೃತವಾಗಿ ಸಂಸತ್ತಿನಲ್ಲಿ ಘೋಷಣೆಯಾಗುವವರೆಗೂ ದೆಹಲಿಯ ಗಡಿಗಳಲ್ಲಿ ಹೋರಾಟ ಮುಂದುವರಿಯಲಿದೆ ಎಂದು ರೈತ ನಾಯಕರು ಹೇಳಿದ್ದಾರೆ.

ಡಿ.15ರಿಂದ ಅಂತರರಾಷ್ಟ್ರೀಯ ವಿಮಾನ ಸಂಚಾರ ಪುನರಾರಂಭ



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ವಿಮಾನ ಸಂಚಾರ ಸೇವೆಗಳಿಗೆ ಭಾರತವು ಡಿಸೆಂಬರ್ 15ರಿಂದ ಮರುಚಾಲನೆ ನೀಡಲಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯವು ಶುಕ್ರವಾರ ಪ್ರಕಟಿಸಿದೆ.

ಕೋವಿಡ್ ಕಾರಣದಿಂದ ಈ ಸೇವೆಯನ್ನು ಕಳೆದ ವರ್ಷದ ಮಾರ್ಚ್ 23ರಿಂದ ರದ್ದುಪಡಿಸಲಾಗಿತ್ತು. ಆದರೆ, ಈ ವರ್ಷದ ಜುಲೈ ತಿಂಗಳಿಂದ ವಿಶೇಷ ಒಪ್ಪಂದದಡಿ 28 ದೇಶಗಳಿಗೆ ವಿಶೇಷ ಪ್ರಯಾಣಿಕರ ವಿಮಾನಗಳ ಸಂಚಾರ ಚಾಲ್ತಿಯಲ್ಲಿತ್ತು.

ಅಂತರರಾಷ್ಟ್ರೀಯ ವಿಮಾನಯಾನ ಸೇವೆ ಪುನರಾರಂಭಿಸುವ ವಿಷಯವನ್ನು ಕೇಂದ್ರ ಗೃಹ ಸಚಿವಾಲಯ, ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಆರೋಗ್ಯ ಸಚಿವಾಲಯವು ಪರಿಶೀಲಿಸಿದ್ದು, ಬಳಿಕ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದೆ.

ವಿಚಾರಣೆಗೆ ಕಾಲಮಿತಿ ಅಗತ್ಯ: 'ಸುಪ್ರೀಂ'

ನವದೆಹಲಿ (ಪಿಟಿಐ): ಸಮಯದ ಅಭಾವ ಇರುವ ಕಾರಣ ಪ್ರಕರಣಗಳ ವಿಚಾರಣೆಗೆ ಕಾಲಮಿತಿ ನಿಗದಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಅಗತ್ಯ ಇದೆ ಎಂದು ಸುಪ್ರೀಂಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿತು.

ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಪಶ್ಚಿಮ ಬಂಗಾಳದ ಮಾಜಿ ಮುಖ್ಯಕಾರ್ಯದರ್ಶಿ ಆಲಾಪನ್ ಬಂದೋಪಾಧ್ಯಾಯ ಅವರು ತಮ್ಮ ವಿರುದ್ಧ ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದ್ದನ್ನು ಪ್ರಶ್ನಿಸಿ ಕೇಂದ್ರೀಯ ಆಡಳಿತ ನ್ಯಾಯಮಂಡಳಿಗೆ (ಸಿಎಟಿ) ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಕೋಲ್ಕತ್ತದಿಂದ ನವದೆಹಲಿಗೆ ವರ್ಗಾಯಿಸಿ ಸಿಎಟಿ ಆದೇಶಿಸಿತ್ತು. ಸಿಎಟಿಯ ಈ ಆದೇಶವನ್ನು ಕಲ್ಕತ್ತ ಹೈಕೋರ್ಟ್ ರದ್ದುಪಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.


ಚೆನ್ನೈನ ರಸ್ತೆಗಳಲ್ಲಿ ನಿಂತಿರುವ ನೀರನ್ನು ಮೋಟರ್ ಬಳಸಿ ಹೊರ ಚೆಲ್ಲುವ ಪ್ರಯತ್ನ ಶುಕ್ರವಾರ ನಡೆಯಿತು ಪಿಟಿಐ ಚಿತ್ರ

ತಮಿಳುನಾಡು, ಪುದುಚೇರಿಯಲ್ಲಿ ಮತ್ತೆ ಭಾರಿ ಮಳೆ: ಶಾಲೆಗೆ ರಜೆ

ಚೆನ್ನೈ/ಪುದುಚೇರಿ (ಪಿಟಿಐ): ತಮಿಳುನಾಡಿನ ಚೆನ್ನೈ ಮತ್ತು ದಕ್ಷಿಣದ ಜಿಲ್ಲೆಗಳು, ಕೇಂದ್ರಾಡಳಿತ ಪ್ರದೇಶ ಪುದುಚೇರಿ ಮತ್ತು ಆಂಧ್ರ ಪ್ರದೇಶದ ಪ್ರಸಿದ್ಧ ತೀರ್ಥಕ್ಷೇತ್ರ ತಿರುಪತಿಯಲ್ಲಿ ಗುರುವಾರ ರಾತ್ರಿ ಮತ್ತು ಶುಕ್ರವಾರ ಬೆಳಿಗ್ಗೆ ಭಾರಿ ಮಳೆ ಸುರಿದಿದೆ. ಪುದುಚೇರಿ ಮತ್ತು ಕಾರೈಕಲ್ ಪ್ರದೇಶದಲ್ಲಿ ಶುಕ್ರವಾರ ಮತ್ತು ಶನಿವಾರ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

ತಮಿಳುನಾಡು ಶಿಕ್ಷಣ ಸಚಿವ ಎ. ನಮಶಿವಾಯಂ ಅವರು ಅಧಿಕಾರಿಗಳ ಜತೆಗೆ ಚರ್ಚಿಸಿ ಶಾಲಾ ಕಾಲೇಜುಗಳಿಗೆ ರಜೆ ನೀಡುವ ನಿರ್ಧಾರ ಕೈಗೊಂಡರು. ಶುಕ್ರವಾರ ಮತ್ತು ಶನಿವಾರವೂ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆಯ ಕಾರಣಕ್ಕೆ ಈ ನಿರ್ಧಾರ ತೆಗೆದುಕೊಳ್ಳಲಾಯಿತು.

ಚೆನ್ನೈ ಮತ್ತು ತಮಿಳುನಾಡಿನ ದಕ್ಷಿಣದ ಜಿಲ್ಲೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ, ರಸ್ತೆಗಳು ಜಲಾವೃತವಾಗಿವೆ. ತೂತ್ತುಕುಡಿ ಮತ್ತು ತಿರುನೆಲ್ವೇಲಿ ಜಿಲ್ಲೆಗಳಲ್ಲಿ ಶುಕ್ರವಾರ ಸತತ ಎರಡನೇ ದಿನವೂ ಮಳೆ ಸುರಿದಿದೆ. ರಾಮನಾಥಪುರಂನಲ್ಲಿ ಭಾರಿ ಮಳೆಯಾಗಿದೆ. ಕಾಂಚಿಪುರಂ, ತಿರುವಳ್ಳೂರು, ಚೆಂಗಲ್‌ಪಟ್ಟು ಜಿಲ್ಲೆಗಳಲ್ಲಿ, ಕಾವೇರಿ ನದಿ ಕಣಿವೆ ಪ್ರದೇಶದಲ್ಲಿರುವ ಮದುರೆ, ತಿರುಚಿರಾಪಳ್ಳಿ, ವಿಲ್ಲುಪುರಂ ಜಿಲ್ಲೆಗಳಲ್ಲಿಯೂ ಶುಕ್ರವಾರ ಮಳೆಯಾಗಿದೆ.

ಲಸಿಕೆ ಪಡೆದುಕೊಂಡಿದ್ದವರಿಗೂ ಕೋವಿಡ್ ತಂದ ಬಿ.1.1.529 ರೂಪಾಂತರ ತಳಿ

ಆಫ್ರಿಕಾ ತಳಿ ತಡೆಯುವುದೇ ಲಸಿಕೆ?

ಲಂಡನ್ (ಎಪಿ/ಎಎಫ್‌ಪಿ/ರಾಯಿಟರ್ಸ್): 'ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಕೊರೊನಾ ವೈರಾಣುವಿನ ಹೊಸ ತಳಿ ಬಿ.1.1.529 ವಿರುದ್ಧ ಕೋವಿಡ್‌ನ ಲಸಿಕೆಗಳು ಪರಿಣಾಮ ಬೀರುವ ಸಾಧ್ಯತೆ ಅತ್ಯಂತ ಕಡಿಮೆ' ಎಂದು ಬ್ರಿಟನ್‌ನ ಆರೋಗ್ಯ ಸಚಿವಾಲಯ ಹೇಳಿದ ನಂತರ ವಿಶ್ವದ ಹಲವೆಡೆ ಕಳವಳ ವ್ಯಕ್ತವಾಗಿದೆ.

ಬೋಟ್ಸ್‌ವಾನಾದಲ್ಲಿ ಕೋವಿಡ್ ಲಸಿಕೆಯ ಎರಡು ಡೋಸ್‌ಗಳನ್ನು ಪಡೆದುಕೊಂಡಿದ್ದವರಿಗೂ ಕೊರೊನಾ ಹೊಸ ರೂಪಾಂತರ ತಳಿ ತಗುಲಿದೆ. ಹೊಸ ರೂಪಾಂತರ ತಳಿಯ ರಚನೆಯು ಸಹ ಇದು ವೇಗವಾಗಿ ಮತ್ತು ಲಸಿಕೆಗಳು ಸೃಷ್ಟಿಸಿರುವ ಪ್ರತಿಕಾಯಗಳನ್ನು ತಪ್ಪಿಸಿ ಮನುಷ್ಯ ದೇಹವನ್ನು ಪ್ರವೇಶಿಸುತ್ತದೆ ಎಂಬುದು ಜಿನೋಮ್ ಸೀಕ್ವೆನ್ಸ್ ಅಧ್ಯಯನದಲ್ಲಿ ಪತ್ತೆಯಾಗಿದೆ.

'ಮೂಲ ಕೊರೊನಾ ವೈರಾಣುವಿನಲ್ಲಿದ್ದ ಸ್ಪೈಕ್ ಪ್ರೊಟೀನ್‌ಗಳ (ಮನುಷ್ಯನ ದೇಹವನ್ನು ಸೇರಲು ನೆರವಾಗುವ ಮುಳ್ಳುಗಳು) ಸಂಖ್ಯೆ ಕಡಿಮೆ ಇತ್ತು. ಆಲ್ಫಾ ತಳಿಯಲ್ಲಿ ಈ ಸಂಖ್ಯೆ ಸ್ವಲ್ಪ ಹೆಚ್ಚಾಗಿತ್ತು. ಡೆಲ್ಟಾ ಮತ್ತು ಡೆಲ್ಟಾ ಪ್ಲಸ್ ತಳಿಗಳಲ್ಲಿ ಇವುಗಳ ಸಂಖ್ಯೆ ಅಪಾಯಕಾರಿ ಮಟ್ಟಕ್ಕೆ ಏರಿಕೆಯಾಗಿತ್ತು. ಇವುಗಳ ಸಂಖ್ಯೆ ಹೆಚ್ಚಿದ್ದಷ್ಟೂ, ಹರಡುವಿಕೆಯು ವೇಗ ಪಡೆಯುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಬಿ.1.1.529 ತಳಿಯ ಪ್ರತೀ ವೈರಾಣುವಿನಲ್ಲಿ ಇಂತಹ 50 ಸ್ಪೈಕ್ ಪ್ರೊಟೀನ್‌ಗಳು ಇವೆ. ಹೀಗಾಗಿ ಇದು ಅತ್ಯಂತ ವೇಗವಾಗಿ ಹರಡುವ ಸಾಮರ್ಥ್ಯ ಹೊಂದಿದೆ' ಎಂದು ಜಿನೋಮ್ ಸೀಕ್ವೆನ್ಸ್ ಅಧ್ಯಯನ ವರದಿ ಹೇಳಿದೆ.

ನಮ್ಮ ಲಸಿಕೆ ಪಡೆದುಕೊಂಡಿದ್ದವರಿಗೆ ಈ ತಳಿಯಿಂದ ಕೋವಿಡ್ ಬಂದಿದೆ. ಈ ತಳಿಯ ವಿರುದ್ಧ ನಮ್ಮ ಲಸಿಕೆ ಕೆಲಸ ಮಾಡುತ್ತದೆಯೇ ಎಂಬುದು 2 ವಾರದಲ್ಲಿ ಗೊತ್ತಾಗಲಿದೆ
ಫೈಜರ್ ಮತ್ತು ಬಯೊಎನ್‌ಟೆಕ್

'ಮೂಲ ಕೊರೊನಾ ವೈರಸ್‌ನಲ್ಲಿದ್ದ ಸ್ಪೈಕ್ ಪ್ರೊಟೀನ್‌ಗಳನ್ನು ಆಧರಿಸಿ, ಕೋವಿಡ್ ಲಸಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಹೀಗಾಗಿ ಈ ಲಸಿಕೆಗಳು ಹೆಚ್ಚು ಸ್ಪೈಕ್ ಪ್ರೊಟೀನ್ ಇರುವ ತಳಿಯ ವಿರುದ್ಧ ಗರಿಷ್ಠ ಪ್ರಮಾಣದಲ್ಲಿ ಪರಿಣಾಮ ಬೀರುವುದಿಲ್ಲ ಎಂಬುದು ಗೊತ್ತಾಗಿದೆ. ಈಗ 50 ಸ್ಪೈಕ್ ಪ್ರೊಟೀನ್‌ಗಳು ಇರುವ ದಕ್ಷಿಣ ಆಫ್ರಿಕಾ ತಳಿಯ ವಿರುದ್ಧ ಈ ಲಸಿಕೆಗಳು ಕೆಲಸ ಮಾಡುವ ಸಾಧ್ಯತೆ ಅತ್ಯಂತ ಕಡಿಮೆ' ಎಂದು ಬ್ರಿಟನ್ ಆರೋಗ್ಯ ಸಚಿವಾಲಯ ವಿವರಿಸಿದೆ.

ಕೋವಿಡ್: 402ಕ್ಕೆ ಮುಟ್ಟಿದ ಪ್ರಕರಣ



ಬೆಂಗಳೂರು: ರಾಜ್ಯದ ಕೆಲ ಶಾಲಾ–ಕಾಲೇಜುಗಳಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗಿರುವುದರಿಂದ ಸೋಂಕಿತರ ಸಂಖ್ಯೆ ಏರಿಕೆ ಕಂಡಿದ್ದು, ಶುಕ್ರವಾರ 402 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ.

ಒಂದು ದಿನದ ಅವಧಿಯಲ್ಲಿ 66 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.60 ರಷ್ಟು ದೃಢಪಟ್ಟಿದೆ. ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 16 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬೀದರ್, ಚಿಕ್ಕಬಳ್ಳಾಪುರ ಸೇರಿದಂತೆ 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ ದಿ ಇಂಟರ್‌ನ್ಯಾಷನಲ್ ಬೆಂಗಳೂರು ವಸತಿ ಶಾಲೆಯಲ್ಲಿ 33 ವಿದ್ಯಾರ್ಥಿಗಳು, ಸ್ಫೂರ್ತಿ ಕಾಲೇಜಿನ 12 ವಿದ್ಯಾರ್ಥಿಗಳು ಸೇರಿ 402 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಧಾರವಾಡದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿರುವುದರಿಂದ ಅಲ್ಲಿ ಹೊಸದಾಗಿ 85 ಪ್ರಕರಣಗಳು ಖಚಿತಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ 50ರ ಗಡಿಯೊಳಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.94 ಲಕ್ಷ ದಾಟಿದೆ.

'ಲಸಿಕೆ ಅನುಮಾನಿಸಲು ಸಾಧ್ಯವಿಲ್ಲ'

ನವದೆಹಲಿ: ದೇಶದಲ್ಲಿ ಜಾರಿಯಲ್ಲಿರುವ ಲಸಿಕಾ ಅಭಿಯಾನವನ್ನು ಅನುಮಾನಿಸಿ ತಪ್ಪು ಸಂದೇಶ ರವಾನಿಸಲು ಸಾಧ್ಯವಿಲ್ಲ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕೂಡಾ ಲಸಿಕೆ ಪರವಾಗಿ ಮಾತನಾಡಿದೆ. ಬೇರೆ ದೇಶಗಳೂ ಕೂಡಾ ಲಸಿಕೆ ನೀಡುತ್ತಿವೆ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಲಸಿಕೆ ಪಡೆದ ಆರೋಗ್ಯವಂತ ಜನರು ಮೃತಪಡುತ್ತಿರುವ ಕುರಿತು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸುವುದಾಗಿ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ಪೀಠ ಹೇಳಿದೆ.

ಲಸಿಕೆಯ ಗಂಭೀರ ಮತ್ತು ಅಲ್ಪ ಪ್ರಮಾಣದ ಪ್ರತಿಕೂಲ ಪರಿಣಾಮ ಕುರಿತು ನಿಗಾ ವಹಿಸುವಂತೆ ಪರಿಷ್ಕೃತ 'ರೋಗ ನಿರೋಧಕದ ಪ್ರತಿಕೂಲ ಪರಿಣಾಮ' (ಎಇಎಫ್‌ಐ) ಮಾರ್ಗಸೂಚಿಯಲ್ಲಿ ಹೇಳಲಾಗಿದೆ ಎಂದು ಪೀಠ ಹೇಳಿದೆ.

ಲಸಿಕೆಗೆ ಸಂಬಂಧಿಸಿದಂತೆ ದೇಶದಲ್ಲಿ ನೂರಾರು ಸಾವುಗಳು ವರದಿಯಾಗಿವೆ ಎಂದು ಅಜಯ್ ಕುಮಾರ್ ಗುಪ್ತಾ ಮತ್ತು ಇತರರು ಅರ್ಜಿ ಸಲ್ಲಿಸಿದ್ದರು. ಲಸಿಕೆ ಪಡೆದ 30 ದಿನಗಳ ಒಳಗೆ ಸಂಭವಿಸುತ್ತಿರುವ ಸಾವುಗಳ ಕುರಿತು ಮಾಹಿತಿ ಕಲೆಹಾಕುವಂತೆ ಮತ್ತು ಈ ಕುರಿತು ಮಾಹಿತಿ ನೀಡುವಂತೆ ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಬೇಕು ಎಂದು ಅವರು ಅರ್ಜಿಯಲ್ಲಿ ಹೇಳಿದ್ದರು.

ಲಸಿಕೆಗೆ ಸಂಬಂಧಿಸಿದಂತೆ ದೇಶದಾದ್ಯಂತ ನೂರಾರು ಜನರು ಮೃತಪಟ್ಟಿರುವ ಕುರಿತ ವರದಿಯನ್ನು ಅರ್ಜಿದಾರರ ಪರವಾಗಿ ಕೋರ್ಟ್‌ಗೆ ಹಾಜರಾಗಿದ್ದ ಹಿರಿಯ ವಕೀಲ ಕಾಲಿನ್ ಗೊನ್ಸಾಲ್ವೆಸ್ ಕೋರ್ಟ್‌ಗೆ ಸಲ್ಲಿಸಿದರು.

ಹೆದರುವ ಅಗತ್ಯವಿಲ್ಲ: ಡಬ್ಲ್ಯುಎಚ್‌ಒ

ಆಫ್ರಿಕಾ ತಳಿಯು ಅಪಾಯಕಾರಿಯೇ ಅಥವಾ ಗಮನ ಹರಿಸಬೇಕಾದ ತಳಿಯೇ ಎಂಬುದನ್ನು ನಿರ್ಧರಿಸಲು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಜಿನಿವಾದಲ್ಲಿ ಶುಕ್ರವಾರ ಸಭೆ ನಡೆಸಿದೆ. ಈ ತಳಿಯ ಬಗ್ಗೆ ಈವರೆಗೆ ಲಭ್ಯವಿರುವ ಮಾಹಿತಿಗಳನ್ನು ಪರಿಶೀಲಿಸಿ ಇದನ್ನು ನಿರ್ಧರಿಸಲಾಗುತ್ತದೆ ಎಂದು ಸಂಸ್ಥೆಯು ತಿಳಿಸಿದೆ. ಈಗ ಲಭ್ಯವಿರುವ ಲಸಿಕೆಗಳು ಈ ತಳಿಯ ವಿರುದ್ಧ ಕೆಲಸ ಮಾಡುತ್ತವೆಯೇ ಅಥವಾ ಇಲ್ಲವೇ ಎಂಬುದನ್ನು ಪತ್ತೆ ಮಾಡಲು ಇನ್ನೂ ಒಂದು ವಾರದ ಅವಶ್ಯಕತೆ ಇದೆ. ಹೀಗಾಗಿ ತಕ್ಷಣವೇ ಯಾರೂ ಗಾಬರಿಯಾಗುವ ಅಗತ್ಯವಿಲ್ಲ ಎಂದು ಸಂಸ್ಥೆಯು ಹೇಳಿದೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಮುಂಬೈದಾಳಿ ತನಿಖೆ ಚುರುಕಿಗೆ ಪಾಕ್‌ಗೆ ಆಗ್ರಹ

ನವದೆಹಲಿ (ಪಿಟಿಐ): 'ಮುಂಬೈನಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ ಘಟನೆಯ (26/11) ಗಾಯದ ಗುರುತನ್ನು ಭಾರತ ಮರೆಯುವುದು ಸಾಧ್ಯವೇ ಇಲ್ಲ' ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಮುಂಬೈ ದಾಳಿ ಘಟನೆಗೆ 13 ವರ್ಷವಾದ ಹಿನ್ನೆಲೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ವಿಡಿಯೊ ಬಿಡುಗಡೆ ಮಾಡಿದ್ದು, ಅದರಲ್ಲಿ 'ಭಾರತವು ಹೊಸ ನೀತಿ, ಮಾರ್ಗಗಳಿಂದ ಭಯೋತ್ಪಾದನೆಯನ್ನು ಹತ್ತಿಕ್ಕುತ್ತಿದೆ' ಎಂದು ಮೋದಿ ಹೇಳಿದ್ದಾರೆ.

ಇನ್ನೊಂದೆಡೆ, ಪಾಕಿಸ್ತಾನ ರಾಯಭಾರ ಕಚೇರಿಯ ಹಿರಿಯ ರಾಜತಾಂತ್ರಿಕರನ್ನು ಕರೆಸಿದ್ದ ಭಾರತ ಸರ್ಕಾರ, ಮುಂಬೈ ದಾಳಿ ಪ್ರಕರಣ ಕುರಿತ ತನಿಖೆಯನ್ನು ಪಾಕಿಸ್ತಾನವು ಚುರುಕುಗೊಳಿಸಬೇಕು ಎಂದು ತಾಕೀತು ಮಾಡಿದೆ. ತನಿಖೆಯನ್ನು ಚುರುಕುಗೊಳಿಸಬೇಕು ಎಂಬ ಭಾರತದ ಆಗ್ರಹವನ್ನು ಒಳಗೊಂಡ ಪತ್ರವನ್ನೂ ಪಾಕ್‌ನ ರಾಜತಾಂತ್ರಿಕರಿಗೆ ನೀಡಲಾಯಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಹೇಳಿಕೆ ನೀಡಿದೆ.

'ನತದೃಷ್ಟ ಕುಟುಂಬಗಳಿಗೆ ನ್ಯಾಯ ಒದಗಿಸುವುದು ಪಾಕಿಸ್ತಾನದ ವಿಶ್ವಾಸಾರ್ಹತೆಯಷ್ಟೇ ಅಲ್ಲ, ಅಂತರರಾಷ್ಟ್ರೀಯ ಬದ್ಧತೆಯಾಗಿದೆ' ಎಂದು ಮೋದಿ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಕೋವಿಡ್: ಮುಂಜಾಗ್ರತಾ ಕ್ರಮವಾಗಿ ಸಾರ್ವಜನಿಕರಿಗೆ ನಿರ್ಬಂಧ

ಎಸ್‌ಡಿಎಂ: ಸೋಂಕಿತರ ಸಂಖ್ಯೆ 204 ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಸತ್ತೂರಿನಲ್ಲಿರುವ ಎಸ್‌ಡಿಎಂ ವೈದ್ಯಕೀಯ ಕಾಲೇಜಿನಲ್ಲಿ ಹೊಸದಾಗಿ 138 ವಿದ್ಯಾರ್ಥಿಗಳಲ್ಲಿ ಕೋವಿಡ್ ದೃಢಪಟ್ಟಿದೆ. ಒಟ್ಟಾರೆ ಸೋಂಕಿತರ ಸಂಖ್ಯೆ 204ಕ್ಕೆ ಏರಿಕೆಯಾಗಿದೆ. ಆಸ್ಪತ್ರೆಯ ಹೊರರೋಗಿಗಳ ವಿಭಾಗ ಮುಚ್ಚಲಾಗಿದೆ.

ನ. 17ರಂದು ಕಾಲೇಜಿನ ಡಾ. ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದ ನಂತರ ಕೆಲ ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕಿನ ಲಕ್ಷಣಗಳು ಕಂಡುಬಂದಿದ್ದವು. ವಿದ್ಯಾರ್ಥಿಗಳ ಗಂಟಲು ಹಾಗೂ ಮೂಗಿನ ದ್ರವದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಿದಾಗ ಗುರುವಾರ 66 ವಿದ್ಯಾರ್ಥಿಗಳಲ್ಲಿ ಸೋಂಕು ಕಂಡುಬಂದಿತ್ತು. ಇದರ ಹಿನ್ನೆಲೆಯಲ್ಲೇ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಯ ತಪಾಸಣೆಗೆ ಜಿಲ್ಲಾಡಳಿತ ಸೂಚಿಸಿತ್ತು. ಜತೆಗೆ ಎರಡು ವಿದ್ಯಾರ್ಥಿನಿಲಯಗಳನ್ನು ಸೀಲ್‌ಡೌನ್ ಮಾಡಲಾಗಿತ್ತು.


ಧಾರವಾಡದ ಸತ್ತೂರಿನಲ್ಲಿರುವ ಎಸ್‌ಡಿಎಂ ವೈದ್ಯಕೀಯ ಕಾಲೇಜಿನ ಸಿಬ್ಬಂದಿಯ ಕೋವಿಡ್ ತಪಾಸಣೆ ಶುಕ್ರವಾರ ನಡೆಯಿತು

'ಗುರುವಾರ ಸಂಜೆಯವರೆಗೂ ಎಸ್‌ಡಿಎಂ ಆವರಣದೊಳಗೆ ಒಟ್ಟು 690 ಜನರನ್ನು ಆರ್‌ಟಿಪಿಸಿಆರ್ ಹಾಗೂ ಆರ್‌ಎಟಿ ತಪಾಸಣೆಗೆ ಒಳಪಡಿಸಲಾಗಿದೆ. ಇವುಗಳ ಮಾದರಿಯನ್ನು ಹುಬ್ಬಳ್ಳಿಯ ಕಿಮ್ಸ್, ಧಾರವಾಡದ ಡಿಮ್ಹಾನ್ಸ್ ಹಾಗೂ ಎಸ್‌ಡಿಎಂ ಕೋವಿಡ್ ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. ಯಾರಲ್ಲೂ ಗಂಭೀರ ಸ್ವರೂಪದ ಲಕ್ಷಣಗಳಿಲ್ಲ' ಎಂದು ಜಿಲ್ಲಾಧಿಕಾರಿ ನಿತೇಶ್ ಕೆ. ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

'ಎಸ್‌ಡಿಎಂ ಆವರಣದ ಹೊರಗೆ ಈವರೆಗೂ ಎಲ್ಲಿಯೂ ಕೋವಿಡ್ ಪ್ರಕರಣಗಳು ವರದಿಯಾಗಿಲ್ಲ. ಕಲಾಕ್ಷೇತ್ರದಲ್ಲಿ ನ.17ರ ನಂತರ ನ. 19 ಹಾಗೂ ನ.25ರಂದು ಕಾರ್ಯಕ್ರಮಗಳು ಆಗಿವೆ. ಮುನ್ನೆಚ್ಚರಿಕೆಯ ಕ್ರಮವಾಗಿ ಅಲ್ಲಿ ಭಾಗವಹಿಸಿದವರು ತಪಾಸಣೆಗೆ ಒಳಪಡುವುದು ಸೂಕ್ತ. ರೋಗದ ಲಕ್ಷಣಗಳು ಕಂಡುಬಂದರೆ ಕೂಡಲೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ತಪಾಸಣೆ ಮಾಡಿಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

3,500 ಜನರಿಗೆ ತಪಾಸಣೆ

ಧಾರವಾಡದ ಎಸ್‌ಡಿಎಂ ಕಾಲೇಜು ಹಾಗೂ ಜಿಲ್ಲೆಯಲ್ಲಿ ಸೋಂಕು ನಿಯಂತ್ರಣಕ್ಕೆ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸೋಂಕಿತರ ಪ್ರಯಾಣ ಮಾಹಿತಿ ಹಾಗೂ ಸೋಂಕಿನ ತೀವ್ರತೆ ತಿಳಿಯಲು ಜಿನೋಮ್ ಅನುಕ್ರಮವನ್ನು ಪರಿಶೀಲಿಸಲಾಗುತ್ತಿದೆ. ಮುಂಜಾಗ್ರತಾ ಕ್ರಮವಾಗಿ ಎಸ್‌ಡಿಎಂಗೆ ಸಾರ್ವಜನಿಕರ ಅನಗತ್ಯ ಭೇಟಿ, ದಾಖಲಾಗಿರುವ ರೋಗಿಗಳ ಸಹಾಯಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ.

ಕಾಲೇಜು ಸುತ್ತ 500 ಮೀ. ವ್ಯಾಪ್ತಿಯಲ್ಲಿರುವ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಆಸ್ಪತ್ರೆಯ 3,500 ಜನರ ಕೋವಿಡ್ ತಪಾಸಣೆ ನಡೆಸಲಾಗುತ್ತಿದೆ

ಭೂವಿವಾದ: ಹತ್ಯೆಗೆ ಮುನ್ನ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ

ಒಂದೇ ಕುಟುಂಬದ ನಾಲ್ವರ ಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಭೂವಿವಾದ ಹಿನ್ನೆಲೆಯಲ್ಲಿ ಬಾಲಕಿ ಸೇರಿದಂತೆ ಪರಿಶಿಷ್ಟ ಜಾತಿಯ ಒಂದೇ ಕುಟುಂಬದ ನಾಲ್ವರನ್ನು ಹತ್ಯೆ ಮಾಡಿರುವ ಘಟನೆ ಉತ್ತರಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ನಡೆದಿದೆ. ಹತ್ಯೆಗೆ ಮುನ್ನ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ.

50 ವರ್ಷದ ವ್ಯಕ್ತಿ, ಆತನ ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಹತ್ಯೆ ಮಾಡಲಾಗಿದೆ. ಜಿಲ್ಲೆಯ ಫಂಫಮೌನಲ್ಲಿ ನಾಲ್ವರ ಶವಗಳೂ ಪತ್ತೆಯಾಗಿವೆ. ಒಂದು ಅಥವಾ ಎರಡು ದಿನದ ಹಿಂದೆ ಕೃತ್ಯ ನಡೆದಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಕೃತ್ಯದ ಹಿಂದೆಯೇ ಕರ್ತವ್ಯಲೋಪ ಆರೋಪದಡಿ ಸ್ಥಳೀಯ ಠಾಣೆಯ ಇನ್‌ಸ್ಪೆಕ್ಟರ್ ಸೇರಿದಂತೆ ಇಬ್ಬರನ್ನು ಅಮಾನತುಮಾಡಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಶುಕ್ರವಾರ ಸಂಜೆ ಗೋಹರಿ ಜಿಲ್ಲೆಯಲ್ಲಿ ಮೃತರ ಕುಟುಂಬ ಸದಸ್ಯರನ್ನು ಭೇಟಿಯಾಗಿ, ಸಾಂತ್ವನ ಹೇಳಿದರು

ಮೃತರ ಸಂಬಂಧಿಕರೊಬ್ಬರ ಪ್ರಕಾರ, ಕೊಲೆಯಾದ ಕುಟುಂಬ ಮತ್ತು ಅದೇ ಗ್ರಾಮದ ಸವರ್ಣೀಯ ಕುಟುಂಬವೊಂದರ ನಡುವೆ ಭೂವಿವಾದ ಇತ್ತು. ಈ ಬಗ್ಗೆ ದೂರು ಸಲ್ಲಿಸಿದ್ದರೂ ಪೊಲೀಸರು ಯಾವುದೇ ಕ್ರಮಕೈಗೊಂಡಿರಲಿಲ್ಲ.

ಘಟನೆಗೆ ಆಕ್ರೋಶ ವ್ಯಕ್ತಪಡಿಸಿದ ಜನರು ಆರೋಪಿಗಳ ಬಂಧನ ಮತ್ತು ಮೃತರ ಕುಟುಂಬಗಳಿಗೆ ಪರಿಹಾರಕ್ಕೆ ಒತ್ತಾಯಿಸಿ ಕೆಲಹೊತ್ತು ರಸ್ತೆ ತಡೆ ನಡೆಸಿದರು. ಅಧಿಕಾರಿಗಳ ಭರವಸೆ ನಂತರ ಪ್ರತಿಭಟನೆ ಹಿಂಪಡೆದು ಶವಗಳ ಅಂತ್ಯಕ್ರಿಯೆ ನಡೆಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉತ್ತರ ಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಜಯ್ ಕುಮಾರ್ ಲಲ್ಲು ಅವರು, 'ಪರಿಶಿಷ್ಟರು, ಹಿಂದುಳಿದವರಿಗೆ ರಕ್ಷಣೆಯನ್ನು ಒದಗಿಸಲು ಈ ಸರ್ಕಾರ ವಿಫಲವಾಗಿದೆ' ಎಂದು ಹೇಳಿದ್ದಾರೆ.

ಪ್ರಿಯಾಂಕಾ ಭೇಟಿ, ಸಾಂತ್ವನ: ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಶುಕ್ರವಾರ ಸಂಜೆ ಪ್ರಯಾಗ್‌ರಾಜ್ ಜಿಲ್ಲೆಯ ಗೋಹರಿ ಗ್ರಾಮದಲ್ಲಿ ಮೃತರ ಕುಟುಂಬವನ್ನು ಭೇಟಿಯಾಗಿ ಸಾಂತ್ವನ ಹೇಳಿದರು.



[ನಿರಂತರ ಮಳೆ ಸುರಿದು, ತೊಳೆದ ಬಟ್ಟೆ ಒಣಗದೇ, ಅಡುಗೆ ಮನೆ ಡಬ್ಬಗಳಲ್ಲಿ ಧಾನ್ಯಗಳೆಲ್ಲ ಮುದುಡಿ ಕೆಡುವಾಗ ಇವನ್ನೆಲ್ಲಾ ನಿರ್ವಹಿಸುವುದು ಹೇಗಪ್ಪಾ ಅನ್ನುವವರಿಗೆ ಒಂದಿಷ್ಟು ಟಿಪ್ಸ್ ಇಲ್ಲಿವೆ.]

ಮಳೆ: ಇನ್ನೂ ಒಣಗದ ಪ್ರಸಂಗ

ಸುಕೃತ ಎಸ್.


ಮಗಳು: ಅಯ್ಯೋ ಅಮ್ಮ, ಒಂದು ಬಟ್ಟೆನೂ ಒಣಗಿಲ್ಲವಲ್ಲೆ, ಹಿಂಗೆ ಮಳೆ ಸುರಿತಾ ಇದ್ರೆ ಒಂದು ಬಟ್ಟೆ ಅಂಗಡಿ ಕೊಂಡುಕೊಳ್ಳಬೇಕಾಗುತ್ತಾ ಅಂತ!

ಅಮ್ಮ: ಹೌದೇ ಪುಟ್ಟಿ, ಬಟ್ಟೆ ಒಣಗಿಲ್ಲ. ಬೆಳಿಗ್ಗೆ ಸ್ವಲ್ಪ ಬಿಸಿಲು ಕಣ್ಣು ಬಿಡ್ತು ಅಂತ ಬಟ್ಟೆ ಹೊರಗೆ ಹಾಕಿದ್ರೆ, 10 ನಿಮಿಷಕ್ಕೆ ಮಳೆ ಬಂತು. ಸ್ವಲ್ಪ ಒಣಗಿದ್ದ ಬಟ್ಟೆನೂ ಮತ್ತೆ ಒದ್ದೆ ಆಯ್ತು. ನಿನ್ನ ಟಾಪ್ ಅನ್ನು ಬಿಸಿ ಬಿಸಿ ಕುಕ್ಕರಿನ ಮೇಲೆ ಹಾಕಿದ್ದೇನೆ ನೋಡು. 10 ನಿಮಿಷ ಒಣಗುತ್ತೆ.

ಅಪ್ಪ: ಹೊಸ ಫರ್ನೀಚರ್ ತಂದು ಆರು ತಿಂಗಳು ಆಗಿಲ್ಲ. ಈ ಮಳೆಗೆ ಇವಕ್ಕೆಲ್ಲಾ ಬೂಸ್ಟ್ ಬಂದು ಬಿಟ್ಟಿದೆ.

“ ಒಣಗದ ಒದ್ದೆ ಬಟ್ಟೆ ಕಥೆ ತಕ್ಷಣಕ್ಕೆ ಲಘು ಹಾಸ್ಯವೆನಿಸಿದರೂ, ಅದನ್ನು ಧರಿಸುವುದರಿಂದ ಆಗುವ ತೊಂದರೆಗಳು ತುಸು ಗಂಭೀರವೇ. ‘ಒದ್ದೆ ಬಟ್ಟೆ ಧರಿಸುವುದಿರಂದ ಬ್ಯಾಕ್ಟೀರಿಯಾ ಅಥವಾ ಫಂಗಲ್ ಸೋಂಕು ಬರುತ್ತದೆ. ಕೆಲವೊಮ್ಮೆ ವ್ಯಾಯಾಮ ಮುಗಿಸಿದಾಗ, ಮಳೆಯಲ್ಲಿ ನೆನೆದು ಬಂದಾಗ ಬಟ್ಟೆ ಒದ್ದೆಯಾದರೆ, ಆ ತಕ್ಷಣದಲ್ಲಿ ಬದಲಾಯಿಸಬೇಕು. ಸರಿಯಾಗಿ ಒಣಗದಿರುವ ಬಟ್ಟೆ ಧರಿಸಿದರೂ ಇಂಥದ್ದೇ ಸಮಸ್ಯೆ. ಒಳಉಡುಪುಗಳನ್ನಂತೂ ಅವು ಒದ್ದೆಯಾಗಿದ್ದಾಗ ಬಳಸಲೇಬಾರದು’ ಎನ್ನುತ್ತಾರೆ ಚರ್ಮರೋಗತಜ್ಞೆ ಸಾಗರದ ಡಾ. ಆಶಾ ಪಿ.

‘ತುರಿಸುವುದು; ತುರಿಸಿದರೆ ಇನ್ನಷ್ಟು ದೊಡ್ಡ ಗಾಯ ಆಗುತ್ತದೆ. ಆಗಲೂ ಚಿಕಿತ್ಸೆ ಪಡೆಯದೇ ಹೋದರೆ, ಗಾಯ ಮೈತುಂಬಾ ಹರಡುತ್ತಾ ಹೋಗುತ್ತದೆ. ನಿಮ್ಮದೇ ವಿವೇಚನೆಯಲ್ಲಿ ಮನೆಮದ್ದು ಮಾಡಿಕೊಳ್ಳಿ. ಮೆಡಿಕಲ್ ಶಾಪ್‌ನಲ್ಲಿ ಪೌಡರ್ ಅಥವಾ ಕ್ರೀಂ ಖರೀದಿಸಿ ಉಪಯೋಗಿಸುವುದು ಒಳ್ಳೆಯದಲ್ಲ’ ಎಂದು ಸಲಹೆ ನೀಡುತ್ತಾರೆ ಡಾ. ಆಶಾ.



ಅಮ್ಮ: ಅಕ್ಕಿ, ಬೇಳೆ ಮುದ್ದೆಯಾಗಿದೆ. ಸಾಂಬಾರು ಪುಡಿ, ಮೆಣಸಿನ ಪುಡಿಯದ್ದೂ ಅದೇ ಕಥೆ. ಗೋಡಂಬಿ ಮೆತ್ತಗಾಗಿದೆ. ಎಲ್ಲವೂ ಗಟ್ಟಿ ಗಟ್ಟಿಯಾಗಿ ಕೂತಿದೆ. ಎಲ್ಲ ವೇಸ್ಟ್ ಆಯ್ತು!

* * *

ನವೆಂಬರ್‌ನಲ್ಲೂ ರಾಜ್ಯದಾದ್ಯಂತ ಸುರಿಯುತ್ತಿರುವ ಮಳೆ, ಮನೆ ಮನೆಗಳಲ್ಲಿ ಸೃಷ್ಟಿಸಿರುವ ಅವಾಂತರಗಳಿವು. ಕಳೆದ ಒಂದು ವಾರ ಮಳೆಯಾದಾಗ ಬಟ್ಟೆ ಒಣಗದೇ ಪರದಾಡಿದ್ದು ನೆನಪಾಯ್ತಲ್ಲವಾ? ಅವತ್ತು, ನಿಂತಲ್ಲಿ, ಕುಂತಲ್ಲಿ ಸ್ನೇಹಿತರು ಸಿಕ್ಕಲ್ಲಿ, ಕಚೇರಿಗಳಲ್ಲಿ ‘ಬಟ್ಟೆ ಒಣಗಿಸುವುದೇ’ ಚರ್ಚೆ. ಸುರಿವ ಮಳೆ ಒಂದು ದಿನ ಬಿಡುವು ಕೊಟ್ಟಿತು ನೋಡಿ. ಆ ದಿನ ತೊಳೆಯದೆ, ಒಣಗದೇ ಇದ್ದ ಬಟ್ಟೆಗಳಿಗೆಲ್ಲ ಸೂರ್ಯನ ದರ್ಶನ ಮಾಡಿಸಿದ್ದಾಯ್ತು. ಸೂರ್ಯ ಕಣ್ಣು ಬಿಟ್ಟಿದ್ದೇ ತಡ ಎಲ್ಲರ ಮನೆಯ ತಾರಸಿಗಳ ಮೇಲೆ ಬಣ್ಣ ಬಣ್ಣದ ಬಟ್ಟೆಗಳ ಸಾಲು! ಈ ದೃಶ್ಯದ ಒಂದು ಸಣ್ಣ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಕೂಡ ಆಗಿತ್ತು. ಹಲವು ಮೀಮ್ಸ್‌ಗಳೂ ಬಂದವು. ಸೂಪರ್‌ಮ್ಯಾನ್ ಕೂಡ ಬೆಂಗಳೂರಿನ ಮಳೆ ಕಿರಿಕಿರಿ ಕೊಟ್ಟು ಚಡ್ಡಿ ಒಣಗದೇ ಟವಲ್ ಸುತ್ತಿಕೊಂಡಿದ್ದ! ಎಂಬ ಮೀಮ್ಸ್‌ಗಳು ವೈರಲ್ ಆಗಿವು.

ಮಲೆನಾಡಿನ ಪರಿಸ್ಥಿತಿ ಕೇಳುವಂತಿಲ್ಲ. ಆ ಭಾಗದವರಿಗೆ ಇದು ಸಾಮಾನ್ಯ. ಆ ಭಾಗದಲ್ಲೂ ಮಳೆಗಾದಲ್ಲಿ ಬಟ್ಟೆ ಒಣಗಿಸಲು, ನೀರು ಕಾಯಿಸುವ ಒಲೆಯ ಮುಂದೆ ಒಂದು ಗಳ ಅಡ್ಡ ಇಟ್ಟು ಅದರ ಮೇಲೆ ಒದ್ದೆ ಬಟ್ಟೆಗಳನ್ನು ಹರವುತ್ತಾರೆ. ಬೆಂಕಿಯ ಶಾಖಕ್ಕೆ ಒಣಗಿಕೊಳ್ಳು ತ್ತದೆ. ಬಟ್ಟೆ ಏನೋ ಒಣಗುತ್ತದೆ ನಿಜ. ಆದರೆ, ಅದರ ಜೊತೆಗೆ ಬೆಂಕಿ ವಾಸನೆಯೂ ಫ್ರೀ!

ಇನ್ನು ನಗರಗಳಲ್ಲಿ ಇಸ್ತ್ರಿ ಮಾಡಿಯೊ, ಕುಕ್ಕರು ಅಥವಾ ಚಪಾತಿ ಮಾಡಿದ ತವೆಯ ಮೇಲೆಯೋ ಬಟ್ಟೆ ಒಣಗಿಸುವಂತಹ ಅಭ್ಯಾಸವಿದೆ. ಈ ಮಳೆಗಾಲದಲ್ಲಿ ಬಟ್ಟೆ ಒಣಗಿಸುವುದಕ್ಕೆ ಎಂಥ ಐಡಿಯಾಗಳು ಹುಟ್ಟಿಕೊಂಡವು ನೋಡಿ. ಇನ್ನು ಮುಂದೆ ಮಳೆ ಆಗಾಗ್ಗೆ ಹೀಗೆ ’ಅಕಾಲಿಕ’ವಾಗುವ ಸಾಧ್ಯತೆ ಇದೆಯಂತೆ. ಹಾಗಾಗಿ, ಬಟ್ಟೆ ಒಣಗಿಸಲು ಐಡಿಯಾ ಬೇಕಲ್ಲವಾ? ಇಲ್ಲಿದೆ ನೋಡಿ, ಒಂದಷ್ಟು ಟಿಪ್ಸ್..

- ಒಂದು ಪಾತ್ರೆಯಲ್ಲಿ ನೀರನ್ನು ಬಿಸಿಗಿಡಿ, ಪಾತ್ರೆಯನ್ನು ತಟ್ಟೆಯಿಂದ ಮುಚ್ಚಿ. ನೀರು ಕುದಿಯಲು ಪ್ರಾರಂಭಿಸಿದಾಗ, ಒದ್ದೆ ಇರುವ ಬಟ್ಟೆಗಳನ್ನು ತಟ್ಟೆಯ ಮೇಲೆ ಹರವಿ. ಎರಡು ಉಪಯೋಗವಿದೆ. ಸ್ನಾನಕ್ಕೆ ನೀರನ್ನೂ ಕಾಯಿಸಿಕೊಳ್ಳಬಹುದು. ಬಟ್ಟೆಯೂ ಒಣಗುತ್ತದೆ
- ಕೈಯಲ್ಲಿ ಬಟ್ಟೆ ಒಗೆದಾಗ, ನೀರು ಇರದಂತೆ ಬಟ್ಟೆಯನ್ನು ಚೆನ್ನಾಗಿ ಹಿಂಡಿ ಒಣಗಿಸಬೇಕು.
- ಸಾಧ್ಯವಾದಷ್ಟು ಬೆಳಿಗ್ಗೆಯೇ ಬಟ್ಟೆಗಳನ್ನು ತೊಳೆದು ಒಣಗಿಸುವುದು ಒಳ್ಳೆಯದು. ನಾಳೆಗೇ ಹಾಕುವ ಬಟ್ಟೆ ಸಂಜೆಗೂ ಒಣಗದಿದ್ದರೆ ರಾತ್ರಿ ಫ್ಯಾನ್‌ನ ಕೆಳಗೆ ಹಾಕಿಡಿ.
- ಬಟ್ಟೆಯನ್ನು ಒಣಗಿಸುವಾಗ ಸುಕ್ಕು ಇರದಂತೆ ಒಣಗಿಸಿ. ಒಂದು ಬಟ್ಟೆಯಿಂದ ಇನ್ನೊಂದು ಬಟ್ಟೆಗೆ ಸ್ವಲ್ಪ ಅಂತರವಿರಲಿ. ಕ್ಲಾತ್ ಸ್ಟ್ಯಾಂಡ್ ಬಳಸುವುದು ಹೆಚ್ಚು ಉಪಕಾರಿ.
- ಇದ್ಯಾವುದೂ ಕೆಲಸಕ್ಕೆ ಬರಲಿಲ್ಲ ಎಂದಾದರೆ, ಇಸ್ತ್ರಿ ಮಾಡುವುದು ಇದ್ದೇ ಇದೆಯಲ್ಲಾ.



ಅಡುಗೆ ವಸ್ತುಗಳು

ಮಳೆಗಾಲದಲ್ಲಿ ಬಟ್ಟೆಗಳದ್ದು ಒಂದು ಕಥೆಯಾದರೆ, ಅಡುಗೆ ಮನೆಯ ಡಬ್ಬದಲ್ಲಿರುವ ವಸ್ತುಗಳದ್ದು ಇನ್ನೊಂದು ಕಥೆ. ಅವು ಇದ್ದಲ್ಲೇ ಮುದುಡಿಬಿಡುತ್ತವೆ. ಕಾಳು, ಹಿಟ್ಟು ಗಂಟಾಗುತ್ತವೆ. ಗೋಡಂಬಿಯಂಥವು ಇಟ್ಟಲ್ಲೇ ಮೆತ್ತಗಾಗುತ್ತವೆ. ಈ ಸಮಸ್ಯೆಗೆ ಪರಿಹಾರ ಏನು ?

- ಗರಿ ಗರಿ ಪದಾರ್ಥಗಳು, ಗೋಡಂಬಿಯಂಥವುಗಳನ್ನು ಗಾಳಿಯಾಡದಂತೆ, ‘ಏರ್‌ಟೈಟ್’ ಬಾಕ್ಸ್‌ನಲ್ಲಿ ಇಡುವುದು ಸೂಕ್ತ. ಜೊತೆಗೆ ಫ್ರಿಡ್ಜ್‌ನಲ್ಲೂ ಇಡಬಹುದು.
- ಹಳ್ಳಿಗಳಲ್ಲಿ ವರ್ಷಕ್ಕೆ ಬೇಕಾಗುವ ಬೇಳೆ–ಕಾಳುಗಳನ್ನು ಮಳೆಗಾಲ ಆರಂಭವಾಗುವ ಮುನ್ನವೇ ಒಮ್ಮೆಲೆ ತಂದಿಟ್ಟುಕೊಳ್ಳುವ ಪದ್ಧತಿ ಇದೆ. ಹೀಗೆ ತಂದ ಬೇಳೆ–ಕಾಳುಗಳನ್ನು ಸ್ವಚ್ಛ ಮಾಡಿ ಒಂದು ವಾರಗಟ್ಟಲೆ ಬಿರು ಬಿಸಿಲಿಗೆ ಇಟ್ಟು, ನಂತರ ಬೆಚ್ಚಗಿರುವ ಜಾಗದಲ್ಲಿ ಶೇಖರಿಸಿ ಇಡುತ್ತಾರೆ. ಹೀಗೆ ಮಾಡುವುದರಿಂದ ಮಳೆಗಾಲದಲ್ಲಿ ಬೇಳೆ–ಕಾಳುಗಳು ಹಾಳಾಗುವುದಿಲ್ಲ. ನಗರ ಪ್ರದೇಶಗಳಲ್ಲಿ ಇದು ಕಷ್ಟವಾದರೂ, ತಂದು ಇಟ್ಟುಕೊಂಡಿದ್ದನ್ನೇ ಬಿಸಿಲು ಇರುವಾಗ ಒಣಗಿಸಿ ನಂತರ ಶೇಖರಣೆ ಮಾಡಿದರೆ ಒಳಿತು.

ಪೀಠೋಪಕರಣಗಳು

- ಕಪಾಟುಗಳು, ಮರದ ವಸ್ತುಗಳಿಗೆ ಮಳೆಗಾಲದಲ್ಲಿ ಬೂಸ್ಟ್ ಬರುತ್ತದೆ. ಬಿಳಿ ಬಳಿ ಪದರ ಸೃಷ್ಟಿಯಾಗುತ್ತದೆ. ಇದನ್ನು ತಡೆಯಲು ಮನೆಯೊಳಗಿನ ತೇವಾಂಶ ನಿಯಂತ್ರಿಸಬೇಕು. ಜೊತೆಗೆ ಮರದ ವಸ್ತುಗಳು ಬೆಳಕು, ಗಾಳಿಗೆ ಹತ್ತಿರವಾಗಿದ್ದರೆ, ವಸ್ತುಗಳ ಜಾಗವನ್ನು ಬದಲಿಸಿ.
- ಮನೆಯಲ್ಲಿ ಅಲ್ಲಲ್ಲಿ ನುಸಿ ಗುಳಿಗೆ ಇಡಿ. ಇದು ತೇವಾಂಶವನ್ನು ಹೀರಿಕೊಳ್ಳುತ್ತದೆ.
- ಬೇವಿನ ಎಲೆಗಳು ಅಥವಾ ಲವಂಗವನ್ನು ಮರದ ವಸ್ತುಗಳ ಹತ್ತಿರ ಇಡಬಹುದು.

ಒಲ್ಲದ ಪ್ರೀತಿಗೆ ಒತ್ತಾಯವೇಕೆ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ಯುವತಿ. 3ವರ್ಷದಿಂದ ಹುಡುಗನೊಬ್ಬನನ್ನು ಪ್ರೀತಿಸುತ್ತಿದ್ದೇನೆ. ಹೊರ ಊರಿನಲ್ಲಿ ಕೆಲಸ ಮಾಡುತ್ತಿದ್ದವನು ನನಗಾಗಿಯೇ ಊರಿಗೆ ಬಂದಿದ್ದೇನೆ ಅಂತ ಹೇಳುತ್ತಿದ್ದ. ಮನೆಯಲ್ಲಿಯೂ ಒಪ್ಪಿಸಿದ್ದೇನೆ ಎಂದು ಹೇಳಿದ್ದವನು ಈಗ ಜಾತಿ, ದೇವರು ಎಂದು ಹೇಳಿಕೊಂಡು ದೂರಮಾಡುತ್ತಿದ್ದಾನೆ. ನನ್ನನ್ನು ಮರೆತುಬಿಡು ಎಂದು ಹೇಳುತ್ತಿದ್ದಾನೆ. ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ಸಲಹೆನೀಡಿ.**

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರೀತಿ ಪ್ರಾಮಾಣಿಕವಾಗಿತ್ತು. ಹಾಗಾಗಿ ನಿಮಗೆ ಅದನ್ನು ಮರೆಯುವುದು ಸಂಬಂಧವನ್ನು ಕಡಿದುಕೊಳ್ಳುವುದು ಬಹಳ ನೋವುಂಟು ಮಾಡುತ್ತಿದೆಯಲ್ಲವೇ? ಇಲ್ಲಸಲ್ಲದ ನೆವಗಳನ್ನು ಹೇಳುತ್ತ ನನ್ನನ್ನು ಮರೆತುಬಿಡು ಎನ್ನುವವನ ಪ್ರೀತಿ ಪ್ರಾಮಾಣಿಕವಾಗಿರಲು ಸಾಧ್ಯವೇ? ಅಪ್ರಾಮಾಣಿಕನನ್ನು ಪ್ರೀತಿಸಿದ್ದಕ್ಕೆ ನಿಮಗೆ ನಂಬಿಕೆ ದ್ರೋಹವಾಗಿರುವುದು ಸತ್ಯ. ಆದರೆ ಸ್ಥಿರವಾದ ಮನಸ್ಸು ಸ್ವಂತಬುದ್ಧಿ ಇಲ್ಲದವರೊಡನೆ ಜೀವಮಾನವೆಲ್ಲಾ ಬದುಕುವುದು ನಿಮಗೆ ಸುಖ ಸಂತೋಷಗಳನ್ನು ಕೊಡಬಲ್ಲದೇ? ನಿಮ್ಮ ಸ್ವಂತಿಕೆ, ವ್ಯಕ್ತಿತ್ವ, ವಿದ್ಯೆ, ಆರ್ಥಿಕ ಸ್ವಾವಲಂಬನೆ, ಹವ್ಯಾಸ, ಸ್ನೇಹಿತರ ಕಡೆ ಗಮನ ಹರಿಸಿ. ನಿಮ್ಮನ್ನು ಬಯಸಿ ಬರುವವನು ಮುಂದೆ ಸಿಗಲೇಬೇಕಲ್ಲವೇ?

- **31ರ ಯುವಕ. ಎಂಎ, ಬಿಎಡ್ ಓದಿ ಖಾಸಗಿ ಉದ್ಯೋಗ ಮಾಡುತ್ತಿದ್ದೇನೆ. ಅತ್ತಿಗೆಯ ತಂಗಿಯನ್ನು ಪ್ರೀತಿಸುತ್ತಿದ್ದು ಮದುವೆಯಾಗಬೇಕೆಂದಿದ್ದೇನೆ. ಆದರೆ ಮನೆಯವರು ನನಗಿಂತ 12 ವರ್ಷ ಚಿಕ್ಕವಳಾದ ಅಕ್ಕನ ಮಗಳನ್ನು ಮದುವೆಯಾಗಬೇಕೆಂದು ಒತ್ತಾಯಿಸುತ್ತಿದ್ದಾರೆ. ಒಂದು ಕಡೆ ಪ್ರೇಯಸಿ ಇನ್ನೊಂದು ಕಡೆ ಮನೆಯವರು, ಯಾರನ್ನೂ ಬಿಡಲಾಗುತ್ತಿಲ್ಲ. ಜೊತೆಗೆ ಸರ್ಕಾರಿ ಉದ್ಯೋಗ ಪಡೆಯಲು ಸ್ಪರ್ಧಾತ್ಮಕ ಪರೀಕೆಗೆ ತಯಾರಿ ನಡೆಸಿದ್ದೇನೆ. ಆದರೆ ಮನಸ್ಸು ಸರಿಯಿಲ್ಲ. ಪರಿಹಾರವೇನು.**

ಹೆಸರು, ಊರು ತಿಳಿಸಿಲ್ಲ.

ಮನೆಯವರನ್ನು ಪ್ರೀತಿಸುವುದು ಗೌರವಿಸುವುದು ಎಂದರೆ ಅವರ ಇಚ್ಛೆಗಳಿಗೆ ತಲೆಬಾಗುವುದು ಎನ್ನುವುದು ನಿಮ್ಮ ತಿಳಿವಳಿಕೆಯೇ? ಹಾಗಿದ್ದರೆ ಪ್ರೀತಿಗೂ ದಾಸ್ಯಕ್ಕೂ ವ್ಯತ್ಯಾಸವಾದರೂ ಎಲ್ಲಿರುತ್ತದೆ? ಇಂತಹ ಸ್ಥಿತಿಯಲ್ಲಿ ನಿಮ್ಮ ಭಾವನೆಗಳು ಆಸೆ ಆಸಕ್ತಿ ಕನಸುಗಳನ್ನು ಏನು ಮಾಡುತ್ತೀರಿ? ನಾವೆಲ್ಲ ಬೆಳೆಯುತ್ತ ಬಂದಂತೆ ನಮ್ಮ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಲ್ಲವೇ? ಪ್ರೀತಿಸಿದ ಹುಡುಗಿಯನ್ನು ಮದುವೆಯಾಗುವ ನಿಮ್ಮ ನಿರ್ಧಾರದ ಕುರಿತು ಮನೆಯವರಲ್ಲಿ ತಿಳಿಸಿ. ಅವರ ಪ್ರೀತಿ ಮಮತೆಗಳನ್ನು ತಿರಸ್ಕರಿಸುತ್ತಿಲ್ಲ ಮತ್ತು ಮುಂದೆಯೂ ಅವರ ಜೊತೆ ಸೌಹಾರ್ದಯುತ ಸಂಬಂಧವನ್ನು ಇಟ್ಟುಕೊಳ್ಳುವ ನಿಮ್ಮ ಮನದಿಂಗಿತದ ಬಗೆಗೂ ಮಾತನಾಡಿ. ನಿಮ್ಮ ಪ್ರೀತಿ ಕನಸುಗಳಿಗೆ ಹೆಚ್ಚಿನ ಆದ್ಯತೆ ನೀಡದಿದ್ದರೆ ನಿಮ್ಮನ್ನು ನೀವೇ ಕಳೆದುಕೊಳ್ಳುತ್ತೀರಲ್ಲವೇ? ನಂತರ ಸುಖ ಸಮಾಧಾನಗಳು ಹೇಗೆ ಸಿಗಬಲ್ಲದು?

- **32ರ ವಿವಾಹಿತ ಯುವಕ. ಎಂ.ಎಸ್ಸಿ, ಬಿ.ಇಡಿ ಓದಿ ಖಾಸಗಿ ಶಾಲೆಯಲ್ಲಿ ಶಿಕ್ಷಕನಾಗಿದ್ದೇನೆ. ಕೋವಿಡ್‌ನಿಂದಾಗಿ ಶಾಲೆಗಳು ಸರಿಯಾಗಿ ನಡೆಯದೆ ಸರ್ಕಾರಿ ಕೆಲಸಕ್ಕೆ ಪ್ರಯತ್ನಿಸಬೇಕೆಂದಿದ್ದೇನೆ. ಕೆಲಸ ಮತ್ತು ಪರೀಕ್ಷೆಯ ತಯಾರಿ ಎರಡನ್ನೂ ಹೇಗೆ ನಿಭಾಯಿಸುವುದು ತಿಳಿಯುತ್ತಿಲ್ಲ. ಸಲಹೆ ನೀಡಿ.**

ಮಂಜು, ಊರಿನ ಹೆಸರಿಲ್ಲ.

ಪತ್ರದ ಧಾಟಿಯನ್ನು ನೋಡಿದರೆ ನಿಮ್ಮ ಮನಸ್ಸಿನಲ್ಲಿ ಇನ್ನೂ ಹಲವಾರು ಆತಂಕಗಳಿರುವಂತಿದೆ. ಏರುತ್ತಿರುವ ವಯಸ್ಸು, ವಿದ್ಯಾರ್ಹತೆಗೆ ದೊರಕದ ಸೂಕ್ತ ಉದ್ಯೋಗ, ಕುಟುಂಬದ ಜವಾಬ್ದಾರಿಗಳು, ನಿಶ್ಚಿತ ಆದಾಯವಿಲ್ಲದಿರುವುದು ಮುಂತಾದ ವಿಷಯಗಳೂ ನಿಮ್ಮನ್ನು ಕಾಡುತ್ತಿರಬಹುದೇ? ಎಲ್ಲವನ್ನೂ ಒಟ್ಟಾಗಿ ನಿಭಾಯಿಸುವ ಪ್ರಯತ್ನದಲ್ಲಿ ನೀವು ಒತ್ತಡವನ್ನು ಆಹ್ವಾನಿಸಿಕೊಳ್ಳುತ್ತಿರಬಹುದಲ್ಲವೇ? ನಿಮ್ಮ ಜೀವನದ ಹಾದಿಯನ್ನು ಬೇರೆಯವರಿಗೆ ಹೋಲಿಕೆ ಮಾಡಿಕೊಳ್ಳದೆ ನಿಮ್ಮದೇ ಪರಿಸ್ಥಿತಿಗಳ ಮೂಲಕ ಗುರುತಿಸಿಕೊಳ್ಳಿ. ಅಗತ್ಯವಿರುವಲ್ಲಿ ಪತ್ನಿ ಮನೆಯವರು ಮತ್ತು ಸ್ನೇಹಿತರ ಸಹಕಾರ ಪಡೆಯಿರಿ. ಒಂದೊಂದೇ ಮೆಟ್ಟಿಲೇರುವ ಪ್ರಯತ್ನ ಮಾಡುತ್ತ ಹೋಗಿ. ಮನಸ್ಸು ತಿಳಿಯಾಗತೊಡಗುತ್ತದೆ.

- **20ರ ಬಿಕಾಂ ಪದವೀಧರ. ಒಂದು ವರ್ಷ ಉದ್ಯೋಗ ಮಾಡಿ ಈಗ ಜೀವನದ ಭದ್ರತೆಗಾಗಿ ಸರ್ಧಾತ್ಮಕ ಪರೀಕ್ಷೆಯ ತಯಾರಿಯಲ್ಲಿದ್ದೇನೆ. ನಿನಗೆ ವಯಸ್ಸಾಗುತ್ತಾ ಇದೆ, ಯಾವುದಾದರೂ ಕೆಲಸಕ್ಕೆ ಸೇರು ಎಂದು ಮನೆಯವರು ಹೇಳುತ್ತಿದ್ದಾರೆ. ನಾನು ಯಾವ ಕ್ಷೇತ್ರವನ್ನು ಆರಿಸಿಕೊಂಡರೆ ಒಳ್ಳೆಯದು? ಕೋವಿಡ್‌ನಿಂದಾಗಿ ಅವಕಾಶಗಳು ಕಡಿಮೆಯಿದೆ. ಸಲಹೆನೀಡಿ.**

ಹೆಸರು, ಊರು ತಿಳಿಸಿಲ್ಲ.

ಉದ್ಯೋಗಾವಕಾಶಗಳ ಕುರಿತು ಸಲಹೆ ನೀಡುವ ಅಂಕಣ ಇದಲ್ಲ. ನಿಮ್ಮ ಪತ್ರದಲ್ಲಿ ನಿಮ್ಮ ಆಸಕ್ತಿ ಕನಸುಗಳ ಮಾತೇ ಇಲ್ಲವಲ್ಲ. ಇದೇ ನಿಮ್ಮ ಆಯ್ಕೆಯ ಗೊಂದಲದ ಮೂಲವಿರಬಹುದೇ? ಮೊದಲು ನನ್ನ ಮನಸ್ಸು ಎಂತಹ ವೃತ್ತಿಯಲ್ಲಿ ತಲ್ಲೀನವಾಗಬಲ್ಲದು ಎಂದು ಹುಡುಕಿಕೊಳ್ಳಿ. ನಿಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಬೆಳೆಯುವುದು ಮತ್ತು ಹೊಸ ಸಾಧ್ಯತೆಗಳನ್ನು ಹುಡುಕುವುದು ಸುಲಭವಲ್ಲವೇ?

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ. bhoomika@prajavani.co.in

ಎಲ್ಲರಿಗೂ ಒಪ್ಪುವ ಕಪ್ಪೆಚಿಪ್ಪಿನ ಆಭರಣ

ರೇಷ್ಮಾ

ಫ್ಯಾಷನ್

ಹೆಣ್ಣುಮಕ್ಕಳ ಅಂದ ಹೆಚ್ಚಲು ಆಭರಣ ಭೂಷಣ ಅಂತಲೇ ಹೇಳಬಹುದು. ಚೆಂದದ ಉಡುಪು ಧರಿಸಿದಾಗ ಅದಕ್ಕೆ ಒಪ್ಪುವಂತಹ ಆಭರಣ ಗಳನ್ನು ಧರಿಸುವ ಮೂಲಕ ಇನ್ನಷ್ಟು ಅಂದವಾಗಿ ಕಾಣಬಹುದು. ಇತ್ತೀಚೆಗೆ ನಮ್ಮ ದೇಹಸಿರಿಗೆ ಒಪ್ಪುವ ಉಡುಪಿನೊಂದಿಗೆ ಆಭರಣಗಳನ್ನು ಧರಿಸುವುದು ಟ್ರೆಂಡ್ ಆಗಿದೆ. ಈಗೀಗ ಕಪ್ಪೆಚಿಪ್ಪಿನ ಆಭರಣಗಳು ಟ್ರೆಂಡಿಯಾಗುತ್ತಿವೆ. ಕಪ್ಪೆಚಿಪ್ಪಿನ ಸರ, ಕಿವಿಯೋಲೆ, ಬ್ರೇಸ್ಲೆಟ್, ಬಳೆ... ಹೀಗೆ ವಿವಿಧ ಬಗೆಯ ಆಭರಣಗಳು ಹೆಣ್ಣುಮಕ್ಕಳು, ಗಂಡುಮಕ್ಕಳು ಇಬ್ಬರಿಗೂ ಇಷ್ಟವಾಗುತ್ತಿವೆ. ಗಂಡುಮಕ್ಕಳೂ ಕಪ್ಪೆಚಿಪ್ಪಿನ ಬ್ರೇಸ್ಲೆಟ್, ಪದಕ, ಉಂಗುರ ಧರಿಸುವುದು ವಿಶೇಷ.

ಕಪ್ಪೆಚಿಪ್ಪಿನ ಹಾರ



ವಿವಿಧ ಗಾತ್ರದ ಹಾಗೂ ಆಕಾರದ ಕಪ್ಪೆಚಿಪ್ಪುಗಳು ಸಮುದ್ರದಡದ ಮೇಲೆ ಬಿದ್ದಿರುತ್ತವೆ. ಈ ಚಿಪ್ಪುಗಳಿಂದ ಸುಂದರವಾದ ಹಾರವನ್ನು ತಯಾರಿಸಬಹುದು. ಈ ಕಪ್ಪೆಚಿಪ್ಪಿನ ಹಾರ ಕತ್ತಿನ ಅಂದವನ್ನು ಹೆಚ್ಚಿಸುವುದರಲ್ಲಿ ಎರಡು ಮಾತಿಲ್ಲ. ಇದರಲ್ಲಿ ವಿವಿಧ ಬಣ್ಣದ ಚಿಪ್ಪುಗಳು ಲಭ್ಯವಿದ್ದು ಈ ಹಾರಗಳನ್ನು ಭಾರತೀಯ ಹಾಗೂ ಪಾಶ್ಚಾತ್ಯ ಎರಡೂ ಬಗೆಯ ದಿರಿಸಿನೊಂದಿಗೆ ಧರಿಸಬಹುದು. ಬಿಳಿಯ ಚಿಪ್ಪಿಗೆ ವಿವಿಧ ಬಣ್ಣ ಬಳಿದು ಕಾಂಟ್ರ್ಯಾಸ್ಟ್ ಬಣ್ಣದ ಚಿಪ್ಪಿನಿಂದ ತಯಾರಿಸಿದ ಹಾರವೂ ಹೆಣ್ಣುಮಕ್ಕಳ ಕತ್ತನ್ನು ಅಲಂಕರಿಸುತ್ತಿವೆ. ಖಾದಿ ಸೀರೆ ಅಥವಾ ಕುರ್ತಾದೊಂದಿಗೂ ಕಪ್ಪೆಚಿಪ್ಪಿನ ಹಾರವನ್ನು ಧರಿಸಬಹುದು. ಇದಕ್ಕೆ ದೊಡ್ಡ ಗಾತ್ರದ ಚಿಪ್ಪಿನ ಪೆಂಡೆಂಟ್ ಧರಿಸಿದರೆ ಅಂದ ಹೆಚ್ಚುತ್ತದೆ.



ಕೈ ಬಳೆಗಳು

ಸರಳವಾಗಿ, ಸುಂದರವಾಗಿರುವ ಕಪ್ಪೆಚಿಪ್ಪಿನ ಬಳೆಗಳು ಕೈಯ ಅಂದವನ್ನು ಹೆಚ್ಚಿಸುತ್ತವೆ. ಚಿಪ್ಪಿನ ಒಂದೇ ಬಳೆಯನ್ನು ಧರಿಸುವುದು ಸೂಕ್ತ. ಇದರಲ್ಲಿ ಟ್ರೆಂಡಿ ಬಳೆಗಳು ಲಭ್ಯವಿದ್ದು ಡ್ರೆಸ್‌ಗೆ ಮ್ಯಾಚಿಂಗ್ ಎನ್ನಿಸುವಂತಹವನ್ನು ಧರಿಸಬಹುದು. ಇವನ್ನು ಬೆಳ್ಳಿ ಅಥವಾ ಆಕ್ಸಿಡೈಸ್ಡ್ ರೂಪದ ಬಳೆಗಳಲ್ಲಿ ಜೋಡಿಸಬಹುದು. ಸುಂದರವಾದ ಚಿಪ್ಪುಗಳನ್ನು ಒಂದರ ಹಿಂದೆ ಒಂದರಂತೆ ಜೋಡಿಸಿ ಬಳೆ ರೂಪದಲ್ಲಿ ಧರಿಸಬಹುದು. ಇದನ್ನು ಜೀನ್ಸ್ ಟಾಪ್, ಚೂಡಿದಾರ್ ಜೊತೆ ಧರಿಸಿದರೆ ಟ್ರೆಂಡಿ ಲುಕ್ ಸಿಗುವುದರಲ್ಲಿ ಅನುಮಾನವಿಲ್ಲ.

ಉಂಗುರ


ಉಂಗುರದಲ್ಲಿ ವಿವಿಧ ಗಾತ್ರ, ಆಕಾರದ ಕಪ್ಪೆಚಿಪ್ಪನ್ನು ಜೋಡಿಸುವುದು ಈಗಿನ ಟ್ರೆಂಡ್. ನಿಮಗೆ ಬೇಕಾದ ಗಾತ್ರ ಅಥವಾ ವಿನ್ಯಾಸದ ಕಪ್ಪೆಚಿಪ್ಪುಗಳನ್ನು ನೀವು ಇಷ್ಟಪಡುವ ವಿನ್ಯಾಸದ ಉಂಗುರದೊಂದಿಗೆ ಜೋಡಿಸಬಹುದು. ಸಾಮಾನ್ಯವಾಗಿ ಅಗಲವಾದ ವಿನ್ಯಾಸದ ಉಂಗುರಕ್ಕೆ ಕಪ್ಪೆಚಿಪ್ಪನ್ನು ಜೋಡಿಸಲಾಗುತ್ತದೆ.

ಬ್ರೇಸ್ಲೆಟ್



ಕಪ್ಪೆಚಿಪ್ಪಿನಿಂದ ಮಾಡಿರುವ ಬ್ರೇಸ್ಲೆಟ್‌ಗಳು ಎಲ್ಲದಕ್ಕಿಂತ ಹೆಚ್ಚು ಟ್ರೆಂಡಿ ಎನ್ನಿಸುತ್ತವೆ. ಕಪ್ಪೆಚಿಪ್ಪಿನ ಬ್ರೇಸ್ಲೆಟ್ ಅನ್ನು ಹೆಣ್ಣುಮಕ್ಕಳು ಹಾಗೂ ಗಂಡುಮಕ್ಕಳು ಇಬ್ಬರೂ ಧರಿಸಬಹುದು. ಇದು ಸಾಮಾನ್ಯವಾಗಿ ಎಲಾಸ್ಟಿಕ್ ರೂಪದಲ್ಲಿರುತ್ತದೆ. ಮಿಲೇನಿಯಲ್ ಜಮಾನದವರು ಈ ಬ್ರೇಸ್ಲೆಟ್ ಧರಿಸುವ ಮೂಲಕ ಟ್ರೆಂಡಿಯಾಗಿ ಕಾಣಿಸುತ್ತಾರೆ. ಇದು ಧರಿಸಿದಾಗ ತಕ್ಷಣಕ್ಕೆ ಕಣ್ಣಿಗೆ ಸೆಳೆಯುವುದರಲ್ಲಿ ಅನುಮಾನವಿಲ್ಲ. ಒಂದೇ ಬ್ರೇಸ್ಲೆಟ್‌ನಲ್ಲಿ ವಿವಿಧ ಬಣ್ಣದ ಚಿಪ್ಪನ್ನು ಜೋಡಿಸುವ ಮೂಲಕ ಎಲ್ಲಾ ಬಟ್ಟೆಗೂ ಮ್ಯಾಚಿಂಗ್ ಇರುವಂತೆ ನೋಡಿಕೊಳ್ಳಬಹುದು.

ಕಾಲ್ಗೆಜ್ಜೆ



ಹಿಂದೆಲ್ಲಾ ಕಾಲ್ಗೆಜ್ಜೆ ಎಂದರೆ ಬೆಳ್ಳಿಯದ್ದೇ ಆಗಿರಬೇಕು ಎಂಬ ನಿಯಮವಿತ್ತು, ಆದರೆ ಇತ್ತೀಚೆಗೆ ಇತರ ಲೋಹಗಳು, ಮಣಿಗಳಿರುವ ಕಾಲ್ಗೆಜ್ಜೆಗಳು ಹೆಚ್ಚು ಸದ್ದು ಮಾಡುತ್ತಿವೆ. ಹಳೆಯ ಸಿನಿಮಾಗಳಲ್ಲಿ ನದಿತೀರದಲ್ಲಿ ವಾಸಿಸುವ ಮಂದಿ ಕಪ್ಪೆಚಿಪ್ಪಿನ ಕಾಲ್ಗೆಜ್ಜೆ ಧರಿಸುವುದನ್ನು ನೋಡಿರಬಹುದು. ಅದೇ ಈಗ ನಗರದ ಜನರ ನೆಚ್ಚಿನ ಟ್ರೆಂಡ್ ಆಗಿದೆ. ಈ ಕಾಲ್ಗೆಜ್ಜೆ ಎಲ್ಲಾ ಥರದವರಿಗೂ ಹೊಂದುತ್ತದೆ. ಆ್ಯಂಕಲ್ ಜೀನ್ಸ್, ಜೆಗ್ಗಿಂಗ್ಸ್, ಪೆನ್ಸಿಲ್ ಪ್ಯಾಂಟ್ ಜೊತೆ ಇದನ್ನು ಧರಿಸಿದರೆ ಕಾಲಿನ ಅಂದ ಹೆಚ್ಚುವುದಲ್ಲದೇ ಟ್ರೆಂಡಿ ಆಗಿಯೂ ಕಾಣಿಸುತ್ತದೆ.

ಕಿವಿಯೋಲೆ



ಕಪ್ಪೆಚಿಪ್ಪಿನ ಕಿವಿಯೋಲೆಯನ್ನು ಧರಿಸುವುದರಿಂದ ಸೊಗಸಾಗಿ ಕಾಣಬಹುದು. ವಾರ್ಷಿಕೋತ್ಸವ, ಮದುವೆ, ಹುಟ್ಟುಹಬ್ಬದಂದು ಇದನ್ನು ಉಡುಗೊರೆ ರೂಪದಲ್ಲೂ ನೀಡಬಹುದು. ಈ ಸೊಗಸಾದ ಕಿವಿಯೋಲೆಗಳು ವಾರ್ಡ್‌ರೋಬ್‌ಗೆ ಉತ್ತಮ ಸೇಪರ್ಡೆಯಾಗಿವೆ. ನಮ್ಮ ಉಡುಪಿಗೆ ಮ್ಯಾಚಿಂಗ್ ಎನ್ನಿಸುವ ಬಣ್ಣದ ಚಿಪ್ಪನ್ನು ಆಯ್ಕೆ ಮಾಡಿಕೊಂಡು ಧರಿಸಬಹುದು. ಇದೂ ಕೂಡ ಭಾರತೀಯ ಹಾಗೂ ಪಾಶ್ಚಾತ್ಯ ಎರಡೂ ರೀತಿಯ ಉಡುಪಿಗೆ ಹೊಂದುತ್ತದೆ.

ಆರೋಗ್ಯಕರ ಸೂಪ್‌ಗಳು...

ನಿಕಿತಾ ಆರ್.ಎಂ.

ನಳಪಾಕ



ಸಬ್ಬಸಿಗೆ ಸೊಪ್ಪಿನ ಸೂಪ್

ಬೇಕಾಗುವ ಸಾಮಗ್ರಿಗಳು: ಸಬ್ಬಸ್ಸಿಗೆ ಸೊಪ್ಪು -1 ಕಟ್, ಈರುಳ್ಳಿ 1/2, ಕ್ಯಾರೆಟ್ -1/2, ಬೆಳ್ಳುಳ್ಳಿ - 6 ಎಸಳು, ಉಪ್ಪು- ರುಚಿಗೆ ತಕ್ಕಷ್ಟು, ಅಚ್ಚ ಕಾರದಪುಡಿ -1/2 ಟೇಬಲ್ ಚಮಚ, ಕಾಳುಮೆಣಸಿನ ಪುಡಿ -1/2ಟೀ ಚಮಚ

ತಯಾರಿಸುವ ವಿಧಾನ: ಮೊದಲು ಕುಕ್ಕರ್‌ಗೆ ಸಬ್ಬಸ್ಸಿಗೆ ಸೊಪ್ಪು, ಈರುಳ್ಳಿ, ಕ್ಯಾರೆಟ್, ಬೆಳ್ಳುಳ್ಳಿ ಮತ್ತು ಒಂದು ಕಪ್ ನೀರು ಹಾಕಿ ಒಂದು ಸೀಟಿ ಕೂಗಿಸಿಕೊಳ್ಳಬೇಕು. ಕುಕ್ಕರ್ ತಣ್ಣಗಾದ ನಂತರ ಸೊಪ್ಪು ಮತ್ತು ತರಕಾರಿಯನ್ನು ಶೋಧಿಸಿಕೊಳ್ಳಬೇಕು. ಸೊಪ್ಪು ಮತ್ತು ತರಕಾರಿಯನ್ನು ಮಿಕ್ಸಿಗೆ ಹಾಕಿ ರುಬ್ಬಿಕೊಳ್ಳಬೇಕು. ರುಬ್ಬಿಕೊಂಡ ಮಿಶ್ರಣವನ್ನು ಒಂದು ಬಾಣಲೆಗೆ ಹಾಕಿ ಅದರ ಜೊತೆಗೆ ಶೋಧಿಸಿದ ನೀರನ್ನು ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಮತ್ತು ಖಾರದ ಪುಡಿಯನ್ನು ಹಾಕಿ 2 ನಿಮಿಷ ಕುದಿಸಬೇಕು. ಕುದಿಸಿದ ನಂತರ ಕಾಳುಮೆಣಸಿನ ಪುಡಿ ಮತ್ತು ನಿಂಬೆ ರಸವನ್ನು ಹಾಕಿ ಕೈಯಾಡಿಸಿದರೆ ಬಿಸಿಬಿಸಿಯಾದ ಸಬ್ಬಸ್ಸಿಗೆ ಸೊಪ್ಪಿನ ಸೂಪ್ ಸವಿಯಲು ಸಿದ್ಧ.

ವಾಲ್ನಟ್ ಬ್ರೊಕೊಲಿ ಸೂಪ್



ಬೇಕಾಗುವ ಸಾಮಗ್ರಿಗಳು: ಪಾಲಕ್ ಎಲೆ -6, ಬ್ರೊಕೊಲಿ -1, ಬೆಣ್ಣೆ -2 ಟೇಬಲ್ ಸ್ಪೂನ್, ಈರುಳ್ಳಿ- 1, ಬೆಳ್ಳುಳ್ಳಿ- 4, ಉಪ್ಪು- ರುಚಿಗೆ ತಕ್ಕಷ್ಟು, ವಾಲ್ನಟ್- 15, ಹಾಲು 1 ಕಪ್, ಕಾಳುಮೆಣಸಿನ ಪುಡಿ -1/2 ಟೇಬಲ್ ಚಮಚ, ಹಾಲಿನ ಕೆನೆ -1 ಟೇಬಲ್ ಚಮಚ

ತಯಾರಿಸುವ ವಿಧಾನ: ಮೊದಲು ಒಂದು ಪಾತ್ರೆಯಲ್ಲಿ ಪಾಲಕ್ ಎಲೆ ಮತ್ತು ಹೆಚ್ಚಿದ ಬ್ರೊಕೊಲಿಯನ್ನು ಎರಡು ನಿಮಿಷ ನೀರಿನಲ್ಲಿ ಕುದಿಸಿಕೊಳ್ಳಬೇಕು. ನಂತರ ಒಂದು ಬಾಣಲಿಗೆ ಬೆಣ್ಣೆ, ಹೆಚ್ಚಿದ ಈರುಳ್ಳಿ, ಬೆಳ್ಳುಳ್ಳಿ, ಉಪ್ಪು ಹಾಕಿ. ಈರುಳ್ಳಿ ಬೆಂದ ನಂತರ ವಾಲ್ನಟ್ ಅನ್ನು ಹಾಕಿ 2 ನಿಮಿಷ ಕೈಯಾಡಿಸಬೇಕು ನಂತರ ಬೇಯಿಸಿದ ಬ್ರೊಕೊಲಿ ಮತ್ತು ಪಾಲಕ್, 2 ಕಪ್ ನೀರು ಹಾಕಿ 10 ನಿಮಿಷ ಬೇಯಿಸಬೇಕು. ಇದು ತಣ್ಣಗಾದ ನಂತರ ಚೆನ್ನಾಗಿ ರುಬ್ಬಿಕೊಳ್ಳಬೇಕು. ಕೊನೆಗೆ ಒಂದು ಬಾಣಲೆಗೆ ಒಂದು ಟೇಬಲ್ ಚಮಚ ಬೆಣ್ಣೆ, ಹಾಲು ಮತ್ತು ರುಬ್ಬಿದ ಮಿಶ್ರಣವನ್ನು ಹಾಕಿ ನಾಲ್ಕು ನಿಮಿಷ ಬೇಯಿಸಬೇಕು ನಂತರ ಕಾಳುಮೆಣಸಿನ ಪುಡಿ ಹಾಗೂ ಹಾಲಿನ ಕೆನೆಯನ್ನು ಹಾಕಿ ಕೈಯಾಡಿಸಿ. ಮನೆಮಂದಿ ಎಲ್ಲಾ ಕೂತು ಸೂಪ್ ಸವಿಯಿರಿ.

ನುಗ್ಗೆಕಾಯಿ ಸೂಪ್



ಬೇಕಾಗುವ ಸಾಮಗ್ರಿಗಳು: ನುಗ್ಗೆಕಾಯಿ -3, ಈರುಳ್ಳಿ -1, ಟೊಮೆಟೊ -1, ಶುಂಠಿ -1/2 ಇಂಚು, ಬೆಳ್ಳುಳ್ಳಿ - 6 ಎಸಳು, ಉಪ್ಪು- ರುಚಿಗೆ ತಕ್ಕಷ್ಟು, ಅರಿಶಿನ ಪುಡಿ -1/2 ಟೇಬಲ್ ಚಮಚ, ಜೀರಿಗೆ ಪುಡಿ -1 ಟೇಬಲ್ ಚಮಚ, ಕಾಳುಮೆಣಸು -1 ಟೇಬಲ್ ಚಮಚ, ಕೊತ್ತಂಬರಿ ಸೊಪ್ಪು - ಸ್ವಲ್ಪ

ತಯಾರಿಸುವ ವಿಧಾನ: ಮೊದಲು ಕುಕ್ಕರ್‌ಗೆ ಹೆಚ್ಚಿದ ನುಗ್ಗೆಕಾಯಿ, ಈರುಳ್ಳಿ ಟೊಮೆಟೊ, ಶುಂಠಿ, ಬೆಳ್ಳುಳ್ಳಿ , ಉಪ್ಪು, ಅರಿಶಿನ ಪುಡಿ ಜೀರಿಗೆ ಪುಡಿ ಮತ್ತು 2 ಕಪ್ ನೀರನ್ನು ಹಾಕಿ 3 ಸೀಟಿ ಕೂಗಿಸಿಕೊಳ್ಳಬೇಕು. ಕುಕ್ಕರ್ ತಣ್ಣಗಾದ ಆದನಂತರ ಬೇಯಿಸಿದ ತರಕಾರಿಗಳನ್ನು ನೀರಿನಿಂದ ಬೇರ್ಪಡಿಸಿ ನುಗ್ಗೆಕಾಯಿ ತಿರುಳನ್ನು ಸಿಪ್ಪೆಯಿಂದ ಬೇರೆ ಪಡಿಸಿ ಉಳಿದ ತರಕಾರಿಯ ಜೊತೆಗೆ ರುಬ್ಬಿಕೊಳ್ಳಬೇಕು. ರುಬ್ಬಿದ ಮಿಶ್ರಣವನ್ನು ಬೇಯಿಸಿದ ನೀರಿನ ಜೊತೆ ಒಂದು ಬಾಣಲಿಗೆ ಹಾಕಿ ಅದಕ್ಕೆ ಉಪ್ಪು ಮತ್ತು ಕಾಳುಮೆಣಸಿನ ಪುಡಿಯನ್ನು ಹಾಕಿ 8 ನಿಮಿಷ ಕುದಿಸಬೇಕು. ಕೊನೆಗೆ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಹಾಕಿದರೆ ಸೂಪ್ ಸಿದ್ಧ.

ಇನ್‌ಸ್ಟಾಗ್ರಾಮ್: niki_recipe

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸ್ವಹಿತ ಸವೆಯದೆ ಪರಹಿತ ಪ್ರಜ್ವಲಿಸದು.
-ಕೆ.ಎಸ್.ನಿಸಾರ್ ಅಹಮದ್

ಕಾಮಗಾರಿಗಳ ಗುತ್ತಿಗೆಯಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿ

ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳು ಕೈಗೊಳ್ಳುವ ಕಾಮಗಾರಿಗಳ ಗುತ್ತಿಗೆಗೆ ನಡೆಯುವ ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ ಪಾವತಿಯಲ್ಲಿ ಭ್ರಷ್ಟಾಚಾರ ಸರ್ವೇಸಾಮಾನ್ಯ ಎಂಬ ಸ್ಥಿತಿ ದೇಶದಲ್ಲಿದೆ. ಸರ್ಕಾರದ ಬೊಕ್ಕಸದ ಹಣ ವೆಚ್ಚ ಮಾಡಿ ಕೈಗೊಳ್ಳುವ ಕಾಮಗಾರಿಗಳಲ್ಲಿ ಭ್ರಷ್ಟಾಚಾರವಿಲ್ಲದ ರಾಜ್ಯವನ್ನು ಗುರುತಿಸುವುದು ಸಾವಿಲ್ಲದ ಮನೆಯಿಂದ ಸಾಸಿವೆ ತಂದಂತೆ. ‘ರಾಜ್ಯದಲ್ಲಿ ಕಾಮಗಾರಿಗಳಿಗಾಗಿ ಸರ್ಕಾರದಿಂದ ಬಿಡುಗಡೆಯಾಗುವ ಮೊತ್ತದಲ್ಲಿ ಶೇಕಡ 40ರಷ್ಟು ಲಂಚದ ರೂಪದಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ವಿವಿಧ ಹಂತದ ಚುನಾಯಿತ ಪ್ರತಿನಿಧಿಗಳ ಜೇಬು ಸೇರುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ದೂರು ನೀಡಿದೆ. ಐದು ತಿಂಗಳ ಹಿಂದೆಯೇ ಪ್ರಧಾನಿಯವರಿಗೆ ದೂರು ರವಾನಿಸಿದ್ದ ಗುತ್ತಿಗೆದಾರರ ಸಂಘ, ಈಗ ರಾಜ್ಯಪಾಲರು, ಮುಖ್ಯಮಂತ್ರಿ ಸೇರಿದಂತೆ ರಾಜ್ಯ ಸರ್ಕಾರದ ಪ್ರಮುಖರಿಗೂ ದೂರು ಸಲ್ಲಿಸಿದೆ. ಈ ಹಿಂದೆ ಸರ್ಕಾರಿ ಕಾಮಗಾರಿಗಳ ಗುತ್ತಿಗೆದಾರರಿಂದ ಗುತ್ತಿಗೆಯ ಒಟ್ಟು ಮೊತ್ತದ ಶೇ 10ರವರೆಗೂ ಲಂಚ ಪಡೆಯಲಾಗುತ್ತಿತ್ತು ಎಂಬ ದೂರುಗಳಿದ್ದವು. 2018ರ ವಿಧಾನಸಭಾ ಚುನಾವಣೆಯ ಪ್ರಚಾರದಲ್ಲಿ ನರೇಂದ್ರ ಮೋದಿಯವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು, ‘ಹತ್ತು ಪರ್ಸೆಂಟ್ ಸರ್ಕಾರ’ ಎಂದು ಜರೆದಿದ್ದರು. ಲಂಚದ ಪ್ರಮಾಣ ಈಗ ನಾಲ್ಕು ಪಟ್ಟಾಗಿದೆ ಎಂಬುದನ್ನು ಗುತ್ತಿಗೆದಾರರ ಸಂಘವು ಪ್ರಧಾನಿಗೆ ನೀಡಿದ ದೂರಿನಲ್ಲಿ ಬಹಿರಂಗಪಡಿಸಿದೆ. ರಾಜ್ಯದ ಕೆಲವು ಸಚಿವರು ಲಂಚದ ಹಣ ತಲುಪಿಸಿದ ಬಳಿಕವೇ ಟೆಂಡರ್ ಅನುಮೋದಿಸುತ್ತಿದ್ದಾರೆ ಎಂಬ ಆರೋಪವೂ ದೂರಿನಲ್ಲಿದೆ.



ಗುತ್ತಿಗೆದಾರರ ಸಂಘ ಮಾಡಿರುವ ಎಲ್ಲ ಆರೋಪಗಳ ಕುರಿತು ವಿಸ್ತೃತವಾದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು

ಕಾಮಗಾರಿಗಳ ಅನುಷ್ಠಾನದಲ್ಲಿ ನೇರ ಹೊಣೆಗಾರಿಕೆ ಹೊಂದಿರುವ ಕಿರಿಯ ಎಂಜಿನಿಯರ್‌ಗಳಿಂದ ಆಯಾ ಇಲಾಖೆಯ ಉಸ್ತುವಾರಿ ಹೊತ್ತಿರುವ ಮಂತ್ರಿಗಳವರೆಗೆ ಎಲ್ಲರೂ ಲಂಚಕ್ಕಾಗಿ ಗುತ್ತಿಗೆದಾರರಿಗೆ ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪ ಜೋರಾಗಿ ಸದ್ದು ಮಾಡುತ್ತಿದೆ. ಅತಿಯಾದ ಲಂಚದ ಹಾವಳಿಯಿಂದ ಗುಣಮಟ್ಟದ ಕಾಮಗಾರಿ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ಗುತ್ತಿಗೆದಾರರು ಬಹಿರಂಗವಾಗಿ ಹೇಳುತ್ತಿದ್ದಾರೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಭೇಟಿ ಮಾಡಿರುವ ಕಾಂಗ್ರೆಸ್ ಪಕ್ಷದ ಮುಖಂಡರ ನಿಯೋಗವು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ವಜಾಗೊಳಿಸಿ, ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂಬ ಆಗ್ರಹವನ್ನು ಮಂಡಿಸಿದೆ. ಸರ್ಕಾರಿ ಕಾಮಗಾರಿಗಳ ಗುತ್ತಿಗೆದಾರರಿಂದ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳಿಗೆ ಲಂಚ ಪಾವತಿಯಾಗುವುದು ದಿಢೀರನೆ ಹುಟ್ಟಿಕೊಂಡ ಪರಿಪಾಟವಲ್ಲ. ದಶಕಗಳ ಕಾಲದಿಂದಲೂ ಇದು ನಡೆದುಕೊಂಡು ಬಂದಿದೆ. ವರ್ಷದಿಂದ ವರ್ಷಕ್ಕೆ ಲಂಚದ ಪ್ರಮಾಣ ಮಾತ್ರ ಹೆಚ್ಚುತ್ತಲೇ ಬಂದಿದೆ. ನಿಕಟಪೂರ್ವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆಪ್ತ, ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಿಎಂಟಿಸಿ ಚಾಲಕ ಮತ್ತು ಹಲವು ಗುತ್ತಿಗೆದಾರರ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಳೆದ ತಿಂಗಳು ದಾಳಿ ಮಾಡಿ, ಶೋಧ ನಡೆಸಿದ್ದರು. ಬೃಹತ್ ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆಯುತ್ತಿರುವುದು ಮತ್ತು ದೊಡ್ಡ ಮಟ್ಟದ ಲಂಚ ಸಂದಾಯ ಆಗುತ್ತಿರುವುದನ್ನು ಖಚಿತಪಡಿಸುವ ದಾಖಲೆಗಳು ಪತ್ತೆಯಾಗಿದ್ದವು.

ಕಾಮಗಾರಿಗಳ ಗುತ್ತಿಗೆಯಲ್ಲಿ ಅಕ್ರಮಗಳನ್ನು ತಡೆಯುವುದಕ್ಕಾಗಿಯೇ ರೂಪಿಸಿದ ‘ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿನ ಪಾರದರ್ಶಕತೆ’ (ಕೆಟಿಪಿಪಿ) ಕಾಯ್ದೆ ಜಾರಿಯಲ್ಲಿದೆ. ಟೆಂಡರ್ ಪ್ರಕ್ರಿಯೆಯಲ್ಲಿ ಪ್ರಭಾವ ಮತ್ತು ಹಸ್ತಕ್ಷೇಪ ತಡೆಯುವುದಕ್ಕಾಗಿ ‘ಇ-ಸಂಗ್ರಹಣಾ ವ್ಯವಸ್ಥೆ’ ರೂಪಿಸಲಾಗಿದೆ. ಆದರೆ, ಕಾಮಗಾರಿಗಳ ಗುತ್ತಿಗೆ ಪ್ರಕ್ರಿಯೆ ಇಂದಿಗೂ ದೋಷಮುಕ್ತವಾಗಿಲ್ಲ ಎಂಬುದು ವಾಸ್ತವ. ಹ್ಯಾಕರ್ ಶ್ರೀಕೃಷ್ಣ ಎಂಬಾತ ಹಲವು ಬಾರಿ ರಾಜ್ಯದ ‘ಇ-ಸಂಗ್ರಹಣಾ’ ಪೋರ್ಟಲ್ ಅನ್ನೇ ಹ್ಯಾಕ್ ಮಾಡಿರುವುದು ಈ ವ್ಯವಸ್ಥೆಯ ಕುರಿತ ಸಂಶಯವನ್ನು ಹೆಚ್ಚಿಸಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾಗುವ ಅನುದಾನದಲ್ಲಿ ಅರ್ಧದಷ್ಟು ಮೊತ್ತ ಲಂಚಕ್ಕೇ ವ್ಯಯವಾಗುತ್ತಿದೆ ಎಂಬ ದೂರು ಪ್ರಧಾನಿ ಕಚೇರಿಯನ್ನು ತಲುಪಿದೆ. ‘ನಾನು ತಿನ್ನುವುದಿಲ್ಲ, ತಿನ್ನಲೂ ಬಿಡುವುದಿಲ್ಲ’ ಎಂಬ ಘೋಷಣೆಯೊಂದಿಗೆ ಅಧಿಕಾರಕ್ಕೇರಿದ ಮೋದಿಯವರು ಗುತ್ತಿಗೆದಾರರು ದೂರು ನೀಡಿ ಐದು ತಿಂಗಳಾದರೂ ಸುಮ್ಮನಿರುವುದು ಏಕೆ? ಈ ವಿಚಾರದಲ್ಲಿ ಕಠಿಣ ನಿಲುವು ತಾಳಬೇಕಿದೆ. ವಿಶೇಷವಾಗಿ ಅವರದೇ ಪಕ್ಷವಾದ ಬಿಜೆಪಿ ನೇತೃತ್ವದ ಸರ್ಕಾರವಿರುವ ಕರ್ನಾಟಕದಿಂದ ಬಂದಿರುವ ಈ ದೂರಿನ ಕುರಿತು ತನಿಖೆ ನಡೆಸಿ, ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕಾದ ಹೊಣೆಗಾರಿಕೆ ಪ್ರಧಾನಿಯವರ ಮೇಲಿದೆ. ಪ್ರಧಾನಿ ಮತ್ತು ಬಿಜೆಪಿಯ ಇತರ ನಾಯಕರು, ಭ್ರಷ್ಟಾಚಾರದ ವಿಷಯವನ್ನು ಮತ ಗಳಿಕೆಯ ಅಸ್ತ್ರವಾಗಿ ಮಾತ್ರ ನೋಡಬಾರದು. ಗುತ್ತಿಗೆದಾರರ ಸಂಘ ಮಾಡಿರುವ ಆರೋಪವನ್ನು ಕೇವಲ ರಾಜಕೀಯ ಹೇಳಿಕೆಗಳ ಮೂಲಕವೇ ನಿರಾಕರಿಸುವ ನಡೆ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದುದು. ಚುನಾವಣೆಗಳಲ್ಲಿ ಕರ್ನಾಟಕದ ಜನರಿಗೆ ನೀಡಿದ್ದ ವಾಗ್ದಾನದಂತೆ, ‘ಭ್ರಷ್ಟಾಚಾರಮುಕ್ತ ಆಡಳಿತ’ ನೀಡುವ ಬದ್ಧತೆಯನ್ನು ಈ ಪ್ರಕರಣದ ಮೂಲಕವೇ ಪ್ರದರ್ಶಿಸಬೇಕು. ಸರ್ಕಾರದ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯಲ್ಲಿನ ಅವ್ಯವಹಾರದ ಕುರಿತು ತನಿಖೆ ನಡೆಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದಾಗಿ ಮುಖ್ಯಮಂತ್ರಿ ಹೇಳಿಕೆ ನೀಡಿದ್ದಾರೆ. ಅದು ಕಾರ್ಯರೂಪಕ್ಕೆ ಬರಬೇಕು. ಗುತ್ತಿಗೆದಾರರ ಸಂಘ ಮಾಡಿರುವ ಎಲ್ಲ ಆರೋಪಗಳ ಕುರಿತು ವಿಸ್ತೃತವಾದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ಅದರ ಜತೆಯಲ್ಲೇ, ಸರ್ಕಾರದ ಕಾಮಗಾರಿಗಳ ಗುತ್ತಿಗೆಯಲ್ಲಿ ಪಾರದರ್ಶಕವಾದ ಟೆಂಡರ್ ಪ್ರಕ್ರಿಯೆ ಮತ್ತು ಬಿಲ್ ಪಾವತಿಗೆ ಹೊಸ ವ್ಯವಸ್ಥೆಯೊಂದನ್ನು ರೂಪಿಸುವ ಮೂಲಕ ಇಂತಹ ಅಕ್ರಮಗಳಿಗೆ ಕಡಿವಾಣ ಹಾಕಬೇಕು. ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರದ ಬೊಕ್ಕಸದಿಂದ ಬಿಡುಗಡೆಯಾಗುವ ಜನರ ತೆರಿಗೆಯ ಹಣದಲ್ಲಿ ಕಿಂಚಿತ್ತೂ ಸೋರಿಕೆಯಾಗದಂತೆ ತಡೆಯುವ ವ್ಯವಸ್ಥೆಯನ್ನು ರೂಪಿಸುವ ಹೊಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆದ್ಯತೆ ಮೇಲೆ ತೆಗೆದುಕೊಳ್ಳಬೇಕು.

ದಿನದ ಟ್ವೀಟ್



ಶೀಘ್ರ ಕ್ರಮ ಕೈಗೊಳ್ಳಿ

ನ್ಯಾಯ ನೀಡಿಕೆ ವಿಳಂಬವಾದರೆ ನ್ಯಾಯ ನಿರಾಕರಿಸಿದಂತೆ! ‘ನೀಟ್’ ಪಿ.ಜಿ. ಕೌನ್ಸೆಲಿಂಗ್ ನಡೆಸುವಲ್ಲಿನ ಈ ಸುದೀರ್ಘ ವಿಳಂಬವು ಇಡೀ ವ್ಯವಸ್ಥೆಯನ್ನು ಸ್ಥಗಿತಗೊಳಿಸಿದೆ. ಅಧಿಕಾರಿಗಳು ತುರ್ತು ಆದ್ಯತೆಯ ಮೇರೆಗೆ ಈ ಬಗ್ಗೆ ಕಾಳಜಿ ವಹಿಸಬೇಕು. ಮಧ್ಯಪ್ರವೇಶಿಸಬೇಕೆಂದು ಪ್ರಧಾನಿ ಕಚೇರಿಗೆ ನಾನು ವಿನಂತಿಸುತ್ತೇನೆ.

ತುಷಾರ್ ಮೆಹ್ತಾ, ವೈದ್ಯ, ಉದ್ಯಮಿ

ಕಿಡಿನುಡಿ



ವಿಧಾನಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಬಿ.ಎಸ್. ಯಡಿಯೂರಪ್ಪ ಸಾರ್ವಜನಿಕವಾಗಿ ಜೆಡಿಎಸ್ ಬೆಂಬಲ ಕೋರಿದ್ದಾರೆ. ನನಗೆ ಕರೆ ಸಹ ಮಾಡಿದ್ದರು. ಗೌರವಯುತವಾಗಿ ನಡೆದುಕೊಂಡಿದ್ದಾರೆ. ಅವರಿಗೆ ಆಭಾರಿ. ಕಾಂಗ್ರೆಸ್‌ನ ಮಹಾ ನಾಯಕರು ಜೆಡಿಎಸ್–ಬಿಜೆಪಿ ಒಳಒಪ್ಪಂದ ಎಂದು ಹೇಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾನು ಯಡಿಯೂರಪ್ಪ ಅವರ ಮನವಿಗೆ ಬೆಂಬಲ ಕೊಡಬೇಕೊ, ನಿರಂತರವಾಗಿ ನಮ್ಮ ಪಕ್ಷದ ವಿರುದ್ಧ ದಾಳಿ ಮಾಡುತ್ತಿರುವ ಕಾಂಗ್ರೆಸ್‌ಗೆ ಬೆಂಬಲ ಕೊಡಬೇಕೊ ಎನ್ನುವ ಬಗ್ಗೆ ಮುಂದೆ ನಿರ್ಣಯಿಸುವೆ.

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 27-11-1996

● **ರಾವ್– ಕೇಸರಿ ಸಮರಕ್ಕೆ ತಿರುವು**

ನವದೆಹಲಿ, ನ. 26 (ಯುಎನ್‌ಐ, ಪಿಟಿಐ)– ಡಿಸೆಂಬರ್ 10ರಂದು ನಡೆಯಲಿರುವ ಕಾಂಗ್ರೆಸ್ ಸಂಸದೀಯ ಪಕ್ಷದ ಚುನಾವಣೆಯನ್ನು ಮುಂದೂಡುವಂತೆ ಕೆಲವರು ಒತ್ತಡ ಹೇರುತ್ತಿರುವುದರ ಬೆನ್ನಲ್ಲೇ ಪಿ.ವಿ.ನರಸಿಂಹ ರಾವ್ ಅವರ ಬೆಂಬಲಿಗರು ಅಂದೇ ಚುನಾವಣೆ ನಡೆಸಲು ಸಜ್ಜಾಗುತ್ತಿದ್ದು ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಹಾಗೂ ರಾವ್ ನಡುವಿನ ಶೀತಲ ಸಮರ ಹೊಸ ತಿರುವು ಪಡೆದುಕೊಂಡಿದೆ.

ಕೇಸರಿಯವರನ್ನು ಕಡೆಗಣಿಸಿ ಈ ಚುನಾವಣೆ ನಡೆಸಲು ಯತ್ನಿಸುತ್ತಿರುವುದರಿಂದ ಚುನಾವಣೆಯನ್ನು ರದ್ದುಪಡಿಸಬೇಕು ಎಂದು ಪಕ್ಷದ ಕೆಲವರು ಪಟ್ಟು ಹಿಡಿದಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 27-11-1971

● **ಯುದ್ಧ ಹೂಡಿದರೆ ಪಾಕ್ ಪರ ಶಕ್ತ ರಾಷ್ಟ್ರಗಳ ಹಸ್ತಕ್ಷೇಪ ಇಲ್ಲ**

ನವದೆಹಲಿ, ನ. 26– ಬಾಂಗ್ಲಾ ಬಿಕ್ಕಟ್ಟನ್ನು ತೀವ್ರಗೊಳಿಸಿ ಪಾಕಿಸ್ತಾನವು ಯುದ್ಧ ಆರಂಭಿಸಿದರೆ ಅದರ ಪರವಾಗಿ ವಿಶ್ವದ ಯಾವ ಶಕ್ತಿಯುತ ರಾಷ್ಟ್ರವೂ ಸಕ್ರಿಯ ಪಾತ್ರ ವಹಿಸುವುದು ಅಸಂಭವವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ರಾಜ್ಯಪಾಲರ ಸಮ್ಮೇಳನಕ್ಕೆ ತಿಳಿಸಿದರೆಂದು ಗೊತ್ತಾಗಿದೆ.

ಭಾರತ ತಾನೇ ತಾನಾಗಿ ಹೋರಾಟದಲ್ಲಿ ತೊಡಗುವುದಿಲ್ಲವೆಂದು ಮತ್ತೆ ನುಡಿದ ಇಂದಿರಾ ಅವರು, ಆದರೆ ರಾಷ್ಟ್ರವು ಯಾವುದೇ ತುರ್ತು ಪರಿಸ್ಥಿತಿಗಾದರೂ ಸಿದ್ಧವಿರಬೇಕೆಂದು ಎಚ್ಚರಿಸಿದರು.

ರಾಜಕೀಯ ಪಕ್ಷಗಳ ಋಣಭಾರಕ್ಕೆ ಸಿಲುಕಿದರೆ ಸ್ವತಂತ್ರ ನಿರ್ಧಾರ ಕಷ್ಟ

ಕಸಾಪ ಅಂಗಳದಲ್ಲಿ ಕಮಲದ ಕಮಟು!



ಅನುಸಂಧಾನ

ರವೀಂದ್ರ ಭಟ್ಟ

2006ರಲ್ಲಿ ಶಿವಮೊಗ್ಗದಲ್ಲಿ 73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಪ್ರೊ. ಕೆ.ಎಸ್.ನಿಸಾರ್ ಅಹಮದ್ ಅವರು ಸಮ್ಮೇಳನಾಧ್ಯಕ್ಷರು. ಪ್ರೊ. ಚಂದ್ರಶೇಖರ ಪಾಟೀಲ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು. ರಾಜ್ಯದಲ್ಲಿ ಆಗ ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ. ಬಿ.ಎಸ್.ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿ. ಶಿವಮೊಗ್ಗ ಜಿಲ್ಲೆಯವರೇ ಆದ ಯಡಿಯೂರಪ್ಪ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಗೌರವಾಧ್ಯಕ್ಷರು. ಪ್ರಭಾವಿ ಸಚಿವರಾಗಿದ್ದ ಮತ್ತು ಜಿಲ್ಲೆಯವರೇ ಆದ ಡಿ.ಎಚ್. ಶಂಕರಮೂರ್ತಿ ಮತ್ತು ಕೆ.ಎಸ್.ಈಶ್ವರಪ್ಪ ಸ್ವಾಗತ ಸಮಿತಿಯಲ್ಲಿದ್ದರು. ಆದರೂ ಚಂಪಾ ಅವರು ಸರ್ಕಾರಕ್ಕೆ ಸಡ್ಡು ಹೊಡೆದರು. ‘ಮುಖ್ಯಮಂತ್ರಿ ಅವರು ಉದ್ಘಾಟನಾ ಸಮಾರಂಭಕ್ಕೆ ಬರುವುದು ಬೇಡ, ಅವರು ಸಮಾರೋಪ ಸಮಾರಂಭಕ್ಕೆ ಬರಲಿ’ ಎಂದು ಷರತ್ತು ವಿಧಿಸಿದ್ದರು. ಅಲ್ಲದೆ ಗೌರಿ ಲಂಕೇಶ್ ಮತ್ತು ಕಲ್ಕುಳಿ ವಿಠಲ ಹೆಗ್ಡೆ ಅವರನ್ನು ಸಮ್ಮೇಳನದ ಗೋಷ್ಠಿಗೆ ಕರೆದಿರುವುದಕ್ಕೆ ವಿರೋಧ ವ್ಯಕ್ತವಾಯಿತು. ಯಡಿಯೂರಪ್ಪ, ಈಶ್ವರಪ್ಪ, ಶಂಕರಮೂರ್ತಿ ಅವರಲ್ಲದೆ ಬಿಜೆಪಿಯ ಹಲವಾರು ಮಂದಿ ಆಕ್ಷೇಪ ವ್ಯಕ್ತಪಡಿಸಿದರು.

‘ಸಮ್ಮೇಳನಕ್ಕೆ ಸರ್ಕಾರ ಹಣ ಕೊಟ್ಟಿರುವುದರಿಂದ ಸರ್ಕಾರ ಹೇಳಿದಂತೆ ಕೇಳಬೇಕು. ‘ವಿವಾದಾತ್ಮಕ ವ್ಯಕ್ತಿ’ಗಳನ್ನು ಸಮ್ಮೇಳನಕ್ಕೆ ಕರೆಯಬಾರದು’ ಎಂದು ಕಟ್ಟಪ್ಪಣೆ ಮಾಡಲಾಯಿತು. ಆದರೆ ಅದಕ್ಕೆ ಚಂಪಾ ಜಗ್ಗಲಿಲ್ಲ. ‘ಸಮ್ಮೇಳನಕ್ಕೆ ಹಣ ಕೊಡುವುದು ನಿಮ್ಮ ಕರ್ತವ್ಯ, ಕೊಟ್ಟಿದ್ದೀರಿ. ಕನ್ನಡಿಗರ ಹಣವನ್ನು ಕೊಟ್ಟಿದ್ದೀರಿ ಅಷ್ಟೆ. ಹಣ ಕೊಟ್ಟ ಮಾತ್ರಕ್ಕೆ ಇಂತಹವರನ್ನು ಕರೆಯಬೇಕು, ಇಂತಹವರನ್ನು ಕರೆಯಬಾರದು ಎಂದು ನಿರ್ದೇಶನ ನೀಡಲು ಸಾಧ್ಯವಿಲ್ಲ’ ಎಂದು ಹೇಳಿದರಲ್ಲದೆ ಗೌರಿ ಮತ್ತು ಕಲ್ಕುಳಿ ಇಬ್ಬರಿಗೂ ಅವಕಾಶ ನೀಡಿದರು. ಗೌರಿ ಲಂಕೇಶ್ ಅವರು ಭಾಗವಹಿಸಿದ್ದ ಗೋಷ್ಠಿಯನ್ನು ಪೊಲೀಸ್ ಭದ್ರತೆಯಲ್ಲಿ ನಡೆಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಸರ್ಕಾರದ ಅಡಿಯಾಳಲ್ಲ ಎಂಬ ಸ್ಪಷ್ಟ ಸಂದೇಶವನ್ನು ಸಾರಿದರು.

1978ರಲ್ಲಿ ಪ್ರೊ. ಹಂಪ ನಾಗರಾಜಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದರು. ಅಕ್ಟೋಬರ್ ತಿಂಗಳಿನಲ್ಲಿ ಅವರು ಅಧಿಕಾರ ಸ್ವೀಕರಿಸಿದ್ದರು. ಆಗ ಪತ್ರಕರ್ತರು ಕರ್ನಾಟಕ ರಾಜ್ಯೋತ್ಸವ ಆಚರಣೆ ಬಗ್ಗೆ ಪ್ರಶ್ನೆ ಕೇಳಿದಾಗ ‘ಕರ್ನಾಟಕದಲ್ಲಿ ಕನ್ನಡ ಇನ್ನೂ ಆಡಳಿತ ಭಾಷೆಯಾಗಿಲ್ಲ. ಕನ್ನಡಕ್ಕೆ ಸಾರ್ವಭೌಮತ್ವ ಸಿಕ್ಕಿಲ್ಲ. ಕನ್ನಡಿಗರಿಗೆ ಉದ್ಯೋಗ ಸಿಗುತ್ತಿಲ್ಲ. ರಾಜ್ಯ ಸರ್ಕಾರ ಕನ್ನಡದ ಕೆಲಸ ಮಾಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ಯಾವ ಉದ್ದೇಶದಿಂದ ಆಚರಿಸಬೇಕು’ ಎಂದು ಉತ್ತರಿಸಿದರು. ಮರುದಿನ ಇದು ಎಲ್ಲ ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಯಿತು. ಅದೇ ಸಂದರ್ಭದಲ್ಲಿ ವಿಧಾನಮಂಡಲ ಅಧಿವೇಶನ ನಡೆಯುತ್ತಿತ್ತು. ಹಂಪನಾ ಅವರ ಹೇಳಿಕೆ ವಿಧಾನ ಮಂಡಲದಲ್ಲಿಯೂ ಪ್ರಸ್ತಾಪವಾಯಿತು. ‘ರಾಜ್ಯ ಸರ್ಕಾರದ ಅನುದಾನವನ್ನು ಪಡೆದು ಸರ್ಕಾರದ ವಿರುದ್ಧವೇ ಮಾತನಾಡುವುದು ಸರಿಯಲ್ಲ. ತಕ್ಷಣವೇ ಅನುದಾನವನ್ನು ನಿಲ್ಲಿಸಬೇಕು’ ಎಂದು ಶಾಸಕರು ಒತ್ತಾಯಿಸಿದರು. ಆಗ ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಅವರು ತಾವು ಹಂಪನಾ ಅವರ ಜೊತೆ ಮಾತನಾಡುವುದಾಗಿ ಭರವಸೆ ನೀಡಿದರು. ಅದರಂತೆಯೇ ಹಂಪನಾ ಅವರನ್ನು ‘ಬಾಲಬ್ರೂಯಿ’ಗೆ ಕರೆಸಿದರು. ಹೇಳಿಕೆಯ ಬಗ್ಗೆ ವಿಚಾರಿಸಿದರು. ಹಂಪನಾ ತಮ್ಮ ನಿಲುವನ್ನು ಸಮರ್ಥಿಸಿಕೊಂಡಾಗ ಅರಸು ಅವರು ‘ಕನ್ನಡಕ್ಕಾಗಿ ಸರ್ಕಾರ ಏನು ಮಾಡಬೇಕು, ಅಧಿಕಾರಿಗಳು ಹೇಗೆ ನಡೆದುಕೊಳ್ಳಬೇಕು ಎನ್ನುವ ಬಗ್ಗೆ ನಮ್ಮ ಐಎಎಸ್ ಅಧಿಕಾರಿಗಳಿಗೆ ಒಂದು ಉಪನ್ಯಾಸ ನೀಡಿ’ ಎಂದು ಆಹ್ವಾನಿಸಿದರು. ಅದರಂತೆ ಕೆಲವೇ ದಿನಗಳಲ್ಲಿ ಆಗಿನ ಮುಖ್ಯ ಕಾರ್ಯದರ್ಶಿಯೂ ಸಹಿತ ನೂರಾರು ಅಧಿಕಾರಿಗಳಿಗೆ ಹಂಪನಾ ಕನ್ನಡದ ಬಗ್ಗೆ ಪಾಠ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಸರ್ಕಾರದ ಅಡಿಯಾಳಲ್ಲ ಎಂಬುದನ್ನು ಸ್ವತಃ ಮುಖ್ಯಮಂತ್ರಿ ಅರಸು ಅವರೇ ಅಂದು ತೋರಿಸಿಕೊಟ್ಟರು.

ಕನ್ನಡ ಸಾಹಿತ್ಯ ಪರಿಷತ್ ಅನ್ನು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೇ ಸ್ಥಾಪಿಸಿದ್ದರೂ ಅದು ಪ್ರಭುತ್ವದ ಹಂಗಿನಲ್ಲಿಯೇ ಇರಬೇಕು ಎಂದು ಅವರು ಬಯಸಿರಲಿಲ್ಲ. ಮಹಾರಾಜರು ಅನುದಾನ ನೀಡುತ್ತಿದ್ದರೂ ಕಸಾಪ ಸ್ವತಂತ್ರ ಸಂಸ್ಥೆಯಾಗಿ ಮುಂದುವರಿಯುವುದಕ್ಕೆ ಉತ್ತೇಜಿಸಿದ್ದರು. ಆರಂಭದ ಹಲವಾರು ವರ್ಷಗಳ ಕಾಲ ಮಹಾರಾಜರೇ ಅದರ ಅಧ್ಯಕ್ಷರಾಗಿದ್ದರು. ಸಾಹಿತಿಗಳು ಉಪಾಧ್ಯಕ್ಷರಾಗಿ ಪರಿಷತ್ ಕೆಲಸ ನಡೆಸಿಕೊಂಡು ಹೋಗುತ್ತಿದ್ದರು. ಹರಿದು ಹಂಚಿಹೋಗಿದ್ದ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸುವುದು, ಕನ್ನಡ ಸಾಹಿತ್ಯಕ್ಕೆ ಉತ್ತೇಜನ ನೀಡುವುದು, ಸಂಶೋಧನೆಗಳಿಗೆ ಅವಕಾಶ ನೀಡುವುದು, ಪುಸ್ತಕಗಳನ್ನು ಪ್ರಕಟಿಸಿ ಸುಲಭ ಬೆಲೆಯಲ್ಲಿ ಸಿಗುವಂತೆ ಮಾಡುವುದು ಮುಂತಾದ ಉದ್ದೇಶಗಳನ್ನು ಇಟ್ಟುಕೊಂಡು ಸಾಹಿತ್ಯ ಪರಿಷತ್ ಆರಂಭಿಸಲಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿವಿಧ ಅಕಾಡೆಮಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮುಂತಾದವುಗಳನ್ನು ಸರ್ಕಾರವೇ ಹುಟ್ಟುಹಾಕಿದ್ದರಿಂದ ಸಾಹಿತ್ಯ ಪರಿಷತ್ ಮಾಡಬೇಕಾಗಿದ್ದ ಕೆಲಸಗಳನ್ನು ಈ ಸಂಸ್ಥೆಗಳು ಮಾಡತೊಡಗಿದವು. ಸಾಹಿತ್ಯ ಪರಿಷತ್ ಕೂಡ ತನ್ನ ಕಾರ್ಯಚಟುವಟಿಕೆಗಳನ್ನು ಬದಲಾಯಿಸಿಕೊಂಡಿತು.



ಕನ್ನಡ ಸಾಹಿತ್ಯ ಪರಿಷತ್ ಕನ್ನಡಿಗರ ಸಾರ್ವಭೌಮ ಸಂಸ್ಥೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಇದೊಂದು ಸ್ವತಂತ್ರ ಸಂಸ್ಥೆ. ಇಲ್ಲಿ ರಾಜಕೀಯ ಇರಬಾರದು. ರಾಜಕೀಯ ಪಕ್ಷಗಳ ಹಸ್ತಕ್ಷೇಪವೂ ಇರಕೂಡದು. ಈ ಹಿಂದೆ ಇಲ್ಲಿ ಬಹಳಷ್ಟು ಮಂದಿ ವಿವಿಧ ರಾಜಕೀಯ ಒಲವಿನ ವ್ಯಕ್ತಿಗಳು, ವಿವಿಧ ಸಿದ್ಧಾಂತಗಳಲ್ಲಿ ನಂಬಿಕೆ ಇಟ್ಟವರು ಅಧ್ಯಕ್ಷರಾಗಿದ್ದರು. ಆದರೆ ಪಕ್ಷ ರಾಜಕೀಯ ಪ್ರವೇಶ ಮಾಡಿರಲಿಲ್ಲ. ಇದೇ ಮೊದಲ ಬಾರಿಗೆ ಅಂತಹ ಒಂದು ಸನ್ನಿವೇಶಕ್ಕೆ ಸಾಹಿತ್ಯ ಪರಿಷತ್ ಸಾಕ್ಷಿಯಾಗಿದೆ. ಮಹೇಶ್ ಜೋಶಿ ಅವರು ಈ ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಲು ಬಿಜೆಪಿ ನೇರವಾಗಿ ಕಾರಣವಾಗಿದೆ ಎನ್ನುವುದು ಈಗ ಗುಟ್ಟಾಗಿ ಉಳಿದಿಲ್ಲ. ‘ನಾನು ಯಾವುದೇ ಪಕ್ಷದ ಬೆಂಬಲಿಗ ಅಲ್ಲ. ಚುನಾವಣೆ ಸಂದರ್ಭದಲ್ಲಿ ಬೆಂಬಲ ನೀಡುವಂತೆ ಎಲ್ಲ ರಾಜಕೀಯ ಪಕ್ಷದವರನ್ನು ಕೇಳಿಕೊಂಡಿದ್ದೇನೆ. ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರೂ ನನ್ನ ಪರವಾಗಿ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಪಕ್ಷದ ಮುಖಂಡರಾದ ಎಚ್.ಕೆ.ಪಾಟೀಲ, ಡಿ.ಆರ್.ಪಾಟೀಲ ಅವರೂ ನನ್ನ ಪರವಾಗಿ ಕೆಲಸ ಮಾಡಿದ್ದಾರೆ. ಅದೇ ರೀತಿ ಬಿಜೆಪಿಯವರೂ ನನಗೆ ಬೆಂಬಲ ನೀಡಿದ್ದಾರೆ. ಇದರಲ್ಲಿ ತಪ್ಪೇನೂ ಇಲ್ಲ’ ಎಂದು ಮಹೇಶ್ ಜೋಶಿ ಸಮರ್ಥಿಸಿಕೊಂಡಿದ್ದಾರೆ. ಅಲ್ಲದೆ ‘ನಾನು ಈಗಲೂ ಸ್ವತಂತ್ರ ವ್ಯಕ್ತಿ. ಚುನಾವಣೆಯಲ್ಲಿ ಬೆಂಬಲ ನೀಡಿದ್ದಾರೆ ಎಂಬ ಕಾರಣಕ್ಕೆ ಅವರ ಅಡಿಯಾಳಲ್ಲ. ಕನ್ನಡಕ್ಕೆ ಅನ್ಯಾಯವಾದರೆ ಸರ್ಕಾರದ ವಿರುದ್ಧ ಹೋರಾಡಲೂ ಸಿದ್ಧ’ ಎಂದು ಅವರು ಹೇಳಿಕೊಂಡಿದ್ದಾರೆ. ಆದರೆ ಈ ಬಾರಿಯ ಕಸಾಪ ಚುನಾವಣೆ ಮತ್ತು ನಂತರದ ವಿದ್ಯಮಾನಗಳು ಜೋಶಿ ಅವರ ಮಾತುಗಳನ್ನು ಜನರು ನಂಬದಂತೆ ಮಾಡಿವೆ.

ಸಾಹಿತ್ಯ ಪರಿಷತ್ ಚುನಾವಣೆಗೆ ರಾಜಕೀಯ ಪಕ್ಷಗಳ ಬೆಂಬಲವನ್ನು ಪಡೆದುಕೊಂಡಿದ್ದೇ ಸರಿಯಲ್ಲ. ಸಾಹಿತ್ಯ ಪರಿಷತ್‌ಗೆ ಕಾಂಗ್ರೆಸ್ ಪಕ್ಷದ ಅಭಯ ಹಸ್ತವಾಗಲೀ ಬಿಜೆಪಿ ಕಮಲದ ಸುವಾಸನೆಯಾಗಲೀ ಜೆಡಿಎಸ್ ತೆನೆಯಾಗಲೀ ಬೇಕಾಗಿಲ್ಲ. ಕನ್ನಡದ ಮತ್ತು ಕನ್ನಡಿಗರ ಅಸ್ಮಿತೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಕನ್ನಡಿಗರು ಹೇಳಿದಂತೆ ಕೇಳುವ, ಕನ್ನಡಿಗರ ಕಷ್ಟಸುಖಗಳಲ್ಲಿ ಭಾಗಿಯಾಗುವ ಅಧ್ಯಕ್ಷ ಬೇಕೇ ವಿನಾ ರಾಜಕೀಯ ಪಕ್ಷವೊಂದರ ಋಣಭಾರದಲ್ಲಿ ಸಿಲುಕಿದ ಅಧ್ಯಕ್ಷರಲ್ಲ.

ಒಂದು ಸಿದ್ಧಾಂತದ ಪಕ್ಷ ಅಧಿಕಾರಕ್ಕೆ ಬಂದರೆ ಅದು ಏನೆಲ್ಲಾ ಮಾಡುತ್ತದೆ ಎನ್ನುವುದು ಈಗಾಗಲೇ ಸಾಬೀತಾಗಿದೆ. ರಾಜ್ಯ ಸರ್ಕಾರದ ವಿವಿಧ ಅಕಾಡೆಮಿಗಳು, ಪ್ರಾಧಿಕಾರಗಳ ನಡವಳಿಕೆ ಹೇಗಿದೆ ಎನ್ನುವುದು ಜಗಜ್ಜಾಹೀರಾಗಿದೆ. ಅದೇ ಮಾದರಿ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿಯೂ ಮುಂದುವರಿಯುವ ಸಾಧ್ಯತೆಯೇ ಹೆಚ್ಚು. ಹಾಗಾಗದಿರಲಿ ಎಂದು ಆಶಿಸೋಣ.

ರಾಜಕೀಯ ಪಕ್ಷದ ಬೆಂಬಲದಿಂದಲೇ ಮಹೇಶ್ ಜೋಶಿ ಗೆದ್ದಿರಬಹುದು. ಆದರೆ ಈಗ ಅವರು ಗಟ್ಟಿತನ ಪ್ರದರ್ಶಿಸಬೇಕಿದೆ. ಋಣಭಾರಕ್ಕೆ ನಲುಗುವುದಿಲ್ಲ ಎಂಬ ಸಂದೇಶವನ್ನು ಸಾರಬೇಕಿದೆ. ಅದರಂತೆಯೇ ನಡೆದುಕೊಳ್ಳಬೇಕಿದೆ. ಕನ್ನಡಿಗರಿಗೆ ಶುಭವಾಗಲಿ, ಶುಭವಾಗಲಿ, ಶುಭವಾಗಲಿ.

ಚುರುಮುರಿ



ಇದೂ ಹಂಗೇನೇ...

● ಬಿ.ಎನ್.ಮಲ್ಲೇಶ್

‘ಸಾ... ದಾವಣಗೆರೇಲಿ ಇಸ್ವ ಕನ್ನಡ ಸಾಹಿತ್ಯ ಸಮ್ಮೇಳನ ಮಾಡ್ತಾರಂತೆ. ಕವಿಗೋಷ್ಠಿ ಅಧ್ಯಕ್ಷತೆಗೆ ನನ್ ಹೆಸರು ರೆಕ್ಮಂಡ್ ಮಾಡಿ ಸಾ...’ ಅಗ್ರ ಉಗ್ರ ಕವಿ ತೆಪರೇಸಿ ಎಮ್ಮೆಲ್ಲೆ ಸಣ್ಣೀರಪ್ಪನ ಹತ್ತಿರ ಬೇಡಿಕೆ ಸಲ್ಲಿಸಿದ.

‘ಲೇಯ್... ಅದು ಪರಿಷತ್ ಅಧ್ಯಕ್ಷರು, ದೊಡ್ಡ ದೊಡ್ಡ ಸಾಯಿತಿಗಳು ಮಾಡೋದು, ನಾವಲ್ಲ...’ ಎಮ್ಮೆಲ್ಲೆ ಅಡ್ಡಡ್ಡ ತಲೆಯಾಡಿಸಿದರು.

‘ಪರಿಷತ್ ಅಧ್ಯಕ್ಷರು ಆಯ್ಕೆ ಮಾಡ್ತಾರೆ ಅಂದ್ರೆ ಹೆಂಗೆ ಸಾ? ಅವರನ್ನ ಆಯ್ಕೆ ಮಾಡಿದ್ದು ನಾವಲ್ವ? ನಮ್ ಪಕ್ಷ ಅಲ್ವ? ನಿಮ್ ಮಾತು ಹೆಂಗೆ ತೆಗೆದುಹಾಕ್ತಾರೆ?’

‘ಅದೂ ಹಂಗಲ್ಲ ಕಣಲೆ, ನಾವೇಳಿದ್ರೆ ಇಲ್ಲ ಅನ್ನಲ್ಲ ಅನ್ನು... ಆದ್ರೆ ಇಸ್ವ ಸಮ್ಮೇಳನದ ಕವಿಗೋಷ್ಠಿಗೆ ನಿನ್ನೆಂಗೆ ಮಾಡೋದು ಅಂತ...’

‘ನನ್ನೆಂಗೆ ಅಂದ್ರೆ? ನಾನೂ ಕವನ ಬರೆದಿದೀನಿ ಸಾ, ಏಳೆಂಟು ಪುಸ್ತಕ ಪ್ರಿಂಟ್ ಮಾಡ್ಸಿ ಪುಗಸಟ್ಟೆ ಹಂಚಿದೀನಿ, ತುಂಡು ಕಾವ್ಯದಿಂದ ಹಿಡ್ದು ಅಖಂಡ ಕಾವ್ಯನೆಲ್ಲ ಬರೆದು ಬಿಸಾಕಿದೀನಿ, ಗೊತ್ತಿಲ್ವ?’

‘ಆಯ್ತಪ್ಪ, ಅದೇನ್ ಬರೆದು ಗುಡ್ಡೆ ಹಾಕಿದೀಯ ಒಂದೆಲ್ಡು ಹೇಳು ನೋಡಾಣ...’ ಎಮ್ಮೆಲ್ಲೆ ಸವಾಲು ಹಾಕಿದರು.

ತೆಪರೇಸಿ ಶುರು ಮಾಡಿದ ‘ಇಕ್ರಲಾ ಒದರ್ಲಾ...’

‘ಲೇ, ತಡಿಯೋ ಇದು ನಮ್ಮ ದಲಿತ ಕವಿ ಸಿದ್ಲಿಂಗಯ್ಯ ಅವರದಲ್ವೇನೋ?’

‘ಸರಿ, ಬ್ಯಾಡ ಬುಡಿ, ಇದ್ನ ಕೇಳಿ... ಓ ನನ್ನ ಚೇತನಾ... ಆಗು ನೀ ಅನಿಕೇತನಾ...’

‘ಲೇಯ್ ಇದು ನಮ್ಮ ಕುವೆಂಪು ಅವರದಲ್ಲೇನೋ?’

‘ನೀವೊಳ್ಳೆ ಸುಮ್ಕಿರಿ ಸಾ, ಎಲ್ಲರ ಕವನ ತಗಂಡೇ ನಾವು ಸಾಯಿತಿಗಳಾಗೋದು. ಈಗ ಎಲ್ಲ ಪಕ್ಷದ ಎಮ್ಮೆಲ್ಲೆಗಳನ್ನ ತಗಂಡು ನೀವು ಸರ್ಕಾರ ನಡೆಸ್ತಿಲ್ವಾ? ಹಂಗೇ ಇದೂನು...’

ತೆಪರೇಸಿ ವಾದಕ್ಕೆ ಎಮ್ಮೆಲ್ಲೆ ಪಿಟಿಕ್ಕೆನ್ನಲಿಲ್ಲ.

ಸಂಗತ

ನ್ಯಾಯವೂ ಅದರ ಭಾಷೆಯೂ

ಎಲ್ಲ ವಲಯಗಳಲ್ಲಿನ ಪ್ರಜೆಯ ಭಾಷಾ ಹಕ್ಕನ್ನು ಯಾರೂ ಕೇಳದಾಗಿದ್ದಾರೆ

● ಡಿ.ಎಸ್.ನಾಗಭೂಷಣ

‘ಕಲಾಪ: ಕನ್ನಡಕ್ಕೆ ಸಲ್ಲುವುದೇ ನ್ಯಾಯ?’ ಎಂಬ ಕೆ.ಬಿ.ಕೆ. ಸ್ವಾಮಿ ಅವರ ಲೇಖನವು (ಪ್ರ.ವಾ., ನ. 23) ನಮ್ಮ ನ್ಯಾಯಾಂಗದಲ್ಲಿ ಸ್ಥಳೀಯ ಭಾಷೆಯನ್ನು ಬಳಸದೆ ಸಾಮಾನ್ಯ ಪ್ರಜೆಯ ಒಂದು ಪ್ರಜಾಸತ್ತಾತ್ಮಕ ಹಕ್ಕನ್ನು ನಿರಾಕರಿಸಲಾಗುತ್ತಿರುವ ವಿದ್ಯಮಾನದ ವಿಪರ್ಯಾಸ- ವಿರೋಧಾಭಾಸಗಳ ಮೇಲೆ ವಿಶೇಷ ಬೆಳಕು ಚೆಲ್ಲುವಂತಿದೆ. ದಿನೇ ದಿನೇ ನಮ್ಮ ಶಿಕ್ಷಣ ಕ್ರಮದಲ್ಲಿ ಕನ್ನಡ ಭಾಷೆಯ ಕಲಿಕೆಯ ಅವಕಾಶಗಳು ಕಮ್ಮಿಯಾಗುತ್ತಿರುವುದರ ಜೊತೆಗೆ ಈ ಕಲಿಕೆಯನ್ನೂ ವಿವಿಧ ಕಾನೂನುಗಳ ನೆಲೆಗಳಲ್ಲಿ ಪ್ರಶ್ನಿಸುವ ಪ್ರವೃತ್ತಿ ಹೆಚ್ಚುತ್ತಿರುವ ಕಾಲದಲ್ಲಿ ಇಂತಹ ವಿಶ್ಲೇಷಣೆಗಳು ವಿಚಿತ್ರವಾಗಿಯೂ ಆಶ್ಚರ್ಯಕರವಾಗಿಯೂ ಕಾಣುತ್ತವೆ.


ಕಕ್ಷಿದಾರನ ಭಾಷಾ ಹಕ್ಕನ್ನು ನಿರ್ಲಕ್ಷಿಸಿರುವ ಮತ್ತು ಹೈಕೋರ್ಟಿನಲ್ಲಿ ಕನ್ನಡವನ್ನು ಅಧಿಕೃತ ಕಲಾಪಗಳ ಭಾಷೆಯನ್ನಾಗಿ ಮಾಡಲು ನಮ್ಮ ಸಂವಿಧಾನದಲ್ಲಿ ಅವಕಾಶವಿದ್ದರೂ ಅದು ಅನುಷ್ಠಾನಗೊಳ್ಳದಿರುವ ಪರಿಸ್ಥಿತಿಯನ್ನು ವಿವರಿಸಲಾಗಿದೆ. ಆದರೆ ಇದೆಲ್ಲದರ ಹಿಂದಿನ ಬೇರುಮಟ್ಟದ ಕಾರಣಗಳನ್ನು ಗುರುತಿಸದೇ ಹೋಗಿದೆ. ಇದು ನ್ಯಾಯಾಂಗದಲ್ಲಿ ಮಾತ್ರವಲ್ಲ, ಆಧುನಿಕ ಬದುಕಿನ ಎಲ್ಲ ವಲಯಗಳಲ್ಲಿ ಸ್ಥಳೀಯ ಭಾಷೆಯ ಬಳಕೆ ಕಮ್ಮಿಯಾಗಲು ಕಾರಣವಾಗಿದೆ. ಈ ಕಾರಣವೆಂದರೆ, ಕನ್ನಡ ಭಾಷೆ ಆಧುನಿಕ ಬದುಕಿನ ಭಾಷೆಯಾಗಿ ವಿಕಾಸವಾಗದಿರುವುದು. ಇದಕ್ಕೆ ಮೂಲ ಕಾರಣವೆಂದರೆ, ನಾವು ಆಧುನಿಕ ಎಂದು ಅನುಸರಿಸುತ್ತಿರುವ ಆಧುನಿಕ ಜೀವನಕ್ರಮವು ಪಶ್ಚಿಮದ ವಿದ್ಯೆಗಳ ಪರಿಣಾಮವಾಗಿದ್ದು ಕನ್ನಡ ಅವುಗಳ ಪರಿಭಾಷೆಗಳಿಗೆ ಅಪರಿಚಿತವಾಗಿರುವುದು.

ಈ ವಿದ್ಯೆಗಳನ್ನು ಒಂದು ಮಟ್ಟದವರೆಗೆ ಕನ್ನಡ ಭಾಷೆಗೆ ಅನುವಾದಿಸಬಹುದೇ ಹೊರತು, ಅವುಗಳ ಎಲ್ಲ ಚಲನಶೀಲ ರೂಪಗಳನ್ನಲ್ಲ. ಹಾಗೇ ಅನುವಾದ ಯಾವಾಗಲೂ ಅನುವಾದವೇ. ಆದ್ದರಿಂದಲೇ ನಮ್ಮ ಬದುಕು ಕೂಡ ಪಶ್ಚಿಮದ ಅನುಕರಣೆ ಅನ್ನಿಸಿಕೊಂಡಿರುವುದು. ಈ ಬಗ್ಗೆ ನಮಗೇನೂ ಕೀಳರಿಮೆ ಇಲ್ಲದಿರುವುದರಿಂದ ಕಕ್ಷಿದಾರನ ಭಾಷೆಯ ಹಕ್ಕಿನಂತೆಯೇ ಬದುಕಿನ ಇತರೆಲ್ಲ ವಲಯಗಳಲ್ಲಿನ ಪ್ರಜೆಯ ಭಾಷಾ ಹಕ್ಕುಗಳನ್ನೂ ಯಾರೂ ಕೇಳದಾಗಿದ್ದಾರೆ.

ನ್ಯಾಯಾಂಗದಲ್ಲಿ ಪ್ರಜೆಯ ಭಾಷಾ ಹಕ್ಕಿನ ಪ್ರಶ್ನೆಯನ್ನೇ ತೆಗೆದುಕೊಂಡರೆ, ಈ ಪ್ರಶ್ನೆಯ ಮೂಲ ಇರುವುದು ನಾವು ಕಟ್ಟಿಕೊಂಡ ರಾಷ್ಟ್ರಪ್ರಭುತ್ವದ ಸ್ವರೂಪ ಮತ್ತು ಅದನ್ನು ನಿರ್ವಹಿಸಲು ನಾವು ರೂಪಿಸಿಕೊಂಡ ಸಂವಿಧಾನವು ಪಶ್ಚಿಮದಿಂದ ರಫ್ತು ಮಾಡಿಕೊಂಡಿದ್ದರಲ್ಲಿ ಎಂಬುದು ಗೊತ್ತಾಗುತ್ತದೆ. ಅಂದರೆ ಅಲ್ಲಿಂದ ಅದು ಅಲ್ಲಿನ ಭಾಷೆಯಲ್ಲಿ ಹೆಪ್ಪುಗಟ್ಟಿದ ಪರಿಕಲ್ಪನೆಗಳಲ್ಲಿ ಮತ್ತು ನುಡಿಗಟ್ಟುಗಳಲ್ಲಿ ನಮಗೆ ಬಂದಿದೆ. ಅವೆಲ್ಲ ನಮ್ಮ ಬದುಕಿನ ಸನ್ನಿವೇಶಗಳಲ್ಲಿ ರೂಪುಗೊಂಡ ನಮ್ಮ ಭಾಷೆಯಲ್ಲಿ ವ್ಯಕ್ತವಾಗುವುದು ಕಷ್ಟ. ಏಕೆಂದರೆ ಭಾಷೆ ಎಂಬುದು ಜ್ಞಾನದ ‘ಮಾಧ್ಯಮವಲ್ಲ’, ಬದಲಿಗೆ ಅದೇ ಜ್ಞಾನವಾಗಿರುತ್ತದೆ. ಅಂದರೆ ಜ್ಞಾನ ಮತ್ತು ಭಾಷೆ ಸಹವರ್ತಿಗಳು. ಹಾಗೆಂದೇ ನಮ್ಮ ಸಂವಿಧಾನದ ಅಧಿಕೃತ ಕನ್ನಡಾನುವಾದ ಬಹುಕಾಲದಿಂದ ಲಭ್ಯವಿದ್ದರೂ ಅದು ಗ್ರಂಥಾಲಯದಾಚೆ ಹೊರಬರಲಾಗಿಲ್ಲ, ಹಾಗೇ ಕಕ್ಷಿದಾರನ ಭಾಷಾ ಹಕ್ಕು ಕೂಡ.

ಇದರ ಪರಿಣಾಮವೆಂದರೆ, ನಮ್ಮದು ಎಲ್ಲರಿಗೂ ಮತದಾನದ ಹಕ್ಕು ಇರುವ ಪ್ರಜಾಸತ್ತೆ ಎನಿಸಿದರೂ ಆ ಹಕ್ಕು ನಿಜವಾಗಿ ಚಲಾವಣೆಯಾಗುವುದು ‘ಕಲಿತವರ’ ರಾಜ್ಯಭಾರದ ಪ್ರಜಾಸತ್ತೆಗಾಗಿ! ಇಲ್ಲಿ ಕಲಿತವರ ಎಂದರೆ ಸ್ಥಳೀಯ ಭಾಷೆ ಕಲಿತವರ ಎಂದಂತೂ ಅಲ್ಲ. ಪ್ರಸಕ್ತ ರಾಷ್ಟ್ರಪ್ರಭುತ್ವದ ಸ್ವರೂಪವನ್ನು ಅರ್ಥ ಮಾಡಿಸುವ ಭಾಷೆಯನ್ನು ಕಲಿತವರು ಎಂದು. ಹಾಗಾಗಿಯೇ ಜನರ ಸಬಲೀಕರಣದ ಹೆಸರಿನಲ್ಲಿ ಈ ರಾಷ್ಟ್ರಪ್ರಭುತ್ವದ ಪಾತ್ರ ನಮ್ಮ ದೈನಂದಿನ ಬದುಕಿನ ಮೂಲೆ ಮೂಲೆಗಳಿಗೂ ಹಬ್ಬುತ್ತಿದ್ದಂತೆ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ನೂಕುನುಗ್ಗಲು ಹೆಚ್ಚಾಗುತ್ತಿರುವುದು.

ಇಂತಹ ಪರಿಸ್ಥಿತಿಯಲ್ಲಿ ಉನ್ನತ ನ್ಯಾಯಾಂಗದಲ್ಲಿ ಸ್ಥಳೀಯ ಭಾಷೆಯ ಬಗ್ಗೆ ಮಾತನಾಡುವುದು ವ್ಯರ್ಥ ಎಂದೇ ನನಗನ್ನಿಸುತ್ತದೆ. ಹಾಗೆ ನೋಡಿದರೆ ನ್ಯಾಯಾಂಗದ ಕೆಳ ಹಂತಗಳಲ್ಲಿಯೂ ಸ್ಥಳೀಯ ಭಾಷೆ ಹೆಚ್ಚು ಕಾಲ ಉಳಿಯಲಾರದೆಂದೇ ಹೇಳಬೇಕು. ಆದರೆ ಕಲಿತ ಭಾಷೆಯೊದರ ಮೂಲಕ ನಿರ್ವಹಿಸಲ್ಪಟ್ಟ ವ್ಯಾಜ್ಯ ಮತ್ತು ಆ ಮೂಲಕ ದೊರೆಯುವ ನ್ಯಾಯ ಎಂತಹ ಗುಣಮಟ್ಟದ್ದು ಎಂಬ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕಾಗಿದೆ. ಏಕೆಂದರೆ ಅದು ‘ಕಲಿತ’ ಅನ್ಯರಿಗೆ ನೀಡಲಾದ ಹೊರಗುತ್ತಿಗೆಯ ಮೂಲಕ ದೊರೆತ ‘ರಚಿಸಲ್ಪಟ್ಟ’ ನ್ಯಾಯವಾಗಿರುತ್ತದೆಯೇ ಹೊರತು ನೀನೇ ಸಹಜವಾಗಿ ಪಡಕೊಂಡ ನ್ಯಾಯವಾಗಿರುವುದಿಲ್ಲ. ಹಾಗಾಗಿ ಅದು ಪರಿಣಾಮದಲ್ಲಿ ಅನ್ಯಾಯವಾಗಿರುವ ಸಾಧ್ಯತೆಗಳೂ ಇರುತ್ತವೆ. ಹಾಗೆಂದೇ ನಮ್ಮ ಕೋರ್ಟುಗಳ ಬಗ್ಗೆ ‘ಗೆದ್ದವನು ಸೋತ, ಸೋತವನು ಸತ್ತ’ ಎಂಬ ನಾಣ್ಣುಡಿ ಚಲಾವಣೆಗೆ ಬಂದಿರುವುದು.



ಇದಕ್ಕೆ ಮುಖ್ಯ ಕಾರಣ, ನಮ್ಮ ಸಾಮಾನ್ಯ ಜನರ ಬಹುತೇಕ ವ್ಯಾಜ್ಯಗಳು ಸ್ಥಳೀಯ ಭಾಷೆಯ ತೆಕ್ಕೆಗೆ ಸಿಗದ ಕಾನೂನು ಪರಿಭಾಷೆಯ ಗೊಂದಲದಲ್ಲಿ ಹುಟ್ಟಿ ಬೆಳೆಯುವಂತಹವು. ಇದಕ್ಕೆ ಮತ್ತೆ ಕಾರಣ, ಪರ ಭಾಷೆಯಲ್ಲಿ ಮಾತ್ರ ಕ್ರಿಯಾಶೀಲವಾಗಬಲ್ಲ ವಿಧಿ ವಿಧಾನ- ಕಾನೂನುಗಳ ಮೂಲಕ ನಮ್ಮ ರಾಷ್ಟ್ರ ಪ್ರಭುತ್ವವನ್ನು ನಾವು ವಿನ್ಯಾಸಗೊಳಿಸಿಕೊಂಡಿರುವುದು. ಹಾಗಾಗಿ ನಮ್ಮದೇ ಭಾಷೆಯಲ್ಲಿ ನಾವೇ ಪಡೆದುಕೊಳ್ಳಬಹುದಾದ ಸಹಜ ಗುಣಮಟ್ಟದ ನ್ಯಾಯ ಬೇಕೆಂದರೆ ಈ ರಾಷ್ಟ್ರಪ್ರಭುತ್ವದ ಸಂಕೀರ್ಣತೆಯನ್ನು ಸರಳಗೊಳಿಸಿಕೊಳ್ಳುವುದೇ ಆಗಿದೆ. ಇದರ ಮೊದಲ ಹೆಜ್ಜೆ ಎಂದರೆ ರಾಜ್ಯಗಳಿಗೆ ಸ್ವಂತ ಉಸಿರಾಡುವಷ್ಟು ಸ್ವಾಯತ್ತತೆ ಇರುವ ಒಂದು ನಿಜವಾದ ಒಕ್ಕೂಟ ರಾಷ್ಟ್ರದ ರಚನೆಗಾಗಿ ಆಗ್ರಹಿಸುವುದು, ಅಂದರೆ ಪ್ರಭುತ್ವವನ್ನು ನಮ್ಮ ಭಾಷೆ-ನುಡಿಗಟ್ಟಿಗೆ ಪಳಗಿಸಿಕೊಳ್ಳುವುದು.

ವಾಚಕರ ವಾಣಿ

ಭದ್ರತೆ ನೆಪದಲ್ಲಿ ತೊಂದರೆ ಸಲ್ಲ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಶಿವಮೊಗ್ಗದಲ್ಲಿ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಹೋಗುವ ಮಾರ್ಗಮಧ್ಯ ಮಧ್ಯಾಹ್ನ 3ರ ವೇಳೆಗೆ ಸುಮಾರು 15 ನಿಮಿಷ ಚಿತ್ರದುರ್ಗ ನಗರದ ಹೃದಯ ಭಾಗದಲ್ಲಿನ ಪ್ರವಾಸಿ ಮಂದಿರದಲ್ಲಿ ತಂಗಿದ್ದರು. ಇವರು ಚಿತ್ರದುರ್ಗಕ್ಕೆ ಆಗಮಿಸುವ ಎರಡು ಗಂಟೆ ಮುಂಚೆಯೇ ತಂಗುವ ಸ್ಥಳದ ಸುತ್ತ ಭದ್ರತೆ ದೃಷ್ಟಿಯಿಂದ ಸುಮಾರು ಒಂದು ಕಿ.ಮೀ. ಉದ್ದದ ರಸ್ತೆಯುದ್ದಕ್ಕೂ ಪೊಲೀಸರು ಅಂಗಡಿಗಳನ್ನು ಮುಚ್ಚಿಸಿದ್ದರು. ಇದಲ್ಲದೆ ಪ್ರಧಾನ ರಸ್ತೆ ಹಾಗೂ ಅದನ್ನು ಸಂಪರ್ಕಿಸುವ ಎಲ್ಲಾ ರಸ್ತೆಗಳಲ್ಲಿ ಒಂದು ಗಂಟೆ ಕಾಲ ಸಂಚಾರ ನಿರ್ಬಂಧಿಸಿದ್ದರು. ಇದರಿಂದ ಸಾಮಾನ್ಯ ಜನರಿಗೆ ಬಹಳಷ್ಟು ತೊಂದರೆಯಾಯಿತು ಮತ್ತು ಬೇಸರ ಉಂಟಾಯಿತು. ಅವರು ತಂಗುವ ಸ್ಥಳದಿಂದ ಸುತ್ತಲೂ ನೂರು ಮೀಟರ್ ದೂರದವರೆಗೆ ನಿರ್ಬಂಧ ಹೇರಿದರೆ ಅಷ್ಟಾಗಿ ತೊಂದರೆ ಆಗದು.

ವಿವಿಐಪಿಗಳಿಗೆ ಭದ್ರತೆ ಒದಗಿಸುವುದು ಪೊಲೀಸರ ಕರ್ತವ್ಯ ನಿಜ. ಆದರೆ ಅದಕ್ಕಾಗಿ ಜನರಿಗೆ ಈ ಪರಿ ತೊಂದರೆ ನೀಡುವುದು ಸಲ್ಲ. ತಮ್ಮ ಓಡಾಟದಲ್ಲಿ ಜನಸಾಮಾನ್ಯರಿಗೆ ತೊಂದರೆ ಆಗದಂತೆ ಅಧಿಕಾರಿಗಳು ಮತ್ತು ವಿವಿಐಪಿಗಳು ತಕ್ಷಣ ಗಮನ ಹರಿಸುವುದು ಸೂಕ್ತ.

ವಿ.ತಿಪ್ಪೇಸ್ವಾಮಿ, ಹಿರಿಯೂರು

ನೀರು ಪೋಲು: ನಿಲ್ಲಲಿ ಅಪಸವ್ಯ

ಜೋಗದಲ್ಲಿ ತಂಗಿದ್ದ ರಾಜ್ಯಪಾಲರನ್ನು ಖುಷಿಪಡಿಸಲಿಕ್ಕಾಗಿ ಲಿಂಗನಮಕ್ಕಿ ಜಲಾಶಯದಿಂದ 800 ಕ್ಯುಸೆಕ್ ನೀರನ್ನು ಯಾವುದೇ ಮುನ್ಸೂಚನೆ ನೀಡದೆ ಪೋಲು ಮಾಡಿದ ವಿಚಾರ ತಿಳಿದು ಬೇಸರವಾಯಿತು. ಅನ್ನದಾತ ಬೆಳೆದ ಬೆಳೆಗೆ ನೀರು ಸಾಲದೆ ಒಣಗಿದ ಸಂದರ್ಭದಲ್ಲಿ ನೀರು ಕೇಳಿದರೆ ನೂರೆಂಟು ಸಬೂಬು ಹೇಳುವ ಅಧಿಕಾರಿಗಳು, ಈಗ ಒಬ್ಬ ವ್ಯಕ್ತಿಯ ವೈಯಕ್ತಿಕ ಖುಷಿಗಾಗಿ ಇಷ್ಟೊಂದು ಪ್ರಮಾಣದ ನೀರು ಹರಿಸಿರುವುದು ಅಕ್ಷಮ್ಯ. ನೈಸರ್ಗಿಕ ಸಂಪನ್ಮೂಲಗಳನ್ನು ಸಮಾಜದ ಅವಶ್ಯಕತೆಗಾಗಿ ಮಾತ್ರ ಬಳಸಬೇಕೇ ವಿನಾ ವೈಯಕ್ತಿಕ ಸಂತೋಷಕ್ಕಲ್ಲ. ಅವು ಎಲ್ಲರಿಗೂ ಸೇರಿದವು. ಇನ್ನಾದರೂ ಇಂತಹ ಅಪಸವ್ಯಗಳು ನಿಲ್ಲಲಿ. ಅಂತಹ ಸೌಂದರ್ಯ ಕಣ್ತುಂಬಿಕೊಳ್ಳುವ ಇರಾದೆ ಇದ್ದರೆ ಜಲಾಶಯದಿಂದ ನೀರನ್ನು ಹೊರಬಿಟ್ಟಾಗ ಯಾರು ಬೇಕಾದರೂ ಹೋಗಿ ನೋಡಬಹುದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಉಪನ್ಯಾಸಕರ ನೇಮಕ: ಅರ್ಹತೆಗೆ ಸಿಗಲಿ ತಕ್ಕ ನ್ಯಾಯ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಎರಡು ವರ್ಷಗಳಿಂದ ಅತಿಥಿ ಉಪನ್ಯಾಸಕರನ್ನು ಮುಂದುವರಿಸಲು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದ್ದರಿಂದ, ಈ ಅವಧಿಯಲ್ಲಿ ಎಂ.ಫಿಲ್ ಮತ್ತು ಪಿಎಚ್.ಡಿ ಪದವಿಯಂತಹ ಉನ್ನತ ಪದವಿ ಮುಗಿಸಿದ ಸಾವಿರಾರು ಅಭ್ಯರ್ಥಿಗಳು ಕೆಲಸವಿಲ್ಲದೆ ಪರದಾಡುವಂತಾಗಿದೆ. ಈ ವರ್ಷ ಕೋವಿಡ್ ಪರಿಣಾಮದಿಂದಾಗಿ ದ್ವಿತೀಯ ಪಿಯುವಿನಲ್ಲಿ ನೂರಕ್ಕೆ ನೂರರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿರುವುದರಿಂದ ರಾಜ್ಯದ ಎಲ್ಲಾ ಪದವಿ ಕಾಲೇಜುಗಳಲ್ಲಿ ಅತಿ ಹೆಚ್ಚು ಪ್ರವೇಶಾತಿ ದಾಖಲಾಗಿದೆ. ಈ ಕಾರಣದಿಂದ ಹೆಚ್ಚುವರಿ ಕಾರ್ಯಭಾರವಿರುವ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಿಸಿ ಕೊಳ್ಳಲು ಉನ್ನತ ಶಿಕ್ಷಣ ಇಲಾಖೆ ಆದೇಶ ಹೊರಡಿಸಿ ತ್ತಾದರೂ ಯಾವ ಕಾಲೇಜಿನಲ್ಲಿ ಕಾರ್ಯಭಾರ ಇದೆ ಎಂಬುದನ್ನು ತಿಳಿಯಲು ಅಭ್ಯರ್ಥಿಗಳು ಹರಸಾಹಸ ಪಡುವಂತಾಗಿದೆ. ಕಳೆದ ವರ್ಷಗಳಲ್ಲಿ ಶಿಕ್ಷಣ ಇಲಾಖೆ ಆನ್‌ಲೈನ್ ಮೂಲಕ ಅರ್ಜಿ ಕರೆದಿತ್ತಾದ್ದರಿಂದ ಅಭ್ಯರ್ಥಿ ಗಳಿಗೆ ಹೆಚ್ಚು ಅನುಕೂಲವಾಗಿತ್ತು. ಆದರೆ ಈ ವರ್ಷ ಆಫ್‌ಲೈನ್ ಅರ್ಜಿ ಕರೆದಿರುವುದು ಅವರನ್ನು ಗೊಂದಲಕ್ಕೆ ಈಡುಮಾಡಿದೆ. ಅದರಿಂದಾಗಿ ಉದ್ಯೋಗಾಕಾಂಕ್ಷಿಗಳಿಗೆ ಅರ್ಹತೆಗೆ ತಕ್ಕ ನ್ಯಾಯ ಸಿಗುವುದು ಕಷ್ಟವಾಗಿದೆ. ಹಾಗಾಗಿ ಈ ಪ್ರಕ್ರಿಯೆ ಕುರಿತು ಸರ್ಕಾರ ಮತ್ತು ಇಲಾಖೆ ಗಮನಹರಿಸಿ ಅಭ್ಯರ್ಥಿಗಳ ಗೊಂದಲವನ್ನು ಪರಿಹರಿಸಬೇಕು.

ಡಾ. ಕನಕರಾಯ ಕೆ. ನಾಯಕ, ಮಾನ್ವಿ

ಅನುಮಾನ...!

ಭ್ರಷ್ಟ ಅಧಿಕಾರಿಗಳ ನಿವಾಸದ
ಮೇಲೆ ಎಸಿಬಿ ದಾಳಿ,
ಈಗ ಅನುಮಾನ ಶುರುವಾಗಿದೆ...
ದಾಳಿ ನಡೆದಿದ್ದು ಚಿನ್ನದ ಅಂಗಡಿಯ ಮೇಲೋ
ಅಥವಾ ಆರ್‌ಬಿಐ ಮೇಲೋ?!
ಅಷ್ಟೊಂದು ಚಿನ್ನ, ನಗದು
ಸಿಗುವುದು ಅಲ್ಲೇ ತಾನೆ?!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಆನ್‌ಲೈನ್ ಮಾಡಿ, ಮರ ಉಳಿಸಿ

ಬಂಗಾರದ ಬೆಲೆಯಂತೆ ಕಾಗದದ ಬೆಲೆಯಲ್ಲಿ ಪ್ರತಿನಿತ್ಯ ಏರಿಕೆ- ಇಳಿಕೆ ಉಂಟಾಗುತ್ತದೆ. ಇದು ಆಶ್ಚರ್ಯ ಎನಿಸಿದರೂ ಸತ್ಯ. ಇತ್ತೀಚೆಗೆ ಸಹೋದರನ ವಿವಾಹ ಆಮಂತ್ರಣ ಪತ್ರಿಕೆಯನ್ನು ಮಾಡಿಸುವ ಸಂದರ್ಭದಲ್ಲಿ ಈ ವಿಚಾರ ತಿಳಿಯಿತು. ರಾಜ್ಯದಲ್ಲಿ ಈಗ ಪದವೀಧರ ಕ್ಷೇತ್ರಕ್ಕೆ ಮತದಾರರ ನೋಂದಣಿ ಕಾರ್ಯ ನಡೆಯುತ್ತಿದೆ. ಹೊಸ ಮತದಾರರಲ್ಲದೆ, ಈಗಾಗಲೇ ನೋಂದಣಿಯಾಗಿರುವ ಮತದಾರರು ಸಹ ನೋಂದಣಿಗಾಗಿ ಹೊಸದಾಗಿ ಅರ್ಜಿ ತುಂಬಬೇಕಾಗಿದೆ. ಇದಕ್ಕಾಗಿ ಕೋಟ್ಯಂತರ ಅರ್ಜಿಗಳನ್ನು ಮುದ್ರಿಸಿ ವಿತರಿಸಲಾಗಿದೆ. ಅಮೂಲ್ಯವಾದ ಟನ್‌ಗಟ್ಟಲೆ ಕಾಗದವನ್ನು ಈ ಉದ್ದೇಶಕ್ಕಾಗಿ ವ್ಯರ್ಥ ಮಾಡುತ್ತಿರುವುದು ಎಷ್ಟರಮಟ್ಟಿಗೆ ಸರಿ? ಮತದಾರರ ನೋಂದಣಿಯನ್ನು ಆನ್‌ಲೈನ್ ಮಾಡಿದಲ್ಲಿ ಅಮೂಲ್ಯವಾದ ಕಾಗದ ಉಳಿಯುತ್ತದೆ.


ದುರಂತವೆಂದರೆ, ಪದವೀಧರರ ನೋಂದಣಿಗೆ ಅರ್ಜಿ ನಮೂನೆ ಮಾತ್ರ ಆನ್‌ಲೈನ್‌ನಲ್ಲಿ ಲಭ್ಯವಿದ್ದು ಅದನ್ನು ಡೌನ್‌ಲೋಡ್ ಮಾಡಿ ಪ್ರಿಂಟ್ ತೆಗೆದು ತುಂಬಿ ಸಲ್ಲಿಸಬೇಕು. ಸರ್ಕಾರ ಈ ಕೂಡಲೇ ಸೂಕ್ತ ನಿಯಮ ಜಾರಿಗೆ ತಂದು, ನೋಂದಣಿಯನ್ನು ಆನ್‌ಲೈನ್ ಮಾಡಿ, ಪ್ರತಿಬಾರಿ ಟನ್‌ಗಟ್ಟಲೆ ಅಮೂಲ್ಯ ಕಾಗದ ವ್ಯರ್ಥವಾಗದಂತೆ ನಿಯಮವನ್ನು ಜಾರಿಗೊಳಿಸಬೇಕು.

ಎಸ್.ರವಿ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸಚಿವ ಸಂಪುಟದಲ್ಲಿ ಚರ್ಚಿಸದೆ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಪ್ರಧಾನಿ ಘೋಷಿಸಿದ್ದು ಸರಿಯೇ?

ಮುಖಂಡ ರಾಜನಾದ, ಕೊನೆಗೆ ನಿರಂಕುಶ ಪ್ರಭುವಾದ...



● ಕೆ.ಆರ್.ರಮೇಶ್‌ಕುಮಾರ್

ರೈತ ಸಮೂಹವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ಕಾಯ್ದೆಗಳನ್ನು ಜಾರಿಗೆ ತರಲಾಗಿತ್ತು. ನಂತರ, ಗಾಂಧಿ ಮಾರ್ಗವನ್ನು ಹಿಡಿದು ಚಳವಳಿಗೆ ಇಳಿದ ರೈತರ ಚಾರಿತ್ರ್ಯವಧೆ ಮಾಡಲಾಯಿತು. ಇದಾದ ನಂತರ, ವಿಧಿ ಇಲ್ಲದೆ, ಏಕಾಏಕಿ ಕಾಯ್ದೆಗಳನ್ನು ವಾಪಸ್ ಪಡೆಯಲಾಗುವುದು ಎಂದು ಘೋಷಿಸಿದ್ದು ಆತಂಕಕ್ಕೆ ಒಳಗಾದ ಒಬ್ಬ ಸರ್ವಾಧಿಕಾರಿಯ ಲಕ್ಷಣವನ್ನು ಸ್ಪಷ್ಟವಾಗಿ ತೋರಿಸುತ್ತದೆ

ಕೃಷಿ ಕ್ಷೇತ್ರದ ಸುಧಾರಣೆಯ ಹೆಸರಿನಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ, ಪ್ರಧಾನಿಯವರು ಸಚಿವ ಸಂಪುಟದಲ್ಲಿ ಚರ್ಚೆಯನ್ನೇ ನಡೆಸದೆ ಘೋಷಿಸಿದ್ದಾರೆ. ಜನಾಗ್ರಹಕ್ಕೆ ಮಣಿದು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದು ಸ್ವಾಗತಾರ್ಹ ನಿರ್ಧಾರ. ಆದರೆ, ಸಂವಿಧಾನ ಆಧಾರಿತ, ಸಂಸದೀಯ ಪ್ರಜಾಸತ್ತೆಯ ನೀತಿ ನಿಯಮಗಳನ್ನೆಲ್ಲ ಗಾಳಿಗೆ ತೂರಿರುವುದು ಸರ್ವಾಧಿಕಾರಿ ಧೋರಣೆ. ನಿರಂಕುಶಾಧಿಪತ್ಯದಿಂದ ಪ್ರಜಾಪ್ರಭುತ್ವ, ಸಂವಿಧಾನ ಆಧಾರಿತ ವ್ಯವಸ್ಥೆ ಹೇಗೆ ಜಾರಿಗೆ ಬಂತು ಎಂಬುದನ್ನು ಆಳುವ ವರ್ಗಕ್ಕೆ ಈ ಸನ್ನಿವೇಶದಲ್ಲಿ ನೆನಪಿಸಿಕೊಡಬೇಕಾದುದು ಅನಿವಾರ್ಯವಾಗಿದೆ.

ಮೃಗೀಯ ಬದುಕನ್ನು ನಡೆಸುತ್ತಿದ್ದ ಮನುಷ್ಯ ಸ್ವೇಚ್ಛಾಜೀವಿಯಾಗಿದ್ದ. ತನ್ನ ಸ್ವೇಚ್ಛೆಯನ್ನು ಕಳೆದುಕೊಂಡು ಕ್ರಮೇಣ ಬಲಾಢ್ಯನೊಬ್ಬನ ಮುಖಂಡತ್ವಕ್ಕೆ ಒಳಪಡುತ್ತಾನೆ. ಕೇವಲ ಮಾಂಸಖಂಡಗಳ ಬಲದಿಂದಲೇ ಮುಖಂಡನಾದವನು ರಾಜನೂ ಆಗುತ್ತಾನೆ, ಚಕ್ರವರ್ತಿಯೂ ಆಗುತ್ತಾನೆ. ರಾಜನಿಗೆ ಎದುರಿಲ್ಲ, ಇದರ ಪರಿಣಾಮವಾಗಿ ರಾಜ ನಿರಂಕುಶ ಪ್ರಭು ಆಗುತ್ತಾನೆ. ಹಾಗಾಗಿ ಇವನ ಎದುರು ಬಲಹೀನನಿಗೆ ಇಷ್ಟಾನಿಷ್ಟಗಳ ವಿಚಾರದಲ್ಲಿ ಸ್ವಾತಂತ್ರ್ಯ ಇರುವುದಿಲ್ಲ. ಇದರ ಪರಿಣಾಮ ರಾಜ ಮದಗಜವಾಗುತ್ತಾನೆ.

ರಾಜಾಜ್ಞೆ ಅಂದರೆ ಕಟ್ಟಪ್ಪಣೆಯು ಮಾತ್ರ. ಮೇಲ್ಮನವಿಗೆ ಅವಕಾಶವೇ ಇರುವುದಿಲ್ಲ. ವಿವೇಕದ ಮಾತೂ ಇರುವುದಿಲ್ಲ. ಈ ಕಾರಣದಿಂದಾಗಿಯೇ, ರಾಜನೆಂಬ ಮದಗಜದ ತುಳಿತಕ್ಕೆ ಸಿಕ್ಕಿ ನಲುಗಿದ ಮನುಷ್ಯ ನಿರಂತರ ಹೋರಾಟದ ಮುಖೇನ ಪಡೆದುಕೊಂಡ ಅಂಕುಶವೇ ಪ್ರಜಾಪ್ರಭುತ್ವ. ನಮ್ಮ ದೇಶದಲ್ಲಿಯೂ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಗೊಂಡಿದೆ. ಸಂವಿಧಾನ ರಚನಾ ಸಮಿತಿಯು ತಮ್ಮ ನೇತೃತ್ವದ ಉಪಸಮಿತಿಗೆ ವಹಿಸಿದ ಜವಾಬ್ದಾರಿಯನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರು ಅತ್ಯಂತ ಸಂವೇದನಾಶೀಲರಾಗಿ ನಿರ್ವಹಿಸಿ, ಉತ್ಕೃಷ್ಟವಾದ ಸಂವಿಧಾನವನ್ನು ನಮಗೆ ನೀಡಿದ್ದಾರೆ. ಬಹುಶಃ, ಜಗತ್ತಿನ ಅತ್ಯಂತ ಶ್ರೇಷ್ಠವಾದ ಸಂವಿಧಾನಗಳಲ್ಲಿ ಭಾರತದ ಸಂವಿಧಾನವೂ ಒಂದು. ಸಂವಿಧಾನ ರಚನಾ ಸಮಿತಿಯ ಕರಡು ಸಮಿತಿಯ ಅಧ್ಯಕ್ಷರಾಗಿ, ಪ್ರಪಂಚದ ಎಲ್ಲ ಸಂವಿಧಾನಗಳನ್ನು ಅಧ್ಯಯನ ಮಾಡಿ ಅರಗಿಸಿಕೊಂಡ ವ್ಯಕ್ತಿತ್ವ ಅಂಬೇಡ್ಕರ್ ಅವರದ್ದು.



ಕಾಯ್ದೆ ಹಿಂದಕ್ಕೆ ಪಡೆಯುವುದಾಗಿ ಘೋಷಿಸಿದ ಬಳಿಕ ರೈತರ ಸಂಭ್ರಮ ಸಂಗ್ರಹ ಚಿತ್ರ

1950ರ ಜನವರಿ 26ರಂದು ಸಂವಿಧಾನ ಜಾರಿಗೆ ಬರುವುದರೊಂದಿಗೆ ನಿರಂಕುಶ ಪ್ರಭುತ್ವ ಅಂತ್ಯಗೊಂಡು ರಾಜನ ಸ್ಥಾನಕ್ಕೆ ಪ್ರಜೆ ಬಂದು ನಿಲ್ಲುತ್ತಾನೆ. ಯಾವುದೇ ಶಾಸನ ರೂಪಿಸುವ, ತಿದ್ದುಪಡಿ ಮಾಡುವ ಅಥವಾ ಅನೂರ್ಜಿತಗೊಳಿಸುವ ಅಧಿಕಾರವನ್ನು ಸಂವಿಧಾನವು ಸಂಸತ್ತಿಗೆ ವಹಿಸಿದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ತೀರ್ಪಿನಂತೆ ರಚಿತಗೊಂಡ ಸಂಸತ್ತುಗಳು ನಂತರ ರಾಜಕೀಯ ಪಕ್ಷಗಳ ಸಂಖ್ಯಾಬಲದ ಆಧಾರದಲ್ಲಿ ಸರ್ಕಾರ ಸ್ಥಾಪಿಸುತ್ತವೆ. ಎಲ್ಲವೂ ಪ್ರಜಾಬಲದಿಂದಲೇ ನಿಶ್ಚಿತವಾಗಿ ನಡೆಯಬೇಕು ಎಂಬುದು ನಮ್ಮ ಸಂವಿಧಾನದ ಆಶಯ.

ಸರ್ಕಾರಗಳು ಉದಯಿಸಿದ್ದು ಸಂಸತ್ತಿನಿಂದಲೇ ಆದರೂ ಸರ್ಕಾರಗಳು ಸಂಸತ್ತನ್ನು ಅಲಕ್ಷಿಸುತ್ತಿರುವುದು ನಮಗೆ ವೇದ್ಯವಾಗಿರುವ ಸಂಗತಿ. ಪ್ರಜಾಪ್ರಭುತ್ವದ ಮೂಲ ಉದ್ದೇಶವನ್ನೇ ಬುಡಮೇಲು ಮಾಡುವ ಸಂಚು ಕಾಲದಿಂದ ಕಾಲಕ್ಕೆ ನಡೆಯುತ್ತಲೇ ಇರುತ್ತದೆ. ಇದು ಮನುಷ್ಯನ ಅಂತರಾತ್ಮದಲ್ಲಿ ಇರುವ ಪ್ರಜಾಪ್ರಭುತ್ವ ವಿರೋಧಿ ಹಾಗೂ ಪಾಳೇಗಾರಿಕೆ ಮನಸ್ಥಿತಿಯ ಸೂಚಕ. ಇಂಥ ಸನ್ನಿವೇಶದಲ್ಲಿ, ಸರ್ಕಾರದ ಮುಂದಾಳತ್ವ ವಹಿಸಿದವರು ತಮ್ಮ ಮೇಲಿರುವ ಸಾಮೂಹಿಕ ಜವಾಬ್ದಾರಿಯನ್ನು ಮರೆತಿದ್ದಾರೆ ಎಂದು ಜನರಿಗೆ ಅನಿಸಬಾರದು. ಹಾಗೆ ಅನಿಸಿದರೆ ಮತ್ತೆ ಎಲ್ಲೋ ನಿರಂಕುಶ ಪ್ರಭು ತಲೆ ಎತ್ತಿದಂತೆ ಆಗುತ್ತದೆ.

ಜನಹಿತಕ್ಕಾಗಿ ಸರ್ಕಾರವು ರೂಪಿಸಬಹುದಾದ ಒಂದು ಶಾಸನವು ಪ್ರಥಮ ಹಂತದಲ್ಲಿ ತಜ್ಞರ ಅಭಿಪ್ರಾಯವನ್ನು ಪಡೆದು, ಸಚಿವ ಸಂಪುಟದಲ್ಲಿ ಚರ್ಚೆಯಾಗಿ, ನಂತರ ಸಂಸತ್ತಿನಲ್ಲಿ ಮಸೂದೆ ಮಂಡನೆಯಾಗಿ ಪರಿಶೀಲನೆಗೆ ಒಳಗಾಗಿ, ಅಂಗೀಕಾರ ಪಡೆದು ರಾಷ್ಟ್ರಪತಿಯವರ ಒಪ್ಪಿಗೆಗೆ ಹೋಗಬೇಕು. ಯಾವುದೇ ಮಸೂದೆಯನ್ನು ಸದನದಲ್ಲಿ ಮಂಡಿಸುವಾಗ, ಆ ಶಾಸನದ ಅಗತ್ಯ ಮತ್ತು ಅನಿವಾರ್ಯವನ್ನು (ಉದ್ದೇಶ ಮತ್ತು ಕಾರಣಗಳು) ಸ್ಪಷ್ಟವಾಗಿ ಉಲ್ಲೇಖಿಸಬೇಕು.

ಕೇಂದ್ರ ಸರ್ಕಾರವು ಇತ್ತೀಚೆಗೆ ಜಾರಿಗೊಳಿಸಿದ ಕೃಷಿ ಕಾಯ್ದೆಗಳು ದೇಶವ್ಯಾಪಿಯಾಗಿ, ರೈತ ಸಮೂಹದಲ್ಲಿ ತೀವ್ರ ಅಸಮಾಧಾನ, ಆಕ್ರೋಶ ಮೂಡಿಸಿತ್ತು. ದೇಶದಾದ್ಯಂತ ಚರ್ಚೆಗೆ ಆಸ್ಪದ ಒದಗಿಸಿತು. ಈ ಮಸೂದೆಗಳಿಗೆ ಸಂಸತ್ತಿನಲ್ಲಿ ದೊರೆತ ಮಾನ್ಯತೆ ಬಹುಮತ ಆಧಾರಿತವಾಗಿತ್ತೇ ಹೊರತು ಸರ್ವಾನುಮತದ್ದು ಆಗಿರಲಿಲ್ಲ. ಕಾಯ್ದೆಗಳಿಂದ ಕೆರಳಿದ ರೈತರು, ವಿಶೇಷವಾಗಿ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶದ ರೈತರು 2020ರ ನವೆಂಬರ್ 26ರಂದು ದೆಹಲಿಯ ಗಡಿಗಳಲ್ಲಿ ಪ್ರತಿಭಟನೆ ಆರಂಭಿಸಿದರು.

ಚಳವಳಿಗಾರರೊಂದಿಗೆ ಕೇಂದ್ರ ಸರ್ಕಾರ ನಡೆಸಿದ ಸಂಧಾನಗಳು ಕೇವಲ ಸಾಂಪ್ರದಾಯಿಕವಾಗಿದ್ದವು. ದೇಶದ ಅತ್ಯುನ್ನತ ಸ್ಥಾನದಲ್ಲಿರುವ ಪ್ರಧಾನಿಯವರು ಪ್ರತಿಭಟನಕಾರರನ್ನು ಕಾಣುವ ಕನಿಷ್ಠ ಸೌಜನ್ಯವನ್ನೂ ತೋರಲಿಲ್ಲ. ಅಹಿಂಸಾತ್ಮಕ ಚಳವಳಿಯನ್ನು ದಲ್ಲಾಳಿಗಳ ಪ್ರಾಯೋಜಿತ ಚಳವಳಿ ಎಂದೂ ವಿದೇಶಿ ಪ್ರೋತ್ಸಾಹದ ಚಳವಳಿ ಎಂದೂ ಚಳವಳಿ ನಡೆಸುವವರು ದೇಶದ್ರೋಹಿಗಳು ಎಂದೂ ಆರೋಪಿಸಲಾಯಿತು. ರೈತರು ಇದಾವುದಕ್ಕೂ ಬಗ್ಗಲೂ ಇಲ್ಲ ಜಗ್ಗಲೂ ಇಲ್ಲ.

ರೈತ ಸಮೂಹವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ಕಾಯ್ದೆಗಳನ್ನು ಜಾರಿಗೆ ತರಲಾಗಿತ್ತು. ನಂತರ, ಗಾಂಧಿ ಮಾರ್ಗವನ್ನು ಹಿಡಿದು ಚಳವಳಿಗೆ ಇಳಿದ ರೈತರ ಚಾರಿತ್ರ್ಯವಧೆ ಮಾಡಲಾಯಿತು. ಇದಾದ ನಂತರ, ವಿಧಿ ಇಲ್ಲದೆ, ಪುನಃ, ಏಕಾಏಕಿ ಕಾಯ್ದೆಗಳನ್ನು ವಾಪಸ್ ಪಡೆಯಲಾಗುವುದು ಎಂದು ಘೋಷಿಸಿದ್ದು ಆತಂಕಕ್ಕೆ ಒಳಗಾದ ಒಬ್ಬ ಸರ್ವಾಧಿಕಾರಿಯ ಲಕ್ಷಣವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಪ್ರಧಾನಿಯವರು ಒಮ್ಮಿಂದೊಮ್ಮೆಲೆ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುತ್ತಿರುವುದಾಗಿ ಘೋಷಿಸಿರುವುದು ತೀವ್ರ ಚರ್ಚೆಗೆ ಒಳಗಾ ಗಿದೆ. ಯಾವುದೇ ಕಾಯ್ದೆಯನ್ನು ಹಿಂದಕ್ಕೆ ಪಡೆಯಬೇಕಾದರೆ ಅದು ಸಂವಿಧಾನಾತ್ಮಕವಾಗಿಯೇ ಆಗಬೇಕು ಹೊರತು ಪ್ರಧಾನಿಯವರ ಘೋಷಣೆಯಿಂದ ಸಾಧ್ಯವಿಲ್ಲ. ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಭಾರತದ ಶ್ರೇಷ್ಠ ಸಂವಿಧಾನವನ್ನು, ಸಂವಿಧಾನಾತ್ಮಕವಾಗಿಯೇ ಒಳಗೆ ನುಸುಳಿಕೊಂಡು ವಿಕೃತಗೊಳಿಸುವ ಸಂಚು ನಡೆಯುತ್ತಿದೆ ಎಂಬ ಸಂಶಯ ಸಹಜವಾಗಿಯೇ ಮೂಡುತ್ತದೆ.

ಮಾನವ ಇತಿಹಾಸದಿಂದ ಪಡೆದುಕೊಂಡ ಅನುಭವಗಳ ಆಧಾರದಲ್ಲಿ ನಿರಂಕುಶ ಪ್ರಭುತ್ವವನ್ನು ಶಾಶ್ವತವಾಗಿ ನಿರ್ಮೂಲನಗೊಳಿಸಿ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಲು ಸಂವಿಧಾನಾತ್ಮಕ ನಿರ್ಬಂಧಗಳನ್ನು ಸ್ವಯಂಪ್ರೇರಣೆಯಿಂದ ರಚಿಸಿಕೊಂಡಿದ್ದೇವೆ. ಆದರೆ, ಪ್ರಧಾನಿಯವರು ಮಾಡಿದ ಘೋಷಣೆ ನಿರಂಕುಶ ಪ್ರಭುವಿನ ಮನೋಭಾವವನ್ನು ನಿಸ್ಸಂಶಯವಾಗಿ ಸಾರಿ ಹೇಳುತ್ತಿದೆ. ಇದು ಅಪೇಕ್ಷಣೀಯವಲ್ಲ.

ದೃಢ ಸಂಕಲ್ಪಿತ ರೈತ ಹೋರಾಟಕ್ಕೆ ಅಭಿನಂದನೆಗಳು. 73 ವರ್ಷ ಹಿಂದೆ ಒಬ್ಬ ಮತಾಂಧನ ಅವಿವೇಕದ ಗುಂಡಿಗೆ ಬಲಿಯಾದ ಗಾಂಧಿ ಸತ್ತಿಲ್ಲ, ಜೀವಂತ ಇದ್ದಾರೆ ಎಂಬುದು ಈ ಹೋರಾಟದ ಮೂಲಕ ಸಾಬೀತಾಗಿದೆ. ಇದು ಗಾಂಧಿ ಮಾರ್ಗಕ್ಕೆ ದೊರೆತ ಜಯ.

ಲೇಖಕ: ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ಶಾಸಕ



ನೆರೆಮನೆ ನೋಟಕ್ಕಿಂತ ನಮ್ಮನೇ ನಂಟೇ ಚೆನ್ನ

ಸಾಮಾನ್ಯವಾಗಿ ಜನ ತಮ್ಮ ಬದುಕನ್ನ ಬೇರೆಯವರ ಬದುಕಿನೊಂದಿಗೆ ಹೋಲಿಸಿ ಕೊರಗುವುದೇ ಹೆಚ್ಚು. ದೂರದ ಬೆಟ್ಟ ನುಣ್ಣಗೆ ಕಾಣುವಂತೆ ನೆರೆಮನೆ ನೋಡುವುದಕ್ಕೆ ಚೆನ್ನಾಗೇ ಕಾಣುತ್ತೆ. ಅದರೊಳಗಿನ ಕುಂದು ಕಾಣದೆ, ತಮ್ಮನೆಯ ಕೊರತೆಯ ಬೆಟ್ಟವನ್ನೇ ತಲೆ ಮೇಲೆ ಹೊತ್ತು ಕೊರಗುತ್ತಾರೆ. ತಮ್ಮಲ್ಲಿರುವ ಉತ್ತಮವಾದುದನ್ನು ನೆನೆಯದೆ, ನೆರೆಮನೆಯಲ್ಲಿ ರುವುದರ ಬಗ್ಗೆಯೇ ಯೋಚಿಸುತ್ತಾರೆ. ನೆರೆಮನೆಯ ನೆನೆಯುತ್ತಾ ತಮ್ಮನೆಯ ನೆಮ್ಮದಿ ಕಳೆದುಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದಲೇ ಯಾರ ಮನೆಯಲ್ಲೂ ಸೌಹಾರ್ದ ಸಂಬಂಧಗಳು ಬೆಳೆಯುತ್ತಿಲ್ಲ. ನೆರೆಮನೆ ನೋಡುತ್ತಾ, ತಮ್ಮನೆ ನಂಟು ಕಳೆದುಕೊಳ್ಳುವುದು ಮೂರ್ಖತನ. ಒಂದು ಮನೆ ಎಂದಮೇಲೆ ಅಲ್ಲಿ ಒಳ್ಳೆಯದು-ಕೆಟ್ಟದ್ದು ಎರಡೂ ಇರುತ್ತೆ. ಒಳ್ಳೆಯದನ್ನು ಗುರುತಿಸಿ, ಕೆಟ್ಟದ್ದನ್ನು ಹೊರದೂಡುವ ವಿವೇಕ ನಮಗಿರಬೇಕಷ್ಟೆ.

ಸಂಸಾರ ಅನ್ನೋದು ಸಮಸ್ಯೆಗಳ ಆಗರವೂ ಹೌದು, ಸಾಮರಸ್ಯಗಳ ಸಾಗರವೂ ಹೌದು. ಸಮಸ್ಯೆ ಉದ್ಭವಿಸಿದಾಗೆಲ್ಲಾ ಮೊದಲಿಗೆ ಸಾಮರಸ್ಯದ ಸಿಂಚನ ಸಿಂಪಡಿಸುತ್ತಿರಬೇಕು. ಏಕೆಂದರೆ, ಮನೆಯಲ್ಲಿನ ನೆಮ್ಮದಿಗೆ ಸಂಬಂಧಗಳ ಗಟ್ಟಿ ಅಡಿಪಾಯವಿರಬೇಕು. ಸಂಬಂಧಗಳಲ್ಲಿ ಮೂಡುವ ಅಪನಂಬಿಕೆಗಳು ಬದುಕಿನ ಬುನಾದಿಯನ್ನೇ ಹಾಳುಗೆಡುವುತ್ತವೆ. ನೆರೆಮನೆಯ ಚೆಂದ ನೋಡಿ, ತಮ್ಮನೆಯ ನೆಮ್ಮದಿ ಕಳೆದುಕೊಳ್ಳುವುದು ಮೂರ್ಖತನ. ತೃಪ್ತ ಬದುಕು ತಪ್ತ ಮನಸ್ಸಿಗೆ ಮುದ ನೀಡುತ್ತೆ. ಅತೃಪ್ತತೆ ಸುಪ್ತ ಮನಸ್ಸಿನಲ್ಲಿ ಆಳವಾಗಿ ಬೇರು ಬಿಟ್ಟಷ್ಟು ಬದುಕಲ್ಲಿ ಬಿರುಕು ಮೂಡಿ, ನೆಮ್ಮದಿ ಕೆಡಿಸುತ್ತದೆ. ಇಂಥ ಸತ್ಯ ಅರಿಯದೆ ಬಹಳಷ್ಟು ಜನ ತಮ್ಮ ಜೀವಿತಾವಧಿಯನ್ನು ಅತೃಪ್ತತೆಯ ಸಂಕಟದಲ್ಲೇ ಕಳೆದುಬಿಡುತ್ತಾರೆ. ಅದೆಷ್ಟೋ ಜನಕ್ಕೆ ಕೊನೆಗಾಲದಲ್ಲಿ ತಾವು ಬದುಕಲ್ಲಿ ಗಳಿಸಿದ್ದೇನು? ಕಳೆದುಕೊಂಡಿದ್ದೇನೆಂಬುದೇ ಅರ್ಥವಾಗಿರುವುದಿಲ್ಲ.

ಅಪನಂಬಿಕೆಯ ಬೇಗೆಯಲ್ಲಿ ಅತೃಪ್ತತೆಯ ಸೋಗು ಚಟಪಟ ಉರಿದಷ್ಟು ಮನೆಯಲ್ಲಿ ಅಶಾಂತಿಯ ಹೊಗೆ ಉಸಿರು ಕಟ್ಟಿಸುತ್ತದೆ. ಮನಸ್ಸಿನ ಗೋಡೆಗಳಲ್ಲಿ ಅಂಟುವ ಹೊಗೆಯ ಕಿಟ್ಟಗಳು, ಮನೆಯ ಆರೋಗ್ಯ ಕೆಡಿಸುತ್ತದೆ. ಅದಕ್ಕಾಗಿ ಮನೆಯ ಸಂಬಂಧಗಳ ಬೇರುಗಳು ನಂಬಿಕೆಯ ಜಲದಲ್ಲಿ ಭದ್ರವಾಗಿರಬೇಕು. ಅದು ಗಂಡ-ಹೆಂಡತಿ ಸಂಬಂಧವೇ ಇರಬಹುದು, ಅಪ್ಪ-ಮಕ್ಕಳ ಸಂಬಂಧವೇ ಇರಬಹುದು, ಅಲ್ಲಿ ನಂಬಿಕೆಯ ಬೇರು ಕೊಳೆತು ಹೋದರೆ ಯಾವುದೇ ಸಂಬಂಧಗಳು ಬಾಡಿಹೋಗುತ್ತವೆ. ಇತ್ತೀಚಿನ ದಿನಗಳಲ್ಲಿ ವಿಚ್ಛೇದನ ಎಂಬ ವಿಷಕ್ಕೆ ಬಲಿಯಾಗುತ್ತಿರುವ ದಾಂಪತ್ಯ ಸಂಬಂಧಗಳಲ್ಲಿ ನಂಬಿಕೆಯ ಬೇರು ಹಾಳಾಗಿರುವುದು ಢಾಳಾವಾಗಿ ಗೋಚರಿಸುತ್ತಿದೆ. ಗಟ್ಟಿ ನಂಬಿಕೆ ಇಲ್ಲದೆ ಯಾವ ಸಂಬಂಧವೂ ಉಳಿಯುವುದಿಲ್ಲ ಎಂಬ ಕಟುಸತ್ಯ ಅರಿಯದೆ ಸಂಬಂಧಗಳನ್ನು ಹಾಳು ಮಾಡಿಕೊಳ್ಳುತ್ತಿರುವ ಯುವದಂಪತಿಗಳಿಗೆ ಬದುಕುವ ಮಾರ್ಗ ತೋರಿಸಬೇಕಿದೆ. ಇದಕ್ಕಾಗಿ ಹಿರಿಯರು ತಮ್ಮ ಅನುಭವಗಳನ್ನು ಕಿರಿಯರೊಂದಿಗೆ ಹಂಚಿಕೊಳ್ಳಬೇಕು. ನೆರೆ ಸಂಬಂಧಗಳ ನೋಡಿ, ನೆರೆತ ಸಂಬಂಧಗಳನ್ನು ಚಿಗುರಿಸುವ ದಾಂಪತ್ಯ ಕೌಶಲವನ್ನು ಕಲಿಸಬೇಕು.

ಸಂಸಾರ ಅನ್ನೋದು ಸಪ್ತಸ್ವರಗಳ ದಿವ್ಯಗಾನ. ಮಾಧುರ್ಯ ತುಂಬಿದ ಬದುಕಲ್ಲಿ ಅಪಸ್ವರದ ಸದ್ದು ಕೇಳದಂತೆ ಎಲ್ಲರೂ ಎಚ್ಚರವಹಿಸಬೇಕು. ಶ್ರುತಿ ತಪ್ಪಿದರೆ ಸಂಗೀತ ಹೇಗೆ ಕೆಡುತ್ತದೋ ಹಾಗೇ ಬದುಕಿನ ಹೆಜ್ಜೆ ತಪ್ಪಿದರೆ ಸಂಸಾರ ಕೆಡುತ್ತದೆ. ಕುಟುಂಬಸ್ಥರೆಲ್ಲಾ ಜೀವನದ ಶ್ರುತಿಗೆ ಲಯಬದ್ಧವಾಗಿ ನಡೆಯಬೇಕು. ತಾನು ಹೆಚ್ಚು, ಅವರು ಕಡಿಮೆ ಎಂಬ ತಾರತಮ್ಯದ ತಂತಿಯನ್ನು ಯಾರೂ ಮೀಟಬಾರದು. ಕುಟುಂಬದ ಅಂತಃಸತ್ವವೇ ಸಮಾನತೆ. ಸಮತತ್ವದ ಆಧಾರದ ಮೇಲೆ ಬದುಕನ್ನು ಮುನ್ನಡೆಸಿಕೊಂಡು ಹೋಗುವ ಛಾತಿ ಮನೆ ಯಜಮಾನನಿಗೆ ಸಿದ್ಧಿಸಿದರೆ ಸಂಸಾರನೌಕೆ ನೆಮ್ಮದಿ ತಟದಲ್ಲಿ ನೆಲೆಸುತ್ತದೆ. ಪರರ ಬದುಕಿನೊಂದಿಗೆ, ತಮ್ಮ ಬದುಕನ್ನು ತೂರಿಸಿ ನೋಡುವ ಚಾಳಿ ಮತ್ತು ಇರುವ ಸುಖವ ಮರೆತ ಪರರ ಸುಖದತ್ತ ಆಸೆಕಂಗಳು ಹರಿಸುವ ದುರ್ಬುದ್ಧಿ ಬಿಟ್ಟಾಗ 'ಸಚ್ಚಿದಾನಂದ'ದ ನೆಮ್ಮದಿಯ ಬದುಕು ಪ್ರಾಪ್ತವಾಗುತ್ತದೆ. ●

ತಿನ್ನುವ ಅನ್ನದಲ್ಲಿ ಕಲ್ಲು ಹುಡುಕುವ ಚಾಳಿ ಬಿಡಿ

● ಡಾ.ಸಿ.ಎನ್.ಅಶ್ವತ್ಥನಾರಾಯಣ

ದೇಶದಲ್ಲಿ ಈಗ ಹೆಚ್ಚು ಚರ್ಚೆ ಆಗುತ್ತಿರುವ ವಿಷಯ ಎಂದರೆ, ಪ್ರಧಾನಿಯವರು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದುಕೊಂಡಿರುವುದು. ಪ್ರತಿಪಕ್ಷಗಳು ಹಾಗೂ ಟೀಕಾಕಾರರ ಪಾಲಿಗೆ ಅವು ವಿವಾದಿತ ಅಥವಾ ಕರಾಳ ಕಾಯ್ದೆಗಳಷ್ಟೇ. ಅನ್ನದಾತರೂ ಒಳಗೊಂಡಂತೆ ಭಾರತದ ನೂರು ಕೋಟಿಗೂ ಹೆಚ್ಚು ಜನರು ಹಾಗೂ ಕೇಂದ್ರ ಸರ್ಕಾರದ ದೃಷ್ಟಿಯಲ್ಲಿ ಅವು ದೇಶ ಹಿತಕ್ಕಾಗಿ ರೂಪಿಸಿದ ಹಾಗೂ ರೈತರ ಸಬಲೀಕರಣಕ್ಕಾಗಿ ಜಾರಿಗೆ ತಂದಿದ್ದ ಸುಧಾರಣಾ ಕ್ರಮಗಳು. ಎರಡನೇ ಅಂಶದಲ್ಲಿ ನನಗೆ ನಂಬಿಕೆ ಇದೆ.

ಒಂದು ಸುಳ್ಳನ್ನು ವ್ಯವಸ್ಥಿತವಾಗಿ ಹೇಳುತ್ತಲೇ ಅದನ್ನು ಸತ್ಯಕ್ಕಿಂತ ಹೆಚ್ಚು ಜನಜನಿತ ಮಾಡಬಹುದು ಎನ್ನುವ ಮಾತನ್ನು ಇಲ್ಲಿ ಕೆಲವರಿಗೆ ಅನ್ವಯಿಸಿ ಹೇಳಬಹುದು. ಕೃಷಿ ಕಾಯ್ದೆಗಳ ವಿಚಾರದಲ್ಲಿ ಆಗಿದ್ದೂ ಇದೇ. ನಿಜ ಫಲಾನುಭವಿಗಳನ್ನು, ಅಂದರೆ ರೈತರನ್ನು ಹೊರತುಪಡಿಸಿ, ಅವುಗಳಿಗೆ ಸಂಬಂಧ ಇಲ್ಲದವರೇ ಹೆಚ್ಚು ಮಾತನಾಡಿದರು, ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಅಥವಾ ಬಹಿರಂಗವಾಗಿ ಬರೀ ಮಿಥ್ಯೆಗಳನ್ನೇ ಹಬ್ಬಿಸುತ್ತಾ ರಾಷ್ಟ್ರೀಯವಾಗಿ ಅರಾಜಕತೆಯನ್ನು ಸೃಷ್ಟಿ ಮಾಡಲು ವ್ಯವಸ್ಥಿತ ಪ್ರಯತ್ನ ನಡೆಸಿದರು. ಇಂಥ ವಿನಾಶಕಾರಿ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿದೆ ಎನ್ನುವುದು ನನ್ನ ನೋವು.

2014ರಲ್ಲಿ ಪ್ರಧಾನಮಂತ್ರಿಯಾಗಿ ನರೇಂದ್ರ ಮೋದಿ ಅವರು ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದಾಗ, ಅವರು ಅನೇಕ ಸುಧಾರಣಾ ಕ್ರಮಗಳನ್ನು ದೇಶದ ಮೇಲಿನ ಅಚಲ ನಿಷ್ಠೆಯೊಂದಿಗೆ ಕೈಗೊಂಡರು. ಹಾಗೆ ಜಾರಿಗೆ ತಂದ ಕ್ರಮಗಳಲ್ಲಿ ನೋಟು ಅಮಾನ್ಯ, ಜಿಎಸ್‌ಟಿ ಹಾಗೂ ಕೃಷಿ ಕಾಯ್ದೆಗಳ ಜಾರಿ ಅತ್ಯಂತ ಮಹತ್ವದವು. ದೇಶವನ್ನು ಹೊಸ ದಿಕ್ಕಿನತ್ತ ಮುನ್ನಡೆಸುವ ಅಥವಾ ಜಡ್ಡುಗಟ್ಟಿದ್ದ ಅಭಿವೃದ್ಧಿ ಯಂತ್ರಕ್ಕೆ ಚಿಕಿತ್ಸೆ ಕೊಡುವ ಉದ್ದೇಶದಿಂದ ಅವರು ಈ ಕ್ರಮಕ್ಕೆ ಮುಂದಾಗಿದ್ದರು. ಹಾಗೆ ನೋಡಿದರೆ, ಬಹಳ ಹಿಂದೆಯೇ ಈ ಸುಧಾರಣಾ ಕ್ರಮಗಳು ಜಾರಿಗೆ ಬರುವ ಅವಶ್ಯಕತೆ ಇತ್ತು. ಬರಲಿಲ್ಲ ಏಕೆ? ರಾಜಕೀಯ ಇಚ್ಛಾಶಕ್ತಿ ಹಾಗೂ ಅಭಿವೃದ್ಧಿಯಡೆಗಿನ ಬದ್ಧತೆ ಇಲ್ಲದಿದ್ದುದೇ ಅದಕ್ಕೆ ಕಾರಣ.

ಮೋದಿ ಅವರು ಅಂಥ ಪ್ರಬಲ ಇಚ್ಛಾಶಕ್ತಿ ಮತ್ತು ಬದ್ಧತೆಯೊಂದಿಗೆ ಹೆಜ್ಜೆ ಇಟ್ಟರು. ಈ ಎರಡೂ ಅಂಶಗಳ ದೃಷ್ಟಿಯ ಹಿನ್ನೆಲೆಯಲ್ಲಿ ಕಳೆದ ಏಳು ವರ್ಷಗಳಲ್ಲಿ ಭಾರತ ಬದಲಾದ ಬಗೆಯನ್ನು ನಾವು ನಿಷ್ಕಲ್ಮಶ ಭಾವದೊಂದಿಗೆ ಗುರುತಿಸಬೇಕು. ಹೀಗೆ ಗುರುತಿಸುವಿಕೆಯಲ್ಲಿ ಪ್ರಾಮಾಣಿಕತೆ ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ ಕೃಷಿ ಕಾಯ್ದೆಗಳೇ ಸಾಕ್ಷಿ.

ಒಂದು ಅಂಶವನ್ನು ಕಾಯ್ದೆಗಳ ವಿರೋಧಿಗಳು ನೆನಪಿನಲ್ಲಿಟ್ಟುಕೊಂಡು ಹೆಜ್ಜೆ ಇಡಬೇಕಿತ್ತು. ಯಾವುದೇ ಸುಧಾರಣಾ ಕ್ರಮವನ್ನು ಏಕಾಏಕಿ ಜಾರಿ ಮಾಡಲು ಸಾಧ್ಯವಿಲ್ಲ. ಕೃಷಿ ಕಾಯ್ದೆಗಳನ್ನು ಕೂಡ ಸಾಕಷ್ಟು ಪೂರ್ವಸಿದ್ಧತೆಯೊಂದಿಗೇ ಜಾರಿ ಮಾಡಲಾಗಿದೆ ಎನ್ನುವುದು ವ್ಯವಸ್ಥಿತ ವಿರೋಧವನ್ನೇ ಮುಂದು ಮಾಡಿಕೊಂಡು ಅಬ್ಬರಿಸಿದವರಿಗೆ ಅರ್ಥವಾಗಲಿಲ್ಲ. ನೂರಾಮೂವತ್ತು ಕೋಟಿ ಜನಸಂಖ್ಯೆ ಮೀರುತ್ತಿರುವ ಭಾರತ ಒಂದೆಡೆಯಾದರೆ, ಜಾಗತಿಕವಾಗಿ ಬದಲಾಗುತ್ತಿರುವ ಸಮೀಕರಣಗಳು, ಎದುರಾಗುತ್ತಿರುವ ಹೊಸ ಸವಾಲುಗಳ ಬಗ್ಗೆ ಅವರೆಲ್ಲರೂ ಪ್ರಾಂಜಲ ಮನಸ್ಸಿನಿಂದ ಚರ್ಚೆ ಮಾಡಬೇಕಿತ್ತು. ನೋವಿನ ಸಂಗತಿ ಎಂದರೆ, ತನ್ನ ಸದುದ್ದೇಶವನ್ನು ಅರ್ಥ ಮಾಡಿಕೊಳ್ಳುತ್ತಾರೆ ಎಂದು ಒಂದು ವರ್ಷ ಚಾತಕ ಪಕ್ಷಿಯಂತೆ ಕಾದ ಕೇಂದ್ರ ಸರ್ಕಾರವನ್ನು 'ಕೆಲವರು' ಶತ್ರುವಿನಂತೆ ನೋಡಿದರೆ ವಿನಾ, ನೆರೆಯ ಚೀನಾಕ್ಕಿಂತ ಮುಂದೆ ಹೆಜ್ಜೆ ಇಡುವುದು ಹೇಗೆ ಎಂಬುದನ್ನು ಯೋಚಿಸಲಿಲ್ಲ. 2025ರ ಹೊತ್ತಿಗೆ ಭಾರತ ಆಹಾರ ಸ್ವಾವಲಂಬನೆ ಸಾಧಿಸದಿದ್ದರೆ ಏನಾಗುತ್ತದೆ ಎಂದು ಕ್ಷಣ ಮಾತ್ರವೂ ಚಿಂತಿಸಲಿಲ್ಲ. ಬದಲಿಗೆ ಪ್ರತಿಷ್ಠೆಗೆ ಜೋತುಬಿದ್ದು ಸರ್ಕಾರವನ್ನೇ ಶತ್ರುವಾಗಿ ಕಂಡ ಕೆಟ್ಟ ಮನಃಸ್ಥಿತಿಯ ಬಗ್ಗೆ ಏನು ಹೇಳಬೇಕೋ ನನಗೆ ಅರ್ಥವಾಗಲಿಲ್ಲ.



ರಕ್ಷಣೆ, ಕೃಷಿ, ಉದ್ಯೋಗ, ವಿಜ್ಞಾನ, ಸಂಶೋಧನೆ, ಅಭಿವೃದ್ಧಿ, ಶಿಕ್ಷಣ ಇತ್ಯಾದಿಗಳಲ್ಲಿ ರಾಜಕೀಯಕ್ಕೆ ಅವಕಾಶ ಇರಬಾರದು. ದೇಶಕ್ಕೆ ಸಂವಿಧಾನ ಸಮರ್ಪಣೆಯಾದ 72 ವರ್ಷಗಳ ಘಟ್ಟದಲ್ಲಿ ಮುಂದೆ ಹೆಜ್ಜೆ ಇಡಬೇಕೇ ಹೊರತು ರಾಜಿ ರಾಜಕೀಯಕ್ಕೆ ಜೋತು ಬೀಳಬಾರದು

19ರಂದು ಪ್ರಧಾನಿಯವರು ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಿದಾಗ ಅವರ ಮಾತುಗಳಲ್ಲಿ ಆರ್ದ್ರತೆ ಇತ್ತು. ಒಂದು ಯಶಸ್ಸಿನ ಹೆಜ್ಜೆ ಇದಕ್ಕಿದ್ದ ಹಾಗೆ ಹಿಂದಕ್ಕೆ ಬಿದ್ದೆಡೆಗಿನ ಬೇಸರ ಅವರಲ್ಲಿತ್ತು. 'ನಿಜವಾದ ಮತ್ತು ಶುದ್ಧ ಹೃದಯದಿಂದ ನಾನು ಭಾರತದ ಕ್ಷಮೆ ಯಾಚಿಸುತ್ತೇನೆ. ರೈತರಿಗೆ ಕೃಷಿ ಕಾನೂನುಗಳ ಬಗ್ಗೆ ಮನವರಿಕೆ ಮಾಡಲು ಸಾಧ್ಯವಾಗಲಿಲ್ಲ. ಹೀಗಾಗಿ ನಾವು ಮೂರು ಕೃಷಿ ಕಾನೂನುಗಳನ್ನು ಹಿಂದಕ್ಕೆ ಪಡೆಯಲು ನಿರ್ಧರಿಸಿದ್ದೇವೆ' ಎಂದು ಮೋದಿ ಹೇಳಿದ್ದರು.

ಆದರೆ, ತಿನ್ನುವ ಅನ್ನದಲ್ಲಿ ಕಲ್ಲು ಹುಡುಕುವ ಚಾಳಿಯ ಕೆಲವರಿಗೆ ಇವತ್ತಿನ ಅಗತ್ಯಗಳು ಅರ್ಥವಾಗುತ್ತಿಲ್ಲ. ಕೃಷಿ ಕಾಯ್ದೆಗಳನ್ನು ಜಾರಿಗೆ ತರುವಾಗ ಯಾರನ್ನೂ ಕೇಳಿ ಅನುಷ್ಠಾನಕ್ಕೆ ತರಲಿಲ್ಲ, ಅದೇ ರೀತಿ ವಾಪಸ್ ಪಡೆಯುವಾಗ ಯಾರನ್ನೂ ಕೇಳಿ ರದ್ದು ಮಾಡಲಿಲ್ಲ ಎನ್ನುವ ಹೊಸ ವರಸೆಯನ್ನು ವಿರೋಧಿಗಳು ಶುರುವಿಟ್ಟುಕೊಂಡಿದ್ದಾರೆ. ಅಲ್ಲದೆ, ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಕಾರಣಕ್ಕೆ ಮೋದಿ ಅವರು ಕಾಯ್ದೆಗಳನ್ನು ರದ್ದು ಮಾಡಿದ್ದಾರೆ ಎಂದು ಹುಯಿಲೆಬ್ಬಿಸಲಾಗುತ್ತಿದೆ. ನಮ್ಮಲ್ಲಿ ಟೀಕೆಗಳ ಸ್ಥಿತಿ ಇದು. ಟೀಕೆಗಷ್ಟೇ ಸೀಮಿತವಾಗಿ ಟೀಕೆ ಮಾಡಲಾಗುತ್ತಿದೆ. ವಿಶಾಲ ದೃಷ್ಟಿಕೋನದಲ್ಲಿ ನಡೆಯಬೇಕಾದ ಚರ್ಚೆಯಲ್ಲಿ ಹಿತಾಸಕ್ತಿ ರಾಜಕೀಯದ ವಿಜೃಂಭಣೆ ನಡೆಯುತ್ತಿದೆ. ಇದು ಒಪ್ಪಲಾಗದ ಸಂಗತಿ.

ಇದರ ಜತೆಗೆ ಇನ್ನೊಂದು ತರ್ಕಹೀನ ಅಂಶವನ್ನು ಮುನ್ನೆಲೆಗೆ ತರುವ ಪ್ರಯತ್ನ ನಡೆದಿದೆ. ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಘೋಷಣೆಗೂ ಮುನ್ನ, ಈ ವಿಚಾರದ ಬಗ್ಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಆಗಿಲ್ಲ. ಸಂಸತ್ತಿನಲ್ಲಿ ಅಂಗೀಕಾರವಾದ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಏಕಪಕ್ಷೀಯವಾಗಿ ಘೋಷಿಸುವುದು ಎಷ್ಟು ಸರಿ? ಇದು ಸರ್ವಾಧಿಕಾರ ಅನಿಸುವುದಿಲ್ಲವೇ? ಸಚಿವ ಸಂಪುಟವನ್ನು ನಿರ್ಲಕ್ಷಿಸಿ ಪ್ರಧಾನಿ ನಿರ್ಧಾರ ಕೈಗೊಂಡಿದ್ದಾರೆ ಎನ್ನುವ ಭಾವನೆ ಬರುವುದಿಲ್ಲವೇ? ಸಚಿವ ಸಂಪುಟ ಸಭೆಯು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ ಚರ್ಚಿಸುವಾಗ ಸಂಪುಟದ ಸದಸ್ಯರ ಮೇಲೆ ಪ್ರಧಾನಿಯ ನಿರ್ಧಾರವು ಪ್ರಭಾವ ಬೀರುವುದಿಲ್ಲವೇ? ಈ ಚರ್ಚೆಯನ್ನು ವೃಥಾ ಮುನ್ನೆಲೆಗೆ ತರಲಾಗಿದೆ.

ಪ್ರಧಾನಿ ಪದವಿಯಲ್ಲಿದ್ದವರು ಇಂಥ ನಿರ್ಧಾರಗಳನ್ನು ಅನೇಕ ಸಂದರ್ಭಗಳಲ್ಲಿ ಕೈಗೊಂಡಿರುವ ಉದಾಹರಣೆಗಳು ನಮ್ಮ ಮುಂದಿವೆ. ನೆಹರೂ, ನರಸಿಂಹ ರಾವ್, ಅಟಲ್ ಬಿಹಾರಿ ವಾಜಪೇಯಿ ಮೊದಲಾದವರು ಪ್ರಧಾನಿ ಸ್ಥಾನದಲ್ಲಿ ಇದ್ದಾಗ ದೇಶದ ಹಿತದ ದೃಷ್ಟಿಯಿಂದ ಅನೇಕ ನಿರ್ಧಾರಗಳನ್ನು ಸ್ವತಃ ಪ್ರಕಟಿಸಿರುವುದನ್ನು ನಾವು ಮರೆಯುವಂತಿಲ್ಲ. ಆದರೆ, ರಾಷ್ಟ್ರದ ಹಿತಕ್ಕೆ ತಾಂತ್ರಿಕ ನೆಪಗಳನ್ನು ಪೋಣಿಸಿಕೊಂಡು ಸಮಯ ವ್ಯರ್ಥ ಮಾಡುವುದರಲ್ಲಿ ಅರ್ಥವೇನಿದೆ?

ರಕ್ಷಣೆ, ಕೃಷಿ, ಉದ್ಯೋಗ, ವಿಜ್ಞಾನ, ಸಂಶೋಧನೆ, ಅಭಿವೃದ್ಧಿ, ಶಿಕ್ಷಣ ಇತ್ಯಾದಿಗಳಲ್ಲಿ ರಾಜಕೀಯಕ್ಕೆ ಅವಕಾಶ ಇರಬಾರದು. ದೇಶಕ್ಕೆ ಸಂವಿಧಾನ ಸಮರ್ಪಣೆಯಾದ 72 ವರ್ಷಗಳ ಘಟ್ಟದಲ್ಲಿ ನಾವು ಮುಂದೆ ಹೆಜ್ಜೆ ಇಡಬೇಕೇ ಹೊರತು ರಾಜಿ ರಾಜಕೀಯಕ್ಕೆ ಜೋತುಬಿದ್ದು ರಾಷ್ಟ್ರದ ಹಿತಾಸಕ್ತಿಯನ್ನು ಬಲಿಗೊಡಬಾರದು. ಈ ಬಗ್ಗೆ ನಾವೆಲ್ಲರೂ ತೆರೆದ ಮನಸ್ಸಿನಿಂದ ಚಿಂತಿಸಬೇಕಾದ ತುರ್ತು ಸಂದರ್ಭ ಇದಾಗಿದೆ. ಸುಳ್ಳುಗಳನ್ನೇ ಪೋಣಿಸಿ ಜನರ ದಿಕ್ಕು ತಪ್ಪಿಸಿ ರಾಜಕೀಯ ಮಾಡಲೆತ್ನಿಸುವ ಹಿತಾಸಕ್ತಿ ಗುಂಪಿನ ಕೆಲವೇ ನೇತಾರರು ಈಗಲಾದರೂ ಸತ್ಯವನ್ನು ಅರ್ಥ ಮಾಡಿಕೊಳ್ಳಲಿ.

ಲೇಖಕ: ಕರ್ನಾಟಕದ ಉನ್ನತ ಶಿಕ್ಷಣ, ಐಟಿ-ಬಿಟಿ ಸಚಿವ

ಪದಬಂಧ 4790


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ನೀರಿನ ಅಲೆಗಳಿಂದ ವಾದ್ಯ ಕಂಡೀತೇ? (5)
4.ಪೋಲಕ ಧರಿಸಿದವಳ ಕೆನ್ನೆ (3)
5.ವಿದ್ಯೆಯೊಡನೆ ಇರಬೇಕಾದ ನಮ್ರತೆ (3)
9.ಗೋಡೆಯಲ್ಲಿ ಕೊರೆಯುವ ಕಿಂಡಿ (2)
10.ಮುಳ್ಳುಗಳ ನಡುವೆ ಬಿರಿಯುವ ಪುಷ್ಪ (3)
11. ರಂಧ್ರವಿಲ್ಲಿ ಉಲ್ಟಾ ಕಾಣಸುತ್ತಿದೆ (2)
12.ನವೆ ಈ ರೀತಿ ಬಂದಿದೆ (3)
15.ತೀರದ ಬಳಿಯಿರುವ ಗುಡಿಸಲು (3)
16.ಹಕ್ಕಿಗಳ ಗುಂಪು (5)

ಮೇಲಿಂದ ಕೆಳಕ್ಕೆ

1.ವ್ಯತ್ಯಾಸ ಈ ತರ ಬಂದಿದೆ (3)
2.ಗಂಜಲದ ಹತ್ತಿರವಿರುವ ನೀರು (2)
3.ಅಂಗವಿಕಲನು ತೋರಿಸಿರುವ ಗುಹೆ (2)
4.ಕಿವಿಯಿಂದ ಕಿವಿಗೆ ಹರಡುವ ಮಾತು (5)
6.ಈತ ನರಕಾಧಿತಿಯ ಆಳು (5)
7.ಭಾರವೇ ಇಲ್ಲದಿರುವುದು (3)
8.ವಿಶ್ವಾಸ ಈ ರೀತಿ ಬಂದಿದೆ (3)
13.ತಪಸೀಲು ನೋಡಿದಾಗಲೇ ಈ ತಪಸ್ಸು! (2)
14.ಸಂಗನ ಜೀವನದ ಘಟನೆ! (3)
15.ಕುಟಿಲ ಬುದ್ಧಿಯವನ ವಂಶ (2)



4789ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ಥಿರ 3.ಚರಕ 5.ಸಮರ 7.ರಸಭಂಗ 9.ಸಲಿಗೆ 10.ಸಮೀಪ 11.ರಣರಂಗ 13.ಚರಟ 15.ರಪಣ 16.ರುಜು

ಮೇಲಿಂದ ಕೆಳಕ್ಕೆ:
2.ರಭಸ 3.ಚಮ್ಮಾರ 4.ಕರ್ಪೂರ 6.ಮಜ್ಜಿಗೆ 8.ಗತಂಪ 9.ಸದರ 10.ಸಮೀರ 12.ಗಹ್ವರ 13.ಚರಣ 14.ಟಗರು

ಸುಡೊಕು 5176

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

5175 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಗುಂಡಣ್ಣ



ದಿನ ಭವಿಷ್ಯ

ಶನಿವಾರ ನವೆಂಬರ್ 27, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧಾ ಅಷ್ಟಮೀ ಗಂ. 44-13 (ರಾ. 12-11) ಶನಿವಾರ ನಿತ್ಯ ನಕ್ಷತ್ರ ಮಖೆ ಗಂ. 26-46 (ಸಾ. 5-12) ವೈಧೃತಿ ನಾಮ ಯೋಗ ಗಂ. 51-31 ಬಾಲವ ಕರಣ ಗಂ. 14-5 ವಿಷ ಗಂ. 47-8 ಅಮೃತ ಗಂ 19-40 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-26 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 3 7

ಮೇಷ: ಅನ್ಯರ ಸಮಸ್ಯೆಗಳಿಗೆ ಸ್ಪಂದಿಸುವಿರಿ. ಸಂಕಷ್ಟಗಳ ಉತ್ತಮ ನಿರ್ವಹಣೆಯಿಂದಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ಹೊಸ ಹೊಸ ವಿಚಾರಗಳನ್ನು ಕಲೆಹಾಕುವುದರಿಂದ ಸಂತೃಪ್ತಿ. ಸಂಬಂಧಗಳು ಮಧುರಗೊಳ್ಳುವುದು.

ವೃಷಭ: ವ್ಯವಹಾರದಲ್ಲಿ ಚೇತರಿಕೆಯನ್ನು ಕಾಣುವಿರಿ. ಸಮಾಧಾನದ ವರ್ತನೆಯಿಂದಾಗಿ ಒದಗಬಹುದಾದ ಕೌಟುಂಬಿಕ ಹಾಗೂ ಕಾರ್ಯಕ್ಷೇತ್ರಗಳಲ್ಲಿನ ತೊಂದರೆಗಳಿಂದ ಮುಕ್ತರಾಗುವಿರಿ. ವಿಶೇಷ ಮನ್ನಣೆಗೆ ಪಾತ್ರರಾಗುವಿರಿ.

ಮಿಥುನ: ನ್ಯಾಯಾಲಯದ ಕಟ್ಲೆಗಳಲ್ಲಿ ಹಿನ್ನಡೆ ಕಂಡುಬರುವ ಸಾಧ್ಯತೆ. ಹಿರಿಯರಿಂದ ಕಿರಿಕಿರಿ. ತಾಳ್ಮೆಗೆಡದೆ ವ್ಯವಹರಿಸಿದಲ್ಲಿ ಜಯ ನಿಮ್ಮದಾಗಲಿದೆ. ಆರೋಗ್ಯದ ವಿಚಾರದಲ್ಲಿ ಸ್ವಲ್ಪಮಟ್ಟಿನ ಎಚ್ಚರಿಕೆ ಅಗತ್ಯ.

ಕರ್ಕಾಟಕ: ನಿಮ್ಮ ವ್ಯವಹಾರದಲ್ಲಿ ನಷ್ಟವನ್ನು ಅನುಭವಿಸುವ ಸಾಧ್ಯತೆಯಿದ್ದು ಆಲಸ್ಯ ಕೂಡದು. ಸ್ವಜನರ ನಡುವೆ ಅಹಂಭಾವವನ್ನು ತೊಡೆದು ಎಲ್ಲರೊಂದಿಗೆ ಬೆರೆತು ಸಂತಸದ ದಿನವನ್ನಾಗಿಸಿಕೊಳ್ಳಿ.

ಸಿಂಹ: ನಿಮ್ಮವರೇ ನಿಮಗೆ ದ್ರೋಹ ಮಾಡುವ ಸಾಧ್ಯತೆಗಳು ಕಂಡುಬರುತ್ತಿವೆಯಾದ್ದರಿಂದ ಎಚ್ಚರಿಕೆ ಅಗತ್ಯ. ಮಾತಿನಲ್ಲಿ ಹಿಡಿತ ಇರಲಿ. ಸಹೋದರರ ಸಹೋದರಿಯರ ಸಹಕಾರ. ಬಾಂಧವ್ಯ ವೃದ್ಧಿಯಾಗಲಿದೆ.

ಕನ್ಯಾ: ಸ್ವಯಂ ಉದ್ಯೋಗಿಗಳಿಗೆ ಶುಭ ದಿನ. ಉತ್ತಮ ಆದಾಯದಿಂದಾಗಿ ಭದ್ರತೆ ನೆಮ್ಮದಿಯು ನಿಮ್ಮ ಪಾಲಿಗೆ ದೊರಕಲಿದೆ. ಹೊಸ ಸಂಬಂಧಗಳು ನಿಮ್ಮನ್ನರಸಿ ಬರಬಹುದು. ಹೊಸ ಯೋಜನೆಗೆ ಸೂಕ್ತ ಕಾಲ.

ತುಲಾ: ವಿವಾದಗಳಿಂದ, ತಗಾದೆಗಳಿಂದ ಮುಕ್ತರಾಗಿ ನಿರಾಳರಾಗುವಿರಿ. ಹಿರಿಯರಿಗೆ ಆರೋಗ್ಯದಲ್ಲಿ ಕಿರಿಕಿರಿ ಸಂಭವ. ವೈದ್ಯರ ಸಲಹೆಯಂತೆ ನಡೆಯುವುದು ಉತ್ತಮ. ನೆಮ್ಮದಿಗಾಗಿ ಕುಲದೇವತಾ ಆರಾಧನೆ ಮಾಡಿ.

ವೃಶ್ಚಿಕ: ಅನ್ಯ ಮಾರ್ಗದ ದುಡಿಮೆಯ ಕಡೆಗೆ ಮುಖ ಮಾಡಬೇಡಿ. ನ್ಯಾಯ ಮಾರ್ಗದ ದುಡಿಮೆ ಧೈರ್ಯ ಮತ್ತು ಶ್ರೇಯಸ್ಸನ್ನು ತರಲಿದೆ. ನ್ಯಾಯಾಲಯದ ಕಾಗದ ಪತ್ರಗಳು ಇತ್ಯಾದಿ ಅಮೂಲ್ಯ ಆಸ್ತಿಯ ಬಗ್ಗೆ ವಿಶೇಷ ಕಾಳಜಿ ಅಗತ್ಯ.

ಧನು: ಆತ್ಮೀಯರ ಭೇಟಿಯಾಗುವ ಯೋಗವಿದೆ. ದಿನವಿಡೀ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಉತ್ಸಾಹ ಲವಲವಿಕೆಗಳಿಂದ ಕಳೆಯುವಿರಿ. ಒತ್ತಡದ ನಿವಾರಣೆಗೆ ಗುರು ಆರಾಧನೆ ಮಾಡುವುದು ಸೂಕ್ತ.

ಮಕರ: ನೆರೆಹೊರೆಯವರೊಂದಿಗೆ ಹೊಂದಾಣಿಕೆ ಉತ್ತಮ. ತಾಳ್ಮೆಯಿಂದ ಎದುರಾಗುವ ವೈಷಮ್ಯ ನಿವಾರಣೆ. ಪ್ರಯಾಣದಲ್ಲಿ ತೊಂದರೆಯ ಸಾಧ್ಯತೆ. ಉದ್ಯೋಗದಲ್ಲಿನ ತೊಡಕುಗಳು ನಿವಾರಣೆಯಾಗಿ ಸುಗಮವಾಗುವುದು.

ಕುಂಭ: ಕುಟುಂಬದಲ್ಲಿ ಸಾಮರಸ್ಯ ಕಂಡುಬರುವುದು. ವೃತ್ತಿಯಲ್ಲಿ ಬದಲಾವಣೆಯ ಸಾಧ್ಯತೆ. ಮಕ್ಕಳು ತರುವ ಸಿಹಿ ಸುದ್ದಿಯಿಂದಾಗಿ ನೆಮ್ಮದಿ ನೆಲೆಸುವುದು. ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ತೊಂದರೆ ತೊಡಕು.


ಮೀನ: ವಿದ್ಯಾರ್ಥಿಗಳಿಗೆ ಅತ್ಯಂತ ಪ್ರಮುಖ ದಿನವಾಗಿದ್ದು, ಅಧ್ಯಯನದಲ್ಲಿ ಆಸಕ್ತಿ ಉಂಟಾಗುವುದು. ಸೋದರರಿಂದ ನಿಮ್ಮ ಸಹಕಾರದ ನಿರೀಕ್ಷೆ. ಹೊಸ ಮನೆಯನ್ನು ಕಟ್ಟಲು ಪ್ರಾರಂಭಿಸುವ ಸಾಧ್ಯತೆ.

ನಿಮ್ಮ ಜನ್ಮದಿನ 27-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಎಲ್ಲವೂ ಸಕಾಲದಲ್ಲಿ ಒದಗಿಬಂದು ಜೀವನವೊಂದು ಮಧುರವಾದ ಅನುಭವವಾಗಿ ಪರಿಣಮಿಸುವುದು. ಉತ್ತಮ ಬಾಂಧವ್ಯವು ಕೂಡಿಬಂದು ಸಂತೋಷಮಯವಾದ ಜೀವನ ದೊರಕುವುದು. ಉತ್ತಮ ಸಂಸ್ಕಾರವಂತರಾಗಿ ಸಮಾಜದಲ್ಲಿನ ಗೌರವಕ್ಕೆ ಚ್ಯುತಿಬಾರದು.

ಡಿ. 6ಕ್ಕೆ ಪುಟಿನ್ ಭಾರತಕ್ಕೆ

ನವದೆಹಲಿ (ಪಿಟಿಐ): ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾರತ-ರಷ್ಯಾದ 21ನೇ ವಾರ್ಷಿಕ ಶೃಂಗ ಸಭೆಯಲ್ಲಿ ಭಾಗವಹಿಸಲು ಡಿ.6ರಂದು ಭಾರತಕ್ಕೆ ಬರಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ತಿಳಿಸಿದರು. ಭಾರತ-ರಷ್ಯಾದ ನಡುವೆ ಸಂಬಂಧ ವೃದ್ಧಿಗಾಗಿ ಪ್ರತಿವರ್ಷ ಈ ಸಭೆ ನಡೆಸಲಾಗುತ್ತದೆ. ಆದರೆ, ಕಳೆದ ವರ್ಷ ಕೋವಿಡ್‌ನಿಂದ ಸಭೆಯನ್ನು ಮುಂದೂಡಲಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,536
ಇಂದಿನ ಅಂತ್ಯ	17,026
▼	509
ದಿನದ ಗರಿಷ್ಠ	17,355

ವಿನಿಮಯ ದರ

$ ಡಾಲರ್	74.89
£ ಪೌಂಡ್	99.68
€ ಯುರೊ	84.33
¥ ಯೆನ್ (100ಕ್ಕೆ)	65.72

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100 ಮೊಟ್ಟೆಗೆ	₹460
	12 ಮೊಟ್ಟೆಗೆ	₹62
ಮೈಸೂರು	100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1350)
ಸೋಯಾ (ರಿಫೈನ್ಡ್)	₹1240 (1242)
ಸೂರ್ಯಕಾಂತಿ (ರಿಫೈನ್ಡ್)	₹1310 (1310)
ಪಾಮೋಲಿನ್	₹1195 (1199)

ಕೊಬ್ಬರಿ ಧಾರಣೆ

ಅರಸೀಕೆರೆ	₹14,000-17,375
ತಿಪಟೂರು	₹17,200-17,700
ತುರುವೇಕೆರೆ	₹17,375-17,375

ಮದರ್ ಸ್ಪರ್ಶ್‌ನಲ್ಲಿ ಐಟಿಸಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದರ್ ಸ್ಪರ್ಶ್ ಬೇಬಿ ಕೇರ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಹೂಡಿಕೆ ಮಾಡಲು ಐಟಿಸಿ ಕಂಪನಿ ತೀರ್ಮಾನಿಸಿದೆ. ಐಟಿಸಿ, ಮದರ್ ಸ್ಪರ್ಶ್‌ನ ಶೇಕಡ 16ರಷ್ಟು ಷೇರುಗಳನ್ನು ಖರೀದಿಸಲಿದೆ.

ಡಿಜಿಟಲ್ ವಹಿವಾಟಿಗೆ ಆದ್ಯತೆ ನೀಡುವ, ಭವಿಷ್ಯದ ಸವಾಲುಗಳನ್ನು ನಿಭಾಯಿಸಲು ಸಜ್ಜಾಗಿರುವ ಕಂಪನಿಯನ್ನು ಕಟ್ಟಲು ಅಧ್ಯಕ್ಷ ಸಂಜೀವ್ ಪುರಿ ಅವರು ರೂಪಿಸಿರುವ ಕಾರ್ಯತಂತ್ರಕ್ಕೆ ಅನುಗುಣವಾಗಿ ಇದೆ ಈ ತೀರ್ಮಾನ ಎಂದು ಐಟಿಸಿ ಪ್ರಕಟಣೆ ತಿಳಿಸಿದೆ. ಕಂಪನಿಯು ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ವೇದಿಕೆಗಳನ್ನು ಕೂಡ ಗಟ್ಟಿಗೊಳಿಸುತ್ತಿದೆ.

ಕಚ್ಚಾ ತೈಲದ ಬೆಲೆ ಶೇಕಡ 5ರಷ್ಟು ಇಳಿಕೆ • ವಿದೇಶಿ ಹೂಡಿಕೆ ಹಿಂತೆಗೆತ ಮುಂದುವರಿಕೆ

ತಲ್ಲಣಿಸಿದ ಷೇರುಪೇಟೆ: ಕುಸಿದ ಸೂಚ್ಯಂಕ



ಮುಂಬೈ ಷೇರು ವಿನಿಮಯ ಕೇಂದ್ರ (ಎಎಫ್‌ಪಿ ಚಿತ್ರ)

ಮುಂಬೈ (ಪಿಟಿಐ): ದಕ್ಷಿಣ ಆಫ್ರಿಕಾ ಮತ್ತು ಇತರ ಕೆಲವು ದೇಶಗಳಲ್ಲಿ ಪತ್ತೆಯಾಗಿರುವ ಕೊರೊನಾ ವೈರಾಣುವಿನ ಹೊಸ ತಳಿಯು ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ಶುಕ್ರವಾರ ನಡುಕ ಸೃಷ್ಟಿಸಿತು. ಇದರ ಪರಿಣಾಮ ಭಾರತದ ಷೇರು ಮಾರುಕಟ್ಟೆಗಳ ಮೇಲೆಯೂ ಆಗಿದ್ದು, ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 1,687.94 ಅಂಶಗಳಷ್ಟು ಕುಸಿತ ಕಂಡಿದೆ.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 509 ಅಂಶ ಕುಸಿತ ಕಂಡಿದ್ದು, 17,100ಕ್ಕಿಂತ ಕೆಳಗಿನ ಮಟ್ಟಕ್ಕೆ ಬಂದಿದೆ. ಶುಕ್ರವಾರದ ವಹಿವಾಟಿನ ಕೊನೆಯಲ್ಲಿ ಸೆನ್ಸೆಕ್ಸ್ 57,107 ಅಂಶಗಳಿಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 37 ಪೈಸೆಯಷ್ಟು ಇಳಿಕೆ ದಾಖಲಿಸಿದೆ.

ಸೆನ್ಸೆಕ್ಸ್‌ನಲ್ಲಿ ಡಾ. ರೆಡ್ಡೀಸ್, ನೆಸ್ಲೆ ಇಂಡಿಯಾ, ಏಷ್ಯನ್ ಪೇಂಟ್ಸ್ ಮತ್ತು ಟಿಸಿಎಸ್ ಹೊರತುಪಡಿಸಿದರೆ ಉಳಿದ ಎಲ್ಲ ಕಂಪನಿಗಳ ಷೇರುಗಳು ಕುಸಿತ ದಾಖಲಿಸಿವೆ. ಇಂಡಸ್ ಇಂಡ್ ಬ್ಯಾಂಕ್ ಷೇರು ಮೌಲ್ಯದಲ್ಲಿ ಗರಿಷ್ಠ ಶೇಕಡ 6.01ರಷ್ಟು ಇಳಿಕೆ ಆಗಿದೆ.

‘ದೇಶಿ ಮಾರುಕಟ್ಟೆಯಲ್ಲಿ ಹೂಡಿಕೆದಾರರು, ಕೋವಿಡ್‌ನಿಂದ ತೊಂದರೆಗೆ ಒಳಗಾಗಬಲ್ಲ ಷೇರುಗಳ ಮಾರಾಟಕ್ಕೆ ಮುಂದಾದರು. ಔಷಧ ಉದ್ಯಮ ವಲಯದ ಷೇರುಗಳ ಖರೀದಿಗೆ ಅವರು ಗಮನ ನೀಡಿದರು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಈ ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಒಟ್ಟು 2,528 ಅಂಶ ಇಳಿಕೆ ಆಗಿದೆ. ನಿಫ್ಟಿ 738 ಅಂಶ ಕೆಳಕ್ಕೆ ಬಂದಿದೆ. ‘ಕೋವಿಡ್ ವಿಚಾರವಾಗಿ ಮತ್ತೆ ಹೆಚ್ಚುತ್ತಿರುವ ಕಳವಳದ ನಡುವೆ ಷೇರು ಮಾರುಕಟ್ಟೆಗಳು ಈ ವಾರದಲ್ಲಿ ಕುಸಿತ ದಾಖಲಿಸಿವೆ. ಕೊರೊನಾ ವೈರಾಣುವಿನ ಹೊಸ ತಳಿಯು ಲಾಕ್‌ಡೌನ್ ಮತ್ತು ಪ್ರಯಾಣ ನಿರ್ಬಂಧಗಳ ರೂಪದಲ್ಲಿ ಸವಾಲು ತಂದೊಡ್ಡಿದೆ. ಇದರ ಜೊತೆಯಲ್ಲೇ, ಹಣದುಬ್ಬರದ ಚಿಂತೆಯೂ ಜಗತಿನ ಬಹುತೇಕ ಮಾರುಕಟ್ಟೆಗಳಲ್ಲಿ ಕಂಡುಬಂದಿದೆ. ಸದ್ಯದ ಸಂದರ್ಭದಲ್ಲಿ ಷೇರು ಮಾರುಕಟ್ಟೆಗಳಲ್ಲಿನ ವಹಿವಾಟು ಹೊಸ ತಳಿ, ಹಣದುಬ್ಬರ ಪ್ರಮಾಣ, ಕೇಂದ್ರೀಯ ಬ್ಯಾಂಕ್‌ನ ನೀತಿಗಳನ್ನು ಆಧರಿಸಿ ಇರಲಿದೆ’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ (ಸಣ್ಣ ಹೂಡಿಕೆಗಳ) ಸಂಶೋಧನಾ ವಿಭಾಗದ ಮುಖ್ಯಸ್ಥ ಶ್ರೀಕಾಂತ್ ಚವಾಣ್ ಹೇಳಿದ್ದಾರೆ.

ಶಾಂಘೈ, ಹಾಂಗ್‌ಕಾಂಗ್, ಸೋಲ್ ಮತ್ತು ಟೋಕಿಯೊ ಷೇರು ಮಾರುಕಟ್ಟೆಗಳು ಕೂಡ ಕುಸಿತ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 5.62ರಷ್ಟು ಇಳಿಕೆಯಾಗಿ, ಪ್ರತಿ ಬ್ಯಾರೆಲ್‌ಗೆ 77.60 ಡಾಲರ್‌ಗೆ ತಲುಪಿದೆ.


ಷೇರು ಹೂಡಿಕೆದಾರರಿಗೆ ₹ 7.35 ಲಕ್ಷ ಕೋಟಿ ನಷ್ಟ

ನವದೆಹಲಿ: ಶುಕ್ರವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 7.35 ಲಕ್ಷ ಕೋಟಿಯಷ್ಟು ಕರಗಿದೆ. ಇದರ ಪರಿಣಾಮವಾಗಿ, ಬಿಎಸ್‌ಇ ಸೆನ್ಸೆಕ್ಸ್‌ನಲ್ಲಿ ನೋಂದಾಯಿತ ಆಗಿರುವ ಎಲ್ಲ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯವು ₹ 258 ಲಕ್ಷ ಕೋಟಿಗೆ ಇಳಿಕೆಯಾಗಿದೆ.

‘ಕೋವಿಡ್‌ನ ಹೊಸ ತಳಿ ಪತ್ತೆಯಾಗಿರುವುದು ಮಾತ್ರವೇ ಅಲ್ಲದೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹಲವು ದಿನಗಳಿಂದ ನಿರಂತರವಾಗಿ ಹೂಡಿಕೆ ಹಿಂತೆಗೆದುಕೊಳ್ಳುತ್ತಿರುವುದು ಕೂಡ ಕಳವಳದ ಸಂಗತಿ’ ಎಂದು ಟ್ರೇಡಿಂಗ್‌ಗೊ ಸಂಸ್ಥೆಯ ಸಂಸ್ಥಾಪಕ ಪಾರ್ಥ ನ್ಯಾತಿ ಹೇಳಿದ್ದಾರೆ.

‘ಐರೋಪ್ಯ ಒಕ್ಕೂಟವು ದಕ್ಷಿಣ ಆಫ್ರಿಕಾದಿಂದ ಬರುವ ವಿಮಾನಗಳ ಮೇಲೆ ತಾತ್ಕಾಲಿಕ ನಿಷೇಧ ಹೇರಿದೆ. ಯುರೋಪಿನ ಕೆಲವು ದೇಶಗಳು ಈಗಾಗಲೇ ಲಾಕ್‌ಡೌನ್ ಜಾರಿಗೆ ತಂದಿವೆ. ಹೀಗಾಗಿ, ವೈರಾಣುವಿನ ಹೊಸ ತಳಿಯು ಇತರ ದೇಶಗಳಿಗೂ ಹರಡಿ ಜಾಗತಿಕ ಅರ್ಥ ವ್ಯವಸ್ಥೆಯ ಹಳಿ ತಪ್ಪಿಸುವ ಭೀತಿ ಇದೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಹಿರಿಯ ಅಧಿಕಾರಿ ಹೇಮಾಂಗ್ ಜಾನಿ ಹೇಳಿದ್ದಾರೆ.

‘ಕೈಗಾರಿಕಾ ಸಮೂಹಕ್ಕೆ ಇಲ್ಲ ಬ್ಯಾಂಕ್ ಮಾಲೀಕತ್ವ’



ಮುಂಬೈ (ರಾಯಿಟರ್ಸ್): ಖಾಸಗಿ ಬ್ಯಾಂಕ್‌ಗಳ ಷೇರು ಮಾಲೀಕತ್ವಕ್ಕೆ ಸಂಬಂಧಿಸಿದ ಕೆಲವು ನಿಯಮಗಳಲ್ಲಿ ಬದಲಾವಣೆ ತರುವುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ತಿಳಿಸಿದೆ. ಆದರೆ, ಕೈಗಾರಿಕಾ ಸಮೂಹಗಳಿಗೆ ಬ್ಯಾಂಕ್‌ನ ಮಾಲೀಕತ್ವ ಹೊಂದುವ ಅವಕಾಶ ಇರುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಹೊಸ ನಿಯಮಗಳ ಅನ್ವಯ ಖಾಸಗಿ ಬ್ಯಾಂಕ್‌ಗಳ ಪ್ರವರ್ತಕರು 15 ವರ್ಷಗಳ ನಂತರದಲ್ಲಿ ತಮ್ಮ ಷೇರು ಪಾಲನ್ನು ಶೇಕಡ 26ರಷ್ಟಕ್ಕೆ ಮಿತಿಗೊಳಿಸಬೇಕು. ಈವರೆಗಿನ ನಿಯಮಗಳ ಅನ್ವಯ 15 ವರ್ಷಗಳ ನಂತರದಲ್ಲಿ ಅವರು ತಮ್ಮ ಷೇರುಪಾಲನ್ನು ಶೇಕಡ 15ರಷ್ಟಕ್ಕೆ ಮಿತಿಗೊಳಿಸಬೇಕಿತ್ತು. ಕೈಗಾರಿಕಾ ಸಮೂಹಗಳಿಗೆ ಬ್ಯಾಂಕ್‌ನ ಮಾಲೀಕತ್ವ ಹೊಂದಲು ಭಾರತದಲ್ಲಿ ಅವಕಾಶ ಇಲ್ಲ. ಅವರು ಗರಿಷ್ಠ ಶೇಕಡ 10ರಷ್ಟು ಷೇರುಪಾಲು ಹೊಂದಲು ಮಾತ್ರ ಅವಕಾಶ ಇದೆ.

ಬೃಹತ್ ಕೈಗಾರಿಕಾ ಸಮೂಹಗಳಿಗೆ ಬ್ಯಾಂಕ್‌ನ ಪ್ರವರ್ತಕರಾಗಲು ಅವಕಾಶ ಕಲ್ಪಿಸಬೇಕು, ಅವರಿಗೆ ಖಾಸಗಿ ಬ್ಯಾಂಕ್‌ಗಳಲ್ಲಿ ಹೆಚ್ಚಿನ ಷೇರುಪಾಲು ಹೊಂದಲು ಅವಕಾಶ ಇರಬೇಕು ಎಂದು ಆರ್‌ಬಿಐನ ಕಾರ್ಯಕಾರಿ ಸಮಿತಿಯೊಂದು ವರ್ಷದ ಹಿಂದೆ ಶಿಫಾರಸು ಮಾಡಿತ್ತು. ಇದನ್ನು ಕಾರ್ಯರೂಪಕ್ಕೆ ತರಲು ಆರ್‌ಬಿಐ ತೀವ್ರ ವಿರೋಧ ವ್ಯಕ್ತಪಡಿಸಿತ್ತು.

ಬ್ಯಾಂಕಿಂಗ್ ವಲಯ ಪ್ರವೇಶಿಸುವ ತಾಕತ್ತು ಬಜಾಜ್ ಸಮೂಹ, ಪಿರಾಮಲ್ ಸಮೂಹ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಇದೆ ಎಂದು ಹೂಡಿಕೆ ಬ್ಯಾಂಕ್ ಪ್ರತಿನಿಧಿಯೊಬ್ಬರು ಈ ಹಿಂದೆ ಹೇಳಿದ್ದರು. ಆದರೆ, ಕಾರ್ಪೊರೇಟ್ ವಲಯಕ್ಕೆ ಬ್ಯಾಂಕ್‌ಗಳ ಮಾಲೀಕತ್ವ ಹೊಂದಲು ಅವಕಾಶ ಕಲ್ಪಿಸದೆ ಇರಲು ಆರ್‌ಬಿಐ ತೀರ್ಮಾನಿಸಿದೆ ಎಂದು ಮೂಲಗಳು ಹೇಳಿವೆ.

ಪೇಮೆಂಟ್ ಬ್ಯಾಂಕ್‌ಗಳು ಐದು ವರ್ಷ ಕಾರ್ಯಾಚರಣೆ ನಡೆಸಿದ ನಂತರವಷ್ಟೇ ಕಿರು ಹಣಕಾಸು ಬ್ಯಾಂಕ್ ಆಗಿ ಪರಿವರ್ತನೆ ಹೊಂದಲು ಅರ್ಜಿ ಸಲ್ಲಿಸಬಹುದು ಎಂದು ಆರ್‌ಬಿಐ ಹೇಳಿದೆ.

ಪೇಮೆಂಟ್ ಬ್ಯಾಂಕ್‌ಗಳು ಮೂರು ವರ್ಷ ಕಾರ್ಯಾಚರಣೆ ನಡೆಸಿದ ನಂತರ, ಕಿರು ಹಣಕಾಸು ಬ್ಯಾಂಕ್ ಆಗಿ ಪರಿವರ್ತನೆ ಹೊಂದಲು ಅವಕಾಶ ಕೋರಿ ಅರ್ಜಿ ಸಲ್ಲಿಸಬಹುದು ಎಂದು ಕಾರ್ಯಕಾರಿ ಸಮಿತಿಯು ಶಿಫಾರಸು ಮಾಡಿತ್ತು.

ಸೆಮಿಕಂಡಕ್ಟರ್ ತಯಾರಿಕೆ

ಜಮೀನು ಹುಡುಕಾಟದಲ್ಲಿ ಟಾಟಾ ಸಮೂಹ



ನವದೆಹಲಿ (ರಾಯಿಟರ್ಸ್): ಟಾಟಾ ಸಮೂಹವು ₹ 22 ಸಾವಿರ ಕೋಟಿವರೆಗಿನ ಹೂಡಿಕೆಯ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲು ಕರ್ನಾಟಕ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳ ಜೊತೆ ಮಾತುಕತೆ ನಡೆಸಿದೆ.

ಹೊರಗುತ್ತಿಗೆ ಆಧಾರದ ಸೆಮಿಕಂಡಕ್ಟರ್ ಜೋಡಣೆ ಮತ್ತು ಪರೀಕ್ಷಾ ಕೇಂದ್ರದ ಸ್ಥಾಪನೆಗಾಗಿ ಜಮೀನು ಹುಡುಕಾಟ ಕೂಡ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಸೆಮಿಕಂಡಕ್ಟರ್ ಉದ್ಯಮ ಪ್ರವೇಶಿಸುವ ಇರಾದೆ ತನಗೆ ಇದೆ ಎಂದು ಟಾಟಾ ಸಮೂಹವು ಈ ಹಿಂದೆಯೇ ಹೇಳಿತ್ತು.

ಕಾರ್ಖಾನೆಯನ್ನು ಸ್ಥಾಪಿಸಲು ಅಗತ್ಯವಿರುವ ಸೂಕ್ತವಾದ ಕೆಲವು ಸ್ಥಳಗಳನ್ನು ಟಾಟಾ ಸಮೂಹ ಗುರುತಿಸಿದೆ ಎಂದು ಮೂಲಗಳು ತಿಳಿಸಿವೆ. ಮುಂದಿನ ತಿಂಗಳ ವೇಳೆಗೆ ಸ್ಥಳವನ್ನು ಅಂತಿಮಗೊಳಿಸುವ ಸಾಧ್ಯತೆ ಇದೆ ಎಂದು ಗೊತ್ತಾಗಿದೆ. ‘ಸಾಫ್ಟ್‌ವೇರ್ ಉದ್ಯಮದಲ್ಲಿ ಟಾಟಾ ಸಮೂಹವು ಬಲಿಷ್ಠವಾಗಿ ಬೆಳೆದಿದೆ. ಈಗ ದೀರ್ಘಾವಧಿಯ ಬೆಳವಣಿಗೆಯನ್ನು ಗಮನದಲ್ಲಿ ಇರಿಸಿಕೊಂಡು ಹಾರ್ಡ್‌ವೇರ್ ಕ್ಷೇತ್ರವನ್ನೂ ಸಮೂಹವು ಪ್ರವೇಶಿಸುತ್ತಿದೆ’ ಎಂದು ಮೂಲಗಳು ಹೇಳಿವೆ.

ಈ ವಿಚಾರವಾಗಿ ಟಾಟಾ ಸಮೂಹ, ಕರ್ನಾಟಕ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯ ಸರ್ಕಾರಗಳು ಪ್ರತಿಕ್ರಿಯೆ ನೀಡಿಲ್ಲ. ಟಾಟಾ ಸಮೂಹವು ಅತ್ಯಾಧುನಿಕ ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್ ವಹಿವಾಟುಗಳಲ್ಲಿ ಹೂಡಿಕೆ ಮಾಡುವ ಆಲೋಚನೆ ಹೊಂದಿದೆ ಎಂದು ಅದರ ಅಧ್ಯಕ್ಷ ಎನ್. ಚಂದ್ರಶೇಖರನ್ ಅವರು ಈ ಹಿಂದೆ ಹೇಳಿದ್ದರು.

ಸೆಮಿಕಂಡಕ್ಟರ್ ಜೋಡಣೆ ಕಾರ್ಖಾನೆಯು ಮುಂದಿನ ವರ್ಷದಲ್ಲಿ ಕಾರ್ಯ ಆರಂಭಿಸಬಹುದು, ಇದು ಗರಿಷ್ಠ ನಾಲ್ಕು ಸಾವಿರ ಜನರಿಗೆ ಉದ್ಯೋಗ ನೀಡಬಹುದು ಎನ್ನಲಾಗಿದೆ.

ಚಿನ್ನದ ಬೆಲೆ ₹ 570ರಷ್ಟು ಏರಿಕೆ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 570ರಷ್ಟು ಏರಿಕೆ ಕಂಡು ₹ 47,155ರಂತೆ ಮಾರಾಟವಾಗಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಆಗಿದ್ದು, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹೆಚ್ಚಳ ಆಗಿದ್ದು ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 190ರಷ್ಟು ಜಾಸ್ತಿ ಆಗಿ, ₹ 62,145ರಂತೆ ಮಾರಾಟವಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500- 550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	- 540
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52000
ಭದ್ರಾವತಿ	
ರಾಶಿ	44599-46599
ಹೊನ್ನಾಳಿ	
ರಾಶಿ	46109-46109
ಹೊಸನಗರ	
ಚಾಲಿ	38009-38009
ಕೆಂಪುಗೋಟು	35699-38899
ರಾಶಿ	43899-47770
ಕುಮಟಾ	
ಚಿಪ್ಪು	24509-40999
ಕೋಕ	21069-35019
ಫ್ಯಾಕ್ಟರಿ	12019-18929
ಹಳೆಚಾಲಿ	47019-50009
ಹೊಸಚಾಲಿ	34869-41109
ಕುಂದಾಪುರ	
ಹಳೆಚಾಲಿ	44000-51000
ಹೊಸಚಾಲಿ	37500-42500
ಮಂಗಳೂರು	
ಕೋಕ	30000-36500
ಶಿವಮೊಗ್ಗ	
ಬೆಟ್ಟೆ	47689-54009
ಗೊರಬಲು	15010-39169
ರಾಶಿ	43899-47059
ಸರಕು	50099-71809
ಸಿದ್ದಾಪುರ	
ಬಿಳಿಗೋಟು	33611-42569
ಚಾಲಿ	45409-51009
ಕೋಕ	24499-36889
ಹೊಸಚಾಲಿ	30012-38099
ಕೆಂಪುಗೋಟು	27609-37199
ರಾಶಿ	42899-48744
ತಟ್ಟಿಬೆಟ್ಟೆ	37799-45099
ಶಿರಸಿ	
ಬೆಟ್ಟೆ	34699-48899
ಬಿಳಿಗೋಟು	21669-44899
ಚಾಲಿ	45809-51158
ರಾಶಿ	43869-51199
ತುಮಕೂರು	
ಇತರೆ	45100-46200
ಯಲ್ಲಾಪುರ	
ಬಿಳಿಗೋಟು	33212-42899
ಚಾಲಿ	44329-50780
ಕೋಕ	26899-32899
ಕೆಂಪುಗೋಟು	27101-34219
ರಾಶಿ	46399-53910
ತಟ್ಟಿಬೆಟ್ಟೆ	38969-45369
ರೇಷ್ಮೆಗೂಡು ಮಾರುಕಟ್ಟೆ	
ರಾಮನಗರ	
ಮಿಶ್ರ ತಳಿ	: 100-550
ದ್ವಿತಳಿ	: 351-688

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,000	14,500	--	246.30 ಸೆಂಟ್ಸ್
ಎಸಿ	6,450	5,900	--	
ಆರ್‌ಪಿ	6,200	--	6,400	
ಆರ್‌ಸಿ	3,720	3,250	3,725	2,281 ಡಾಲರ್ಸ್

‘ಹೈದರ್‌ಪೋರಾ ದಾಳಿಯಲ್ಲಿ ಸತ್ತವರು ಅಮಾಯಕರಲ್ಲ’

ಪ್ರಜಾವಾಣಿ ವಾರ್ತೆ

ಜಮ್ಮು: ಶ್ರೀನಗರದ ಹೈದರ್‌ಪೋರಾದಲ್ಲಿ ನ.15ರಂದು ಭದ್ರತಾ ಪಡೆಗಳ ಎನ್‌ಕೌಂಟರ್‌ಗೆ ಬಲಿಯಾದವರು ಅಮಾಯಕರಲ್ಲ ಎಂದು ಜಮ್ಮು ಮತ್ತು ಕಾಶ್ಮೀರದ ಡಿಜಿಪಿ ದಿಲ್‌ಬಾಗ್ ಸಿಂಗ್ ತಿಳಿಸಿದ್ದಾರೆ.

ಜಮ್ಮುವಿನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹೈದರ್‌ಪೋರಾ ಎನ್‌ಕೌಂಟರ್ ಕುರಿತು ಕಾಶ್ಮೀರ ವಲಯ ಪೊಲೀಸರಿಂದ ವಿಶೇಷ ತನಿಖೆ ನಡೆಯುತ್ತಿದೆ. ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ವೃತ್ತಿಪರ ಪಡೆಯಾಗಿದ್ದು, ಕಾರ್ಯಾಚರಣೆ ಅರಿವಿಲ್ಲದ ಜನರಿಂದ ನಮ್ಮ ಪೊಲೀಸರು ಪಾಠ ಕಲಿಯುವ ಅಗತ್ಯವಿಲ್ಲ’ ಎಂದು ಅವರು ತಿರುಗೇಟು ನೀಡಿದ್ದಾರೆ.

‘ಹೈದರ್‌ಪೋರಾ ಎನ್‌ಕೌಂಟರ್ ಕುರಿತು ಎಲ್ಲ ಮಾಹಿತಿಯನ್ನು ಶೀಘ್ರವೇ ಬಹಿರಂಗಪಡಿಸಲಾಗುವುದು. ತನಿಖೆ ಮತ್ತಷ್ಟು ಪ್ರಗತಿಯಾದರೆ ಸತ್ಯಾಂಶ ಬೆಳಕಿಗೆ ಬರಲಿದೆ. ವಿದೇಶಿ ಉಗ್ರರನ್ನು ಬೈಕ್‌ನಲ್ಲಿ ಕರೆದೊಯ್ದು ದಾಳಿ ನಡೆಸಲು ಸೂಕ್ತ ಜಾಗವನ್ನು ತೋರಿಸುತ್ತಿದ್ದವರನ್ನು ಅಮಾಯಕರು ಎಂದು ಹೇಗೆ ಹೇಳುತ್ತೀರಿ’ ಎಂದು ಅವರು ಪ್ರಶ್ನಿಸಿದ್ದಾರೆ.

ರೈಲ್ವೆ ಪ್ಲಾಟ್‌ಫಾರ್ಮ್ ಟಿಕೆಟ್ ದರ ಇನ್ನು ₹ 10ಕ್ಕೆ ನಿಗದಿ

ನವದೆಹಲಿ: ರೈಲ್ವೆ ಇಲಾಖೆಯು ಪ್ಲಾಟ್‌ಫಾರ್ಮ್ ಟಿಕೆಟ್‌ನ ದರವನ್ನು ಕೋವಿಡ್ ಪರಿಸ್ಥಿತಿಯ ಪೂರ್ವದಲ್ಲಿ ಇದ್ದಂತೆಯೇ ₹ 10ಕ್ಕೆ ನಿಗದಿಪಡಿಸಿದೆ. ನಿಲ್ದಾಣಗಳಲ್ಲಿ ಜನಸಂದಣಿ ತಡೆಯಲು ಈ ಮೊದಲು ₹ 30ಕ್ಕೆ, ನಂತರ ₹ 50ಕ್ಕೆ ಏರಿಕೆ ಮಾಡಲಾಗಿತ್ತು.

ಇ–ವೇದಿಕೆ ಮೂಲಕ ಪಡೆವ ಆಟೊ ಸೇವೆಗೆ ತೆರಿಗೆ

ನವದೆಹಲಿ (ಪಿಟಿಐ): ಇ-ವಾಣಿಜ್ಯ ವೇದಿಕೆಗಳ ಮೂಲಕ ನೀಡುವ ಆಟೊ ರಿಕ್ಷಾ ಸೇವೆಗಳಿಗೆ ಜನವರಿ 1ರಿಂದ ಶೇಕಡ 5ರಷ್ಟು ಜಿಎಸ್‌ಟಿ ಅನ್ವಯ ಆಗಲಿದೆ.

ಇ-ವಾಣಿಜ್ಯ ವೇದಿಕೆಗಳ ಮೂಲಕ ಆಟೊ ರಿಕ್ಷಾ ಸೇವೆ ಒದಗಿಸುವುದಕ್ಕೆ ಇದ್ದ ಜಿಎಸ್‌ಟಿ ವಿನಾಯಿತಿಯನ್ನು ಹಿಂದಕ್ಕೆ ಪಡೆಯುವ ವಿಚಾರವನ್ನು ಕೇಂದ್ರ ಹಣಕಾಸು ಸಚಿವಾಲಯದ ಅಧೀನದ ರೆವೆನ್ಯು ಇಲಾಖೆ ಹೊರಡಿಸಿರುವ ಅಧಿಸೂಚನೆಯಲ್ಲಿ ಹೇಳಲಾಗಿದೆ.

ಆಟೊ ಚಾಲಕರು ಆಫ್‌ಲೈನ್ ಮೂಲಕ ನೀಡುವ ಸೇವೆಗಳಿಗೆ ಜಿಎಸ್‌ಟಿ ವಿನಾಯಿತಿಯು ಮುಂದುವರಿಯಲಿದೆ.

ಮುಂಬೈ ಧಾರಣೆ

ಶೇಂಗಾ

26-11-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	10000-10050
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1360)
ಒಂದು ವಾರದ ಡೆಲಿವರಿ	1335 (1355)
ಸೋಯಾ ಕಚ್ಚಾ	1200 (1205)
ಪಾಮ್ ವಾರದ ಡೆಲಿವರಿ	1193 (1197)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1210)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
48,200 (47,450)
ಬೆಳ್ಳಿ ಕೆ.ಜಿ
63,500 (62,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊಸ ಹುರುಪಿನೊಂದಿಗೆ ಮುಂದುವರಿದ ಅನ್ನದಾತರ ಪ್ರತಿಭಟನೆ

● ಕನಿಷ್ಠ ಬೆಂಬಲ ಬೆಲೆ ಕಾನೂನುಬದ್ಧಗೊಳಿಸಲು ಒತ್ತಾಯ ● ರೈತರ ವಿರುದ್ಧದ ಪ್ರಕರಣ ಕೈಬಿಡಲು, ಕೇಂದ್ರದ ವಿದ್ಯುತ್ ತಿದ್ದುಪಡಿ ಕಾಯ್ದೆ ರದ್ದು ಮಾಡಲು ಆಗ್ರಹ

ರೈತರ ಹೋರಾಟಕ್ಕೆ ವರ್ಷದ ಸಂಭ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ಆರಂಭಿಸಿದ್ದ ಹೋರಾಟಕ್ಕೆ ಶುಕ್ರವಾರ ಒಂದು ವರ್ಷ ತುಂಬಿದೆ. ಹೋರಾಟಕ್ಕೆ ವರ್ಷ ತುಂಬಲು ನಾಲ್ಕೈದು ದಿನವಿದ್ದಾಗ, ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವುದಾಗಿ ಕೇಂದ್ರ ಸರ್ಕಾರ ಘೋಷಿಸಿತ್ತು. ಕಾಯ್ದೆಗಳು ರದ್ದಾಗುವುದನ್ನು ಎದುರು ನೋಡುತ್ತಿರುವ ರೈತರು ತಮ್ಮ ಹೋರಾಟಕ್ಕೆ ವರ್ಷ ತುಂಬಿದ್ದನ್ನು ಸಂಭ್ರಮಿಸಿದ್ದಾರೆ.

ಈ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಆದರೆ ಕಾಯ್ದೆಗಳನ್ನು ರದ್ದುಪಡಿಸುವ ಪ್ರಕ್ರಿಯೆ ಪೂರ್ಣವಾಗುವವರೆಗೆ ಹೋರಾಟ ಕೈಬಿಡುವುದಿಲ್ಲ ಎಂದು ರೈತ ಸಂಘಟನೆಗಳು ಹೇಳಿವೆ. ಹೀಗಾಗಿ ಇನ್ನೂ ಪ್ರತಿಭಟನೆ ಮುಂದುವರಿದಿದೆ. ಪ್ರತಿಭಟನೆ ನಡೆಯುತ್ತಿರುವ ದೆಹಲಿಯ ಟಿಕ್ರಿ, ಸಿಂಘು ಮತ್ತು ಗಾಜಿಪುರ ಗಡಿಗಳಲ್ಲಿ ರೈತರು ಈ ದಿನವನ್ನು ಹಬ್ಬವನ್ನಾಗಿ ಆಚರಿಸಿದ್ದಾರೆ. ತಮ್ಮ ಟ್ರ್ಯಾಕ್ಟರ್‌ಗಳನ್ನು ಬಣ್ಣದ ಕಾಗದ ಮತ್ತು ಬಲೂನುಗಳಿಂದ ಅಲಂಕರಿಸಿದ್ದಾರೆ.

ಇದರ ಜತೆಯಲ್ಲಿಯೇ ರೈತರು ತಮ್ಮ ಇತರ ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಸಲು ನಿರ್ಧರಿಸಿದ್ದಾರೆ. 'ಕೃಷಿ ಕಾಯ್ದೆಗಳನ್ನು ರದ್ದುಮಾಡುವುದು ಮಾತ್ರವಲ್ಲ. ಕನಿಷ್ಠ ಬೆಂಬಲ ಬೆಲೆಯನ್ನು ಮತ್ತೆ ಕಾನೂನಿನ ಅಡಿಯಲ್ಲಿ ತರಬೇಕು. ಪ್ರತಿಭಟನೆನಿರತ ರೈತರ ವಿರುದ್ಧ ದಾಖಲಿಸಿರುವ ಪ್ರತಿಭಟನೆಗಳನ್ನು ಕೈಬಿಡಬೇಕು. ವಿದ್ಯುತ್ ಕಾಯ್ದೆಗೆ ತಂದಿರುವ ತಿದ್ದುಪಡಿಗಳನ್ನು ರದ್ದುಪಡಿಸಬೇಕು' ಎಂದು ಕಿಸಾನ್ ಸಂಯುಕ್ತ ಮೋರ್ಚಾ ಹೇಳಿದೆ. 'ನಮ್ಮ ಮುಂದಿನ ಹೋರಾಟದ ಸ್ವರೂಪವನ್ನು ಶನಿವಾರ ಸಭೆ ನಡೆಸಿ ನಿರ್ಧರಿಸಲಾಗುತ್ತದೆ. ಚಳಿಗಾಲದ ಅಧಿವೇಶನ ನಡೆಯುವಷ್ಟೂ ದಿನ ಸಂಸತ್ತಿಗೆ ಟ್ರ್ಯಾಕ್ಟರ್ ರ್‍ಯಾಲಿ ನಡೆಸುತ್ತೇವೆ' ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ಹೇಳಿದೆ.

'ನಮ್ಮ ಹೋರಾಟ ಇನ್ನೆಷ್ಟು ತಿಂಗಳು ಮುಂದುವರಿಯುತ್ತದೆಯೋ ಎಂಬುದು ಗೊತ್ತಿಲ್ಲ. ಹೀಗಾಗಿ ನಾಲ್ಕೈದು ತಿಂಗಳಿಗಾಗುವಷ್ಟು ದಿನಸಿ ಮತ್ತು ಅಗತ್ಯ ವಸ್ತುಗಳನ್ನು ತಂದಿದ್ದೇವೆ' ಎಂದು ರೈತರು ಹೇಳಿದ್ದಾರೆ.

ರೈತಸ್ತೋಮ | ಗಾಜಿಪುರ ಗಡಿಯಲ್ಲಿ ನಡೆದ ಸಂಭ್ರಮಾಚರಣೆ ಸಭೆಯಲ್ಲಿ 50,000ಕ್ಕೂ ಹೆಚ್ಚು ರೈತರು ಭಾಗಿಯಾಗಿದ್ದರು ಎಂದು ಬಿಕೆಯು ಹೇಳಿದೆ



ಟಿಕ್ರಿ ಗಡಿಯಲ್ಲಿ ನಡೆದ ಸಂಭ್ರಮಾಚರಣೆ ಸಭೆಯಲ್ಲಿ ಭಾಗಿಯಾಗಿದ್ದ ರೈತ ಮಹಿಳೆಯರು

ಹೋರಾಟದಲ್ಲಿ ಬಲಿದಾನ

700 ಪ್ರತಿಭಟನೆ ವೇಳೆ ಮೃತರಾದ ರೈತರ ಸಂಖ್ಯೆ

ಹೋರಾಟದ ವೇಳೆ ಹುತಾತ್ಮರಾದ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ರೈತ ಸಂಘಟನೆಗಳು ಆಗ್ರಹಿಸಿವೆ

4 ಲಖಿಂಪುರ ಖೇರಿಯಲ್ಲಿ ಜೀಪಿಗೆ ಸಿಲುಕಿ ಸತ್ತ ರೈತರ ಸಂಖ್ಯೆ

ಶೌರ್ಯದ ಕತೆ

'ರೈತರ ಶೌರ್ಯ, ತಾಳ್ಮೆ ಮತ್ತು ದೃಢಸಂಕಲ್ಪದ ಈ ಅಹಿಂಸಾ ಹೋರಾಟವು ಕಠೋರವಾದ ಕಾನೂನುಗಳನ್ನು ತೆಗೆದುಹಾಕಿದ್ದು ಮಾತ್ರವಲ್ಲ, ಬದಲಿಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯಿತು' ಎಂದು ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಹೇಳಿದ್ದಾರೆ.

'ಬೇಡಿಕೆ ನ್ಯಾಯಯುತ'

'ಈ ಹೋರಾಟದಲ್ಲಿ ರೈತರಿಗೆ ಸಂದ ಜಯವು, ಪ್ರಜಾಪ್ರಭುತ್ವಕ್ಕೆ ಸಂದ ಜಯವೇ ಸರಿ. ನಾವು ರೈತರೊಂದಿಗೆ ಸದಾ ಇರುತ್ತೇವೆ. ರೈತರ ಆ ಎಲ್ಲಾ ಬೇಡಿಕೆಗಳನ್ನು ನಾವು ಬೆಂಬಲಿಸುತ್ತೇವೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಹೇಳಿದ್ದಾರೆ.

ಬಿಜೆಪಿಯ ಕ್ರೌರ್ಯ

'ರೈತರ ಚಳವಳಿಗೆ ಒಂದು ವರ್ಷ ಸಂದಿದೆ. ರೈತರ ಅಚಲ ಸತ್ಯಾಗ್ರಹ, 700 ರೈತರ ಬಲಿದಾನ, ಅನ್ನದಾತರ ಮೇಲೆ ದೌರ್ಜನ್ಯ ನಡೆಸಿದ ಬಿಜೆಪಿ ಸರ್ಕಾರದ ದುರಹಂಕಾರ ಮತ್ತು ಕ್ರೌರ್ಯವೆಂದು ಇದು ದಾಖಲಾಗುತ್ತದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ಕುಟುಂಬ ರಾಜಕಾರಣ: ಪ್ರಧಾನಿ ಮೋದಿ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕಾಶ್ಮೀರದಿಂದ ಕನ್ಯಾಕುಮಾರಿ ವರೆಗೂ ಹರಡಿರುವ ಕುಟುಂಬದ ಪ್ರಾಬಲ್ಯವುಳ್ಳ ರಾಜಕೀಯ ಪಕ್ಷಗಳ ಬಗ್ಗೆ ಸಂವಿಧಾನಕ್ಕೆ ಬದ್ಧರಾಗಿರುವ ಜನರು ಪ್ರಮುಖವಾಗಿ ಚಿಂತನೆ ನಡೆಸಬೇಕಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ಮುಂದುವರಿಸಿರುವ ಅವರು, 'ರಾಜಕೀಯ ಪಕ್ಷಗಳು ಪ್ರಜಾಸತ್ತಾತ್ಮಕವಾದ ಲಕ್ಷಣವನ್ನು ಕಳೆದುಕೊಂಡರೆ ಸಂವಿಧಾನದ ಧ್ಯೇಯ ಮತ್ತು ಉದ್ದೇಶಕ್ಕೆ ಧಕ್ಕೆಯಾಗಲಿದೆ' ಎಂದು ಹೇಳಿದರು.

ಸಂಸತ್ತಿನ ಸೆಂಟ್ರಲ್‌ಹಾಲ್‌ನಲ್ಲಿ ನಡೆದ 'ಸಂವಿಧಾನ ದಿನ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರಜಾಸತ್ತಾತ್ಮಕವಾದ ಲಕ್ಷಣವನ್ನೇ ಕಳೆದುಕೊಂಡ ಪಕ್ಷಗಳು ಹೇಗೆ ತಾನೇ ಪ್ರಜಾಪ್ರಭುತ್ವವನ್ನು ರಕ್ಷಿಸುವುದು ಸಾಧ್ಯ' ಎಂದು ಪ್ರಶ್ನಿಸಿದರು.

ರಾಷ್ಟ್ರಪತಿ ರಾಮನಾಥ ಕೋವಿಂದ್, ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮತ್ತು ಸಂಸದರು ಹಾಜರಿದ್ದರು.

'ಕುಟುಂಬದ ಮತ್ತೊಬ್ಬ ಸದಸ್ಯ ಸೇರಿದಾಕ್ಷಣ ಒಂದು ರಾಜಕೀಯ ಪಕ್ಷ ಕುಟುಂಬ ಆಧಾರಿತವಾಗುವುದಿಲ್ಲ. ಆದರೆ, ಒಂದೇ ಕುಟುಂಬವು ನಿರ್ದಿಷ್ಟವಾಗಿ ಪಕ್ಷವನ್ನು ಮುನ್ನಡೆಸಿದಾಗ ಸಮಸ್ಯೆಗಳು ಶುರುವಾಗುತ್ತವೆ' ಎಂದು ಮೋದಿ ವ್ಯಾಖ್ಯಾನಿಸಿದರು.

'ಜನರು ಕೇವಲ ಸಂವಿಧಾನದ ಹಕ್ಕುಗಳ ಬಗ್ಗೆಯಷ್ಟೇ ಮಾತನಾಡಬಾರದು. ಸಾಂವಿಧಾನಿಕ ಜವಾಬ್ದಾರಿಯನ್ನೂ ನಿರ್ವಹಿಸಬೇಕು' ಎಂದರು.

14 ವಿರೋಧಪಕ್ಷಗಳಿಂದ ಬಹಿಷ್ಕಾರ

ನವದೆಹಲಿ (ಪಿಟಿಐ): ಲೋಕಸಭೆಯು ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಆಯೋಜಿಸಿದ್ದ ಸಂವಿಧಾನ ದಿನ ಕಾರ್ಯಕ್ರಮವನ್ನು ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದಂತೆ 14 ವಿರೋಧಪಕ್ಷಗಳು ಬಹಿಷ್ಕರಿಸಿದ್ದವು.

ಸಮಾಜವಾದಿ ಪಕ್ಷ, ಆಮ್ ಆದ್ಮಿ ಪಕ್ಷ, ಸಿಪಿಐ, ಸಿಪಿಎಂ, ಡಿಎಂಕೆ, ಶಿರೋಮಣಿ ಅಕಾಲಿ ದಳ, ಶಿವಸೇನೆ, ಎನ್‌ಸಿಪಿ, ತೃಣಮೂಲ ಕಾಂಗ್ರೆಸ್, ರಾಷ್ಟ್ರೀಯ ಜನತಾದಳ, ಆರ್‌ಎಸ್‌ಪಿ, ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ –ಬಹಿಷ್ಕರಿಸಿದ್ದ ಇತರೆ ಪಕ್ಷಗಳು.

'ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ, ಪಕ್ಷಯೇತರ ಕಾರ್ಯಕ್ರಮಗಳನ್ನು ಬಹಿಷ್ಕರಿಸುವ ಪರಿಪಾಠ ಪ್ರಜಾಪ್ರಭುತ್ವದ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ' ಎಂದು ಸ್ಪೀಕರ್ ಓಂ ಬಿರ್ಲಾ ಹೇಳಿದರು.

ಭಿನ್ನಾಭಿಪ್ರಾಯ ಅಡ್ಡಿಯಾಗದಿರಲಿ–ರಾಷ್ಟ್ರಪತಿ

ನವದೆಹಲಿ: ವಿರೋಧ ಪಕ್ಷಗಳು ಪ್ರಜಾಪ್ರಭುತ್ವದ ಪ್ರಮುಖ ಭಾಗ. ಆಡಳಿತ, ವಿರೋಧ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಇರಬಹುದು. ಅದರಿಂದ ಸಾರ್ವಜನಿಕ ಸೇವೆಯ ನಿಜ ಉದ್ದೇಶಕ್ಕೆ ಅಡ್ಡಿಯಾಗಬಾರದು ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದರು.

ಸುಲಿಗೆ ಪ್ರಕರಣ: ಪರಮ್ ಬೀರ್ ಸಿಂಗ್ ವಿಚಾರಣೆಗೆ ಹಾಜರು

ಮುಂಬೈ (ಪಿಟಿಐ): ತಮ್ಮ ವಿರುದ್ಧ ದಾಖಲಾದ ಸುಲಿಗೆ ಪ್ರಕರಣದ ತನಿಖೆಯ ವಿಚಾರಣೆಗೆ ಸಂಬಂಧಿಸಿದಂತೆ ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಶುಕ್ರವಾರ ಠಾಣೆಯ ಪೊಲೀಸ್ ಅಧಿಕಾರಿಗಳ ಮುಂದೆ ಹಾಜರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಪರಮ್ ಬೀರ್ ಅವರು ತಮ್ಮ ವಕೀಲರೊಡನೆ ಬೆಳಿಗ್ಗೆ 10.30ಕ್ಕೆ ಠಾಣೆ ನಗರ ಪೊಲೀಸ್ ಠಾಣೆಯನ್ನು ತಲುಪಿದರು. ವಲಯ ಡಿಸಿಪಿ ಅವಿನಾಶ್ ಅಂಬುರೆ ಅವರ ನೇತೃತ್ವದಲ್ಲಿ ತನಿಖಾ ತಂಡ ಪರಮ್ ಬೀರ್ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿತು ಎಂದು ಮೂಲಗಳು ತಿಳಿಸಿವೆ.

ಈ ವರ್ಷದ ಜುಲೈನಲ್ಲಿ ಬಿಲ್ಡರ್ ಮತ್ತು ಬುಕ್ಕಿ ಕೇತನ್ ತನ್ನಾ (54) ಅವರು ದಾಖಲಿಸಿದ ದೂರಿನ ಆಧಾರದಲ್ಲಿ ಠಾಣೆ ನಗರ ಪೊಲೀಸರು ಪರಮ್ ಬೀರ್ ಸಿಂಗ್ ಅವರ ವಿರುದ್ಧ ಸುಲಿಗೆ ಪ್ರಕರಣ ದಾಖಲಿಸಿದ್ದರು.

ಏಕ ಸದಸ್ಯ ಸಮಿತಿ ಸೂಚನೆ: ನವೆಂಬರ್ 29ರಂದು ವಿಚಾರಣೆಗೆ ಹಾಜರಾಗುವಂತೆ ನ್ಯಾಯಮೂರ್ತಿ ಕೆ.ಯು. ಚಾಂಡಿವಾಲ್ ನೇತೃತ್ವದ ಏಕ ಸದಸ್ಯ ಸಮಿತಿಯುಪರಮ್ ಬೀರ್ ಸಿಂಗ್‌ಗೆ ಸೂಚಿಸಿದೆ.

ದೇಶದಲ್ಲಿವೆ 6.2 ಕೋಟಿ ಬೀದಿ ನಾಯಿಗಳು!

ನವದೆಹಲಿ (ಪಿಟಿಐ): ಭಾರತದಲ್ಲಿ ಸುಮಾರು 6.2 ಕೋಟಿ ಬೀದಿನಾಯಿಗಳಿದ್ದರೆ, ಬೆಕ್ಕುಗಳ ಸಂಖ್ಯೆ ಸುಮಾರು 91 ಲಕ್ಷ ಇದೆ. ಒಟ್ಟಾರೆ ಸುಮಾರು 8 ಕೋಟಿ ನಾಯಿ, ಬೆಕ್ಕುಗಳು ಇದ್ದು, ಈ ಪೈಕಿ 88 ಲಕ್ಷ ನಾಯಿ, ಬೆಕ್ಕುಗಳಿಗೆ ಆಶ್ರಯತಾಣಗಳಲ್ಲಿ ಆಸರೆ ದೊರೆತಿದೆ.

ವರದಿಯೊಂದರ ಅನುಸಾರ, ನೆಲೆಯಿಲ್ಲದ ಪ್ರಾಣಿಗಳ ದುಸ್ಥಿತಿ ಕುರಿತ ಸೂಚ್ಯಂಕದಲ್ಲಿ ಭಾರತದ ಶ್ರೇಣಿಯು 10 ಅಂಶಗಳಲ್ಲಿ 2.4 ಆಗಿದೆ. ಬೀದಿ ನಾಯಿಗಳು, ಬೆಕ್ಕುಗಳ ಸಂಖ್ಯೆ ಹೆಚ್ಚಿದಷ್ಟೂ ಈ ಶ್ರೇಣಿ ಕಡಿಮೆ ಆಗುತ್ತದೆ.

ಭಾರತದ ಜನಸಂಖ್ಯೆಯಲ್ಲಿ ಶೇ 68ರಷ್ಟು ಜನರು ಅಂದರೆ ಪ್ರತಿ 10ರಲ್ಲಿ ಒಬ್ಬರು ನನಗೆ ಕನಿಷ್ಠ ವಾರಕ್ಕೊಮ್ಮೆ ಬೆಕ್ಕು ಕಾಣಿಸಿಕೊಳ್ಳುತ್ತದೆ ಎಂದರೆ, ಶೇ 70ರಷ್ಟು ಜನರು ಬಹುತೇಕ ನಿತ್ಯ ಬೀದಿನಾಯಿಗಳು ಕಾಣಿಸಿಕೊಳ್ಳುತ್ತವೆ ಎಂದು ಹೇಳುತ್ತಾರೆ ಎಂದು ವರದಿ ತಿಳಿಸಿದೆ.



ಸಾಂದರ್ಭಿಕ ಚಿತ್ರ

ಹೆಚ್ಚಿನ ಜನರು ನಾಯಿ ಅಥವಾ ಬೆಕ್ಕು ಸಾಕಲು ಅಥವಾ ಅವುಗಳ ಕ್ಷೇಮ ನೋಡಿಕೊಳ್ಳಲು ಆಸಕ್ತಿಯನ್ನು ತೋರಿರುವುದು ಭವಿಷ್ಯದಲ್ಲಿ 'ಎಲ್ಲ ಪ್ರಾಣಿಗಳಿಗೂ ಆರೈಕೆ ಸಿಗಲಿದೆ' ಎಂಬ ಸೂಚನೆಯನ್ನು ನೀಡಿದೆ.

ಸೌಲಭ್ಯ ಇಲ್ಲದಿರುವುದು, ದೂರ ಅಥವಾ ವರ್ಚಸ್ಸಿನ ಕಾರಣಕ್ಕಾಗಿ ನಾವು ಪಶುಸಂಗೋಪನಾ ಕೇಂದ್ರಗಳಿಗೆ ಹೋಗುವುದಿಲ್ಲ ಎಂದು ದೇಶದ ಜನಸಂಖ್ಯೆಯ ಶೇ 61ರಷ್ಟು ಜನರು ಪ್ರತಿಕ್ರಿಯಿಸುತ್ತಾರೆ. ಇದು, ಜಾಗತಿಕ ಪ್ರಮಾಣ ಶೇ 31ಕ್ಕಿಂತಲೂ ಅಧಿಕವಾಗಿದೆ.

ಈ ಬಗ್ಗೆ ಮಾತನಾಡಿದ ಪೀಪಲ್ಸ್ ಫಾರ್ ಅನಿಮಲ್ಸ್ (ಪಿಎಫ್‌ಎ) ಸಂಸ್ಥೆಯ ಗೌರಿ ಮುಲೇಖಿ ಅವರು, 'ಭಾರತದಲ್ಲಿ ಬೀದಿ ನಾಯಿಗಳ ಸಂತತಿ ಹೆಚ್ಚುತ್ತಿದೆ. ನಾಯಿಗಳ ಸಂತತಿ ತಡೆಗೆ ನಿಯಮಗಳ ಜಾರಿ ವಿಳಂಬವಾದುದೂ ಇದಕ್ಕೆ ಕಾರಣ' ಎಂದು ಹೇಳುತ್ತಾರೆ.

ವರದಿ ಅನುಸಾರ, ಚೀನಾದಲ್ಲಿರುವ ಬೀದಿನಾಯಿ, ಬೆಕ್ಕುಗಳ ಸಂಖ್ಯೆ 7.5 ಕೋಟಿ ಆಗಿದೆ. ಅಮೆರಿಕದಲ್ಲಿ 4.8 ಕೋಟಿ, ಜರ್ಮನಿಯಲ್ಲಿ 20.6 ಲಕ್ಷ, ಗ್ರೀಸ್‌ನಲ್ಲಿ 20 ಲಕ್ಷ, ಮೆಕ್ಸಿಕೊದಲ್ಲಿ 74 ಲಕ್ಷ, ರಷ್ಯಾ, ದಕ್ಷಿಣ ಆಫ್ರಿಕಾದಲ್ಲಿ ತಲಾ 11 ಲಕ್ಷ ಆಗಿದೆ.

ಕಾಂಗ್ರೆಸ್‌ನಿಂದ 'ಮೆಹಂಗಾಯಿ ಹಟಾವೋ' ರ‍್ಯಾಲಿ

ನವದೆಹಲಿ: ಕಾಂಗ್ರೆಸ್ ಪಕ್ಷವು ತೈಲ ಬೆಲೆ ಏರಿಕೆ ಮತ್ತು ಹಣದುಬ್ಬರದ ವಿರುದ್ಧ ಡಿಸೆಂಬರ್ 12ರಂದು 'ಮೆಹಂಗಾಯಿ ಹಟಾವೋ(ಬೆಲೆ ಇಳಿಸಿ)' ರ‍್ಯಾಲಿಯನ್ನು ಹಮ್ಮಿಕೊಂಡಿದೆ.

'ದೇಶದ ಜನರ ಗಮನವನ್ನು ತೈಲ ಬೆಲೆ ಏರಿಕೆ ಮತ್ತು ಹಣದುಬ್ಬರದತ್ತ ಸೆಳೆಯುವ ನಿಟ್ಟಿನಲ್ಲಿ ಪಕ್ಷವು ಡಿಸೆಂಬರ್ 12ರಂದು 'ಮೆಹಂಗಾಯಿ ಹಟಾವೋ' ರ‍್ಯಾಲಿಯನ್ನು ನಡೆಸಲಿದೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಮೋದಿ ಸರ್ಕಾರ ಲೂಟಿಯನ್ನು ನಿಲ್ಲಿಸಬೇಕು ಮತ್ತು ತೈಲ ದರವನ್ನು ಇಳಿಸಬೇಕು.ಅಲ್ಲಿಯವರೆಗೆ ನಾವು ಆಂದೋಲನ ಮುಂದುವರಿಸಲಿದ್ದೇವೆ' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

'ಭಾರತದ ನಾಗರಿಕರು ಕ್ರೂರತನ ಮತ್ತು ಹೇಳಲಾಗದ ನೋವನ್ನು ಅನುಭವಿಸುತ್ತಿದ್ದಾರೆ. ದೈನಂದಿನ ಅಗತ್ಯ ವಸ್ತುಗಳನ್ನು ಪಡೆಯಲು ಜನರು ಕಷ್ಟಪಡುತ್ತಿದ್ದಾರೆ. ಇವೆಲ್ಲವನ್ನೂ ಮೋದಿ ಸರ್ಕಾರ ನಿರ್ಲಕ್ಷ್ಯಿಸುತ್ತಿದೆ. ಜನರ ದಿಕ್ಕು ತಪ್ಪಿಸಲು ಧಾರ್ಮಿಕ ಭಾವನೆಯನ್ನು ಮೋದಿ ಸರ್ಕಾರ ಬಳಸುತ್ತಿದೆ' ಎಂದರು.

ದಕ್ಷಿಣ ಆಫ್ರಿಕಾ ಪ್ರವಾಸ: ಬಿಸಿಸಿಐ ಮರುಚಿಂತನೆ

ಕಾನ್ಪುರ (ಪಿಟಿಐ): ದಕ್ಷಿಣ ಆಫ್ರಿಕಾದಲ್ಲಿ ಕೊರೊನಾ ವೈರಾಣುವಿನ ಹೊಸ ತಳಿ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಭಾರತ ಕ್ರಿಕೆಟ್ ತಂಡ ಮುಂದಿನ ತಿಂಗಳು ಕೈಗೊಳ್ಳಲಿರುವ ಪ್ರವಾಸದ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮರುಚಿಂತನೆ ನಡೆಸಲಿದೆ.

ಡಿಸೆಂಬರ್ 17ರಿಂದ ದಕ್ಷಿಣ ಆಫ್ರಿಕಾದಲ್ಲಿ ಮೂರು ಟೆಸ್ಟ್, ಮೂರು ಏಕದಿನ ಮತ್ತು ನಾಲ್ಕು ಟಿ20 ಪಂದ್ಯಗಳ ಸರಣಿಗಳಲ್ಲಿ ಭಾರತ ತಂಡವು ಆಡಲಿದೆ. ಒಟ್ಟು ಏಳು ವಾರಗಳವರೆಗೆ ತಂಡವು ಅಲ್ಲಿರಲಿದೆ. ಜೋಹಾನ್ಸ್‌ಬರ್ಗ್, ಸೆಂಚುರಿಯನ್, ಪಾರ್ಲ್ ಮತ್ತು ಕೇಪ್‌ಟೌನ್‌ನಲ್ಲಿ ಪಂದ್ಯಗಳು ನಡೆಯಲಿವೆ.

ಕೊರೊನಾ ಸೋಂಕಿನ ಪ್ರಕರಣಗಳು ಹೆಚ್ಚಾಗುತ್ತಿರುವ ದಕ್ಷಿಣ ಆಫ್ರಿಕಾದ ಉತ್ತರ ಭಾಗದಲ್ಲಿರುವ ಜೋಹಾನ್ಸ್‌ಬರ್ಗ್ ಮತ್ತು ಪ್ರಿಟೋರಿಯಾದಲ್ಲಿ ಪಂದ್ಯಗಳನ್ನು ನಡೆಸುವುದು ಸುರಕ್ಷಿತವೇ ಎಂಬ ಬಗ್ಗೆಯೂ ಬಿಸಿಸಿಐ ಕಳವಳ ವ್ಯಕ್ತಪಡಿಸಿದೆ.

'ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ಪ್ರವಾಸದ ಕುರಿತು ಖಚಿತ ನಿರ್ಧಾರ ಕೈಗೊಳ್ಳಲಾಗುವುದು. ಆಟಗಾರರು, ಸಿಬ್ಬಂದಿಗಳ ಸುರಕ್ಷತೆ ಮುಖ್ಯ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್: ಬಸುದೇವ್ ಮಿಂಚು

ನಂದಿತಾ ಕಪೂರ್‌ಗೆ ಎರಡು ಚಿನ್ನ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ನಂದಿತಾ ಕಪೂರ್ ಅವರು ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಎರಡು ಚಿನ್ನದ ಪದಕ ಗೆದ್ದರು.

ಮಂಗಳೂರಿನ ಸಂತ ಅಲೋಷಿಯಸ್ ಈಜುಕೊಳದಲ್ಲಿ ಶುಕ್ರವಾರ ಆರಂಭವಾದ ಚಾಂಪಿಯನ್‌ಷಿಪ್‌ನ ಮಹಿಳೆಯರ 100 ಮೀಟರ್ಸ್ ಫ್ರೀಸ್ಟೈಲ್ 'ಎಫ್' ಗುಂಪು ವಿಭಾಗದಲ್ಲಿ (1ನಿಮಿಷ 32.72 ಸೆಕೆಂಡು) ಮತ್ತು 100 ಮೀಟರ್ಸ್ ಬಟರ್‌ಫ್ಲೈ (1:51.79) ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.ಪುರುಷರ ವಿಭಾಗದಲ್ಲಿ ರಾಜ್ಯದ ಬಸುದೇವ್ ಸಹಾ ಅವರೂ ಎರಡು ಚಿನ್ನ ಗೆದ್ದರು.

ಫಲಿತಾಂಶ: ಪುರುಷರು: 100 ಮೀ. ಫ್ರೀಸ್ಟೈಲ್: 'ಕೆ' ಗುಂಪು: ಬಸುದೇವ್ ಸಹಾ (ಕರ್ನಾಟಕ)–1, ಕಾಲ: 1:40.48, ಜೈದೀಪ್ ಅಂಟನಿ (ಗುಜರಾತ್)–2, ಥಾಮಸ್ ಕೆ.ಇ. (ಕೇರಳ)–3. 'ಎಚ್' ಗುಂಪು: ಜೋಸೆಫ್ ಕುಕ್ (ದೆಹಲಿ)–1, ಕಾಲ: 1:17.28, ಕೈಲಾಸನಾಥ್ ಸಂತ್ (ಮಹಾರಾಷ್ಟ್ರ)–2, ನಿರದ್ ಮುತ್ತಣ್ಣ (ಕರ್ನಾಟಕ)–3. ಗುಂಪು 'ಇ': ಗೋಪಾಲ್ ಖಾರ್ವಿ (ಕರ್ನಾಟಕ)–1, ಕಾಲ: 1:11.18, ತರ್ವಿಂದರ್ ಸಿಂಗ್ ಮಾರ್ವಾ (ದೆಹಲಿ)–2, ಸಂತೋಷ್ ಲೋಗನಾಥನ್ (ಕರ್ನಾಟಕ)–3. ಗುಂಪು 'ಡಿ': ಧಕಾನೆ ಮಂದಾರ್ (ಮಹಾರಾಷ್ಟ್ರ)–1, ಕಾಲ: 2:22.52, ಅಮಿತ್ ಕುಮಾರ್ (ಕರ್ನಾಟಕ)–2, ಬಿಜೇಶ್ ಜೋಸೆಫ್ (ಕೇರಳ)–3. ಗುಂಪು 'ಸಿ': ಪಾರ್ಥ್ ವಾರಣಾಸಿ (ಕರ್ನಾಟಕ)–1, ಕಾಲ:1:00.80 ಇಸ್ಮಾಯಿಲ್ ಬಿ (ಲಕ್ಷದ್ವೀಪ)–2, ಮೊಬಿರಾಜ್ ಟಿ. (ಕೇರಳ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 'ಕೆ': ಬಿ.ಆರ್. ಗೋಪಾಲ್ ರಾವ್ (ಕರ್ನಾಟಕ)–1, ಕಾಲ: 48.37, ಜೈದೀಪ್ ಅಂಟನಿ (ಗುಜರಾತ್)–2. ಗುಂಪು 'ಎಲ್': ಎಂ.ವಿ.ವಿ. ಸ್ವಾಮಿ (ಕರ್ನಾಟಕ)–1, ಮನಬೀರ್ ಸಿಂಗ್ ಮಲಿಕ್ (ದೆಹಲಿ)–2. 200 ಮೀ. ಮೆಡ್ಲೆ: ಗುಂಪು 'ಕೆ': ಬಸುದೇವ್ ಸಹಾ (ಕರ್ನಾಟಕ)–1 ಕಾಲ: 4:54.16. ಗುಂಪು 'ಜೆ': ಗೋವಿಂದ್ ಕೃಷ್ಣ (ಕರ್ನಾಟಕ)–1, ಕಾಲ: 5:03.49. ಗುಂಪು 'ಎಚ್' : ಮುತ್ತು ಕೃಷ್ಣ (ಕರ್ನಾಟಕ)–1 ಕಾಲ: 4:42.10.

ಮಹಿಳೆಯರು: 100 ಮೀ. ಫ್ರೀಸ್ಟೈಲ್; ಗುಂಪು 'ಜೆ': ಸೀತಾ ರಾವ್ (ಕರ್ನಾಟಕ)–1, ಕಾಲ:2:11.83, ಪುಷ್ಪಾ ಭಟ್ (ಮಹಾರಾಷ್ಟ್ರ)–2, ಜಯಶ್ರೀ ತ್ರಿವೇಂಗದಸ್ವಾಮಿ (ಕರ್ನಾಟಕ)–3. ಗುಂಪು 'ಎಚ್': ಸುನೀತಾ ರಾವ್ (ಕರ್ನಾಟಕ)–1, ಎಡ್ನಾ ಶರ್ಮಾ (ದೆಹಲಿ)–2. ಗುಂಪು 'ಎಫ್': ನಂದಿತಾ ಕಪೂರ್ (ಕರ್ನಾಟಕ)–1, ಕಾಲ: 1:32.72, ರೀತಾ ಶರ್ಮಾ (ದೆಹಲಿ)–2, ಉಮಾ ಬಿ.ಕೆ. (ಕರ್ನಾಟಕ)–3. ಗುಂಪು 'ಸಿ': ವರುಣಾ ಮಯ್ಯಾ (ಕರ್ನಾಟಕ)–1, ಕಾಲ: 1:20.08, ಪ್ರೀತಿ ಆ್ಯಂಟನಿ (ಕೇರಳ)–2, ಟಿಮ್ ಟಿಮ್ ಶರ್ಮಾ(ಕರ್ನಾಟಕ)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 'ಕೆ': ಜಯಶ್ರೀ ತ್ರಿವೇಂಗದಸ್ವಾಮಿ–1, ಕಾಲ: 1:36.44, ಲಲಿತಾ ರಾಘವನ್ –2 (ಇಬ್ಬರೂ ಕರ್ನಾಟಕ). ಗುಂಪು 'ಇ': ಅನಸೂಯಾ ಆಳ್ವಾ (ಕರ್ನಾಟಕ)–1, ಕಾಲ: 46.28, ಮಯೂರಾ ಸಾಳ್ವಿ (ಮಹಾರಾಷ್ಟ್ರ)–2, ನಂದಿ ನಯನ್ (ದೆಹಲಿ)–3, 100 ಮೀ. ಬಟರ್‌ಫ್ಲೈ: ಗುಂಪು 'ಎಫ್' ನಂದಿತಾ ಕಪೂರ್ (ಕರ್ನಾಟಕ)–1, ಕಾಲ: 1:51.79, ನಳಿನಿ ಅವಧಾನಿ (ಮಹಾರಾಷ್ಟ್ರ)–2, ರೇಖಾ ಯಾನಿ (ಕರ್ನಾಟಕ)–3. ಗುಂಪು 'ಬಿ': ಶ್ರದ್ಧಾ ಆಳ್ವಾ (ಕರ್ನಾಟಕ)– ಕಾಲ: 1:49.32, ಅಪರಾಜಿತಾ ಮುರಳಿ (ಕರ್ನಾಟಕ)–2.



ಮಂಗಳೂರಿನ ಸಂತ ಅಲೋಷಿಯಸ್ ಈಜು ಕೊಳದಲ್ಲಿ ನಡೆಯುತ್ತಿರುವ 17ನೇ ರಾಷ್ಟ್ರೀಯ ಮಾಸ್ಟರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಮಹಿಳೆಯರ 100 ಮೀಟರ್ ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನ ವಿಜೇತ ನಂದಿತಾ ಕಪೂರ್ ಈಜಿನ ಭಂಗಿ –ಪ್ರಜಾವಾಣಿ ಚಿತ್ರ/ಇರ್ಷಾದ್ ಮಹಮ್ಮದ್

ಬ್ಯಾಡ್ಮಿಂಟನ್: ಸೆಮಿಗೆ ಸಿಂಧು

ಬಾಲಿ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದು ಜಯಭೇರಿ ಮೊಳಗಿಸಿದ ಭಾರತದ ಪಿ.ವಿ.ಸಿಂಧು ಇಂಡೊನೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ವಿಶ್ವ ಚಾಂಪಿಯನ್, ಮೂರನೇ ಶ್ರೇಯಾಂಕದ ಸಿಂಧು ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ 14-21, 21-19, 21-14ರಿಂದ ದಕ್ಷಿಣ ಕೊರಿಯಾದ ಸಿಮ್ ಯೂಜಿನ್ ಅವರನ್ನು ಮಣಿಸಿದರು. ಒಂದು ತಾಸು ಆರು ನಿಮಿಷಗಳ ಆಟದಲ್ಲಿ ಭಾರತದ ಆಟಗಾರ್ತಿ ಜಯವನ್ನು ಒಲಿಸಿಕೊಂಡರು.

ಪುರುಷರ ಡಬಲ್ಸ್ ವಿಭಾಗದಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಕೂಡ ಸೆಮಿಫೈನಲ್ ತಲುಪಿದರು. ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಭಾರತದ ಆಟಗಾರರು 21-19, 21-19ರಿಂದ ಮಲೇಷ್ಯಾದ ಗೋಹ್ ಸೆ ಫೆ– ನೂರ್ ಇಜುದ್ದೀನ್ ಅವರನ್ನು ಸೋಲಿಸಿದರು.

ಫುಟ್‌ಬಾಲ್: ಬ್ರೆಜಿಲ್‌ಗೆ ಮಣಿದ ಭಾರತ

ಮನೌಸ್, ಬ್ರೆಜಿಲ್ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡವು ಬಲಿಷ್ಠ ಬ್ರೆಜಿಲ್ ಎದುರಿನ ಪಂದ್ಯದಲ್ಲಿ ಸೋಲು ಅನುಭವಿಸಿದೆ.

ಇಲ್ಲಿ ನಡೆಯುತ್ತಿರುವ ನಾಲ್ಕು ರಾಷ್ಟ್ರಗಳ ಫುಟ್‌ಬಾಲ್ ಟೂರ್ನಿಯಲ್ಲಿ ಏಳನೇ ರ‍್ಯಾಂಕಿನ ಬ್ರೆಜಿಲ್ ತಂಡವು 6–1ರಿಂದ ಭಾರತವನ್ನು ಪರಾಭವಗೊಳಿಸಿತು.

57ನೇ ಕ್ರಮಾಂಕದ ಭಾರತದ ಪರ ಮನೀಷಾ ಕಲ್ಯಾಣ್ (8ನೇ ನಿಮಿಷ) ಗೋಲು ದಾಖಲಿಸಿದರೆ, ಆತಿಥೇಯ ತಂಡದ ಒಲಿವೆರಾ ಡೆಬಿನಾ (1ನೇ ನಿಮಿಷ), ಕೋಸ್ಟಾ ಜಿಯೊವಾನಾ (36ನೇ ನಿ.), ಬೋರ್ಗೆಸ್ ಅರಿಯಾದಿನಾ (52 ಮತ್ತು 81ನೇ ನಿಮಿಷ), ಫೆರಾಜ್ ಕರೋಲಿನಾ (55ನೇ ನಿಮಿಷ), ಫೆರಿರಾ ಗೆಯ್ಸಾ (76ನೇ ನಿಮಿಷ) ಕಾಲ್ಚಳಕ ತೋರಿದರು.

ಮನೀಷಾ ಕಲ್ಯಾಣ್ ಗೋಲು ದಾಖಲಿಸುವ ಮೂಲಕ ವಿಶ್ವಕ್ರಮಾಂಕದಲ್ಲಿ ಅಗ್ರ 10ರೊಳಗಿನ ತಂಡದ ಎದುರು ಯಶಸ್ಸು ಸಾಧಿಸಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು.

ಫಾರ್ಮಿಗಾ ನಿವೃತ್ತಿ: ಈ ಪಂದ್ಯದೊಂದಿಗೆ ಬ್ರೆಜಿಲ್ ತಂಡದ ಪ್ರಮುಖ ಆಟಗಾರ್ತಿ, ಮಿಡ್‌ಫೀಲ್ಡರ್ ಫಾರ್ಮಿಗಾ ನಿವೃತ್ತಿ ಪ್ರಕಟಿಸಿದರು. 43 ವರ್ಷದ ಫಾರ್ಮಿಗಾ ತಂಡದ ಪರ 26 ವರ್ಷಗಳ ಅವಧಿಯಲ್ಲಿ 233 ಪಂದ್ಯಗಳನ್ನು ಆಡಿದ್ದಾರೆ.

ಹೈದರಾಬಾದ್ ರೇಸ್

ಕಿಂಗ್‌ಸ್ಟನ್ ಗೆಲ್ಲುವ ನಿರೀಕ್ಷೆ

ಶ್ರೀ ಶ್ಯಾಮ್‌ಲಾಲ್ ಗುಪ್ತ ಮೆಮೋರಿಯಲ್ ಕಪ್ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಿಂಗ್‌ಸ್ಟನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.15ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಹರಿಕೇನ್ 3, ವಿನ್ನಿಂಗ್ ಪ್ಲೇಯರ್ 2, ಹ್ಯಾಷ್‌ಟ್ಯಾಗ್ 1
2ನೇ ರೇಸ್: ಟಾಪ್ ಡೈಮಂಡ್ 3, ಮುಐಸರ್ 5, ಸಿಟಿ ಆಫ್ ಬ್ಲೆಸ್ಸಿಂಗ್ 4
3ನೇ ರೇಸ್: ಬರ್ನಿನಿ 4, ಕ್ವಾಲಿಟಿ ವಾರಿಯರ್ 2, ಗಾಲ್ವಾನ್ 1
4ನೇ ರೇಸ್: ಎನ್.ಆರ್.ಐ ಸ್ಪೋರ್ಟ್ 1, ಕಾಸ್ಮಿಕೊ 3, ಏಬಲ್ ಲವ್ 2
5ನೇ ರೇಸ್: ಗಾಲ್ವೆ ಬೇ 7, ಅರೇಬಿಯನ್ ಕ್ವೀನ್ 6, ಪ್ರಿನ್ಸೆಸ್ ಡಾಕಾ 9
6ನೇ ರೇಸ್: ಎನ್.ಆರ್.ಐ ಟಚ್ 3, ಬ್ಯೂಟಿ ಫ್ಲೇಮ್ 1, ವಿನ್ನಿಂಗ್ ಸ್ಟ್ರೀಕ್ 4
7ನೇ ರೇಸ್: ಕಿಂಗ್‌ಸ್ಟನ್ 8, ಸದರ್ನ್ ಪ್ರಿನ್ಸೆಸ್ 3, ಶೋ ಮಿ ಯುವರ್ ವಾಕ್ 11
8ನೇ ರೇಸ್: ಥಂಡರ್ ರೋಡ್ 4, ಎನ್.ಆರ್.ಐ ಗಿಫ್ಟ್ 5, ಸೀ ವೂಲ್ಫ್ 2

ಉತ್ತಮ ಬೆಟ್: ಎನ್.ಆರ್.ಐ ಟಚ್

ಜಾಕ್‌ಪಾಟ್	1ನೇ ಮಿನಿ ಜಾಕ್‌ಪಾಟ್	2ನೇ ಮಿನಿ ಜಾಕ್‌ಪಾಟ್
4,5,6,7,8	2,3,4,5	5,6,7,8
1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
1,2,3	3,4,5	6,7,8



ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ಶುಕ್ರವಾರ ಅಧ್ಯಕ್ಷ ವಿನೋದ್ ಶಿವಪ್ಪ (ಎಡತುದಿ) ಅವರು ರೇಸ್‌ನಲ್ಲಿ ವಿಜೇತ ಮಲ್ಟಿಫೆಸೆಟೇಡ್ ಕುದುರೆಯ ಟ್ರೇನರ್ ಡೇರಿಯಸ್ ಬೈರಾಮ್‌ಜೀ (ಬಲತುದಿ) ಅವರಿಗೆ ಟ್ರೋಫಿ ವಿತರಿಸಿದರು. ಈ ಸಂದರ್ಭದಲ್ಲಿ ಬಿಟಿಸಿಯ ಶಿವಕುಮಾರ್ ಹಾಗೂ ಶ್ರೀನಿವಾಸ್ ರೆಡ್ಡಿ ಇದ್ದರು– ಪ್ರಜಾವಾಣಿ ಚಿತ್ರ

ಕೊರೊನಾ ಹಾವಳಿ: ಕ್ರಿಕೆಟ್ ಪಂದ್ಯ ಸ್ಥಗಿತ

ಜೋಹಾನ್ಸ್‌ಬರ್ಗ್ (ಎಪಿ): ಕೋವಿಡ್ ವೈರಾಣುವಿನ ಹೊಸ ತಳಿಯ ಹಾವಳಿ ಹೆಚ್ಚುತ್ತಿದ್ದಂತೆಯೇ ದಕ್ಷಿಣ ಆಫ್ರಿಕಾದಲ್ಲಿ ಆಯೋಜನೆಯಾಗಿರುವ ಕ್ರೀಡಾಕೂಟಗಳ ಸ್ಥಿತಿ ಡೋಲಾಯಮಾನವಾಗಿವೆ.

ಶುಕ್ರವಾರ ಸೆಂಚುರಿಯನ್‌ನಲ್ಲಿ ಆಯೋಜಿಸಲಾಗಿದ್ದ ದಕ್ಷಿಣ ಆಫ್ರಿಕಾ ಮತ್ತು ನೆದರ್ಲೆಂಡ್ಸ್ ನಡುವಣ ಕ್ರಿಕೆಟ್ ಪಂದ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಯಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಆತಿಥೇಯ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 277 ರನ್ ಗಳಿಸಿತ್ತು. ನೆದರ್ಲೆಂಡ್ಸ್ ತಂಡವು ಎರಡು ಓವರ್‌ಗಳಲ್ಲಿ 11 ರನ್ ಮಾಡಿದ್ದ ಸಂದರ್ಭದಲ್ಲಿ ಪಂದ್ಯ ಸ್ಥಗಿತವಾಯಿತು. ಸರಣಿಯಿಂದಲೇ ಹಿಂದೆ ಸರಿಯುವತ್ತ ನೆದರ್ಲೆಂಡ್ಸ್ ಚಿತ್ತ ನೆಟ್ಟಿದೆ ಎನ್ನಲಾಗಿದೆ.

ಶುಕ್ರವಾರ ಯುನೈಟೆಡ್ ಕಿಂಗ್‌ಡಮ್ ಸರ್ಕಾರವು ದಕ್ಷಿಣ ಆಫ್ರಿಕಾಕ್ಕೆ ವಿಮಾನಯಾನವನ್ನು ಸ್ಥಗಿತಗೊಳಿಸಿದೆ. ಇದರಿಂದಾಗಿ ಇಲ್ಲಿ ನಡೆಯುತ್ತಿರುವ ಗಾಲ್ಫ್ ಮತ್ತು ರಗ್ಬಿ ಟೂರ್ನಿಗಳಲ್ಲಿ ಭಾಗವಹಿಸಿರುವ ಇಂಗ್ಲೆಂಡ್ ಮತ್ತು ಐರ್ಲೆಂಡ್ ಕ್ರೀಡಾಪಟುಗಳು ತಮ್ಮ ತವರಿಗೆ ಮರಳಲು ಪರದಾಡುತ್ತಿದ್ದಾರೆಂದು ವರದಿಯಾಗಿದೆ.

ಗುರುವಾರವಷ್ಟೇ ಡಿಪಿ ವಿಶ್ವ ಗಾಲ್ಫ್ ಟೂರ್ ಆರಂಭವಾಗಿತ್ತು. ಹೊಸ ನಿಯಮಾವಳಿಗಳನ್ನು ಜಾರಿಗೊಳಿಸಿದ್ದರಿಂದ ಈಗಾಗಲೇ 12ಕ್ಕೂ ಹೆಚ್ಚು ಸ್ಪರ್ಧಿಗಳು ಹಿಂದೆ ಸರಿದಿದ್ದಾರೆ ಎಂದು ಟೂರ್ ವಕ್ತಾರ ಸ್ಟೀವ್ ಟಾಡ್ ಖಚಿತಪಡಿಸಿದ್ದಾರೆ.

ಮುಂದಿನ ಎರಡು ವಾರಾಂತ್ಯದ ದಿನಗಳಲ್ಲಿ ನಿಗದಿಯಾಗಿದ್ದ ಯುನೈಟೆಡ್ ರಗ್ಬಿ ಚಾಂಪಿಯನ್‌ಷಿಪ್ ಪಂದ್ಯಗಳನ್ನೂ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

'ಈಗಾಗಲೇ ತೆಗೆದುಕೊಂಡಿರುವ ಲಸಿಕೆಗಳು ಆಫ್ರಿಕಾ ತಳಿಯ ವೈರಾಣುವಿನ ಮುಂದೆ ಹೆಚ್ಚು ಪ್ರಯೋಜನಕಾರಿಯಲ್ಲ. ಆದ್ದರಿಂದ ದಕ್ಷಿಣ ಆಫ್ರಿಕಾದಿಂದ ಇಂಗ್ಲೆಂಡ್‌ಗೆ ಬರುವ ಪ್ರಯಾಣಿಕರಿಗೆ ಕಡ್ಡಾಯ ಪ್ರತ್ಯೇಕವಾಸದ ನಿಯಮವನ್ನು ಮತ್ತೆ ಜಾರಿಗೆ ತರಲಾಗಿದೆ' ಎಂದು ಇಂಗ್ಲೆಂಡ್‌ನ ಆರೋಗ್ಯ ಕಾರ್ಯದರ್ಶಿ ಸಾಜಿದ್ ಜಾವಿದ್ ತಿಳಿಸಿದ್ದಾರೆ.


ಜಿಂಬಾಬ್ವೆಯಲ್ಲಿ ಮಹಿಳಾ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಗಳನ್ನೂ ಆಯೋಜಿಸಲಾಗಿದೆ. ಅಮೆರಿಕ, ವೆಸ್ಟ್ ಇಂಡೀಸ್, ನೆದರ್ಲೆಂಡ್ಸ್, ಥಾಯ್ಲೆಂಡ್, ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನ ತಂಡಗಳು ಮುಂದಿನ ವಾರ ಜಿಂಬಾಬ್ವೆಗೆ ಬಂದಿಳಿಯಬೇಕು. ಇದೀಗ ಆ ಪಂದ್ಯಗಳನ್ನೂ ಮುಂದೂಡುವುದು ಬಹುತೇಕ ಖಚಿತವಾಗಿದೆ.



ಪಂದ್ಯ ನಿಂತಾಗ ತಂಡಗಳ ಆಟಗಾರರು ತಮ್ಮ ಡಗ್‌ಔಟ್‌ನಲ್ಲಿ ಸೇರಿದರು

ಶೂಟಿಂಗ್: ಸೌರಭ್ ಚೌಧರಿಗೆ ಚಿನ್ನ

ನವದೆಹಲಿ (ಪಿಟಿಐ): ಒಲಿಂಪಿಯನ್ ಸೌರಭ್ ಚೌಧರಿ ಗುರುವಾರ ಇಲ್ಲಿ ನಡೆದ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀಟರ್ಸ್ ಪಿಸ್ತೂಲು ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.



ಸೌರಭ್ ಚೌಧರಿ – ಪಿಟಿಐ ಚಿತ್ರ

ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಸೌರಭ್ 564 ಸ್ಕೋರ್ ಗಳಿಸಿದರು.

ಉತ್ತರಪ್ರದೇಶವನ್ನು ಸೌರಭ್ ಪ್ರತಿನಿಧಿಸುತ್ತಿದ್ದಾರೆ.

ಗ್ರೀನ್ ಪಾರ್ಕ್‌ನಲ್ಲಿ ಭಾರತದ ಬೌಲರ್‌ಗಳಿಗೆ ಯಂಗ್–ಟಾಮ್ ದಿಟ್ಟ ಉತ್ತರ

ಅಯ್ಯರ್ ಪದಾರ್ಪಣೆಗೆ ಶತಕ 'ಶ್ರೇಯ'

ಪ್ರಜಾವಾಣಿ ವಾರ್ತೆ

ಕಾನ್ಪುರ: ಐದು ದಶಕಗಳ ಹಿಂದೆ ಕನ್ನಡಿಗ ಜಿ.ಆರ್. ವಿಶ್ವನಾಥ್ ತಮ್ಮ ಪದಾರ್ಪಣೆಯ ಟೆಸ್ಟ್ ನಲ್ಲಿ ಶತಕ ದಾಖಲಿಸಿದ ಗ್ರೀನ್ ಪಾರ್ಕ್‌ನಲ್ಲಿ ಶುಕ್ರವಾರ ಮುಂಬೈಕರ್ ಶ್ರೇಯಸ್ ಅಯ್ಯರ್ ಕೂಡ ತಮ್ಮ ಹೆಜ್ಜೆಗುರುತು ಮೂಡಿಸಿದರು.

ತಡವಾಗಿಯಾದರೂ ಭಾರತ ಟೆಸ್ಟ್ ತಂಡದಲ್ಲಿ ತಮಗೆ ಸ್ಥಾನ ಸಿಕ್ಕಿದ್ದನ್ನು ಸಮರ್ಥಿಸಿಕೊಂಡ ಶ್ರೇಯಸ್ ಶತಕ (105; 171ಎಸೆತ, 13ಬೌಂಡರಿ 2ಸಿಕ್ಸರ್) ಬಾರಿಸಿದರು. ಅವರ ದಿಟ್ಟ ಆಟದಿಂದಾಗಿ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್‌ನ ಪ್ರಥಮ ಇನಿಂಗ್ಸ್‌ನಲ್ಲಿ 111.1 ಓವರ್‌ಗಳಲ್ಲಿ 345 ರನ್ ಗಳಿಸಿತು.

ಅದಕ್ಕುತ್ತರವಾಗಿ ಭರ್ಜರಿ ಆರಂಭ ಮಾಡಿರುವ ಪ್ರವಾಸಿ ಬಳಗವು ಶುಕ್ರವಾರ ದಿನದಾಟದ ಕೊನೆಗೆ 57 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 129 ರನ್ ಗಳಿಸಿತು. ಆರಂಭಿಕ ಬ್ಯಾಟರ್‌ಗಳಾದ ಟಾಮ್ ಲಥಾಮ್ (ಬ್ಯಾಟಿಂಗ್ 50) ಮತ್ತು ವಿಲ್ ಯಂಗ್ (ಬ್ಯಾಟಿಂಗ್ 75) ಕ್ರೀಸ್‌ನಲ್ಲಿದ್ದಾರೆ.

ಮೊದಲ ದಿನವಾದ ಗುರುವಾರ ತಂಡದ ಇನಿಂಗ್ಸ್‌ಗೆ ಬಲ ತುಂಬಿದ್ದ ಶ್ರೇಯಸ್ ಅಯ್ಯರ್ ಮತ್ತು ರವೀಂದ್ರ ಜಡೇಜ ಜೋಡಿಯು ಎರಡನೇ ದಿನವೂ ದೀರ್ಘ ಇನಿಂಗ್ಸ್ ಆಡುವ ನಿರೀಕ್ಷೆ ಈಡೇರಲಿಲ್ಲ. ಕೇವಲ 27 ಓವರ್‌ಗಳಲ್ಲಿ ಆರು ವಿಕೆಟ್‌ಗಳನ್ನು ಭಾರತ ತಂಡವು ಕಳೆದುಕೊಂಡಿತು. ಟಿಮ್ ಸೌಥಿ (69ಕ್ಕೆ5) ಮತ್ತು ಎಜಾಜ್ ಪಟೇಲ್ (90ಕ್ಕೆ2) ಅವರ ಬೌಲಿಂಗ್ ಪರಿಣಾಮಕಾರಿಯಾಗಿತ್ತು. ಭಾರತದ ಮೊತ್ತಕ್ಕೆ ಗಮನ ಸೆಳೆದಿದ್ದು ಶ್ರೇಯಸ್ ಆಟವೊಂದೇ.

ದಿನದ ಮೂರನೇ ಓವರ್‌ನಲ್ಲಿಯೇ ಟಿಮ್ ಸೌಥಿ ಎಸೆತವನ್ನು ತಪ್ಪಾಗಿ ಅಂದಾಜಿಸಿದ ರವೀಂದ್ರ ಜಡೇಜ ಕ್ಲೀನ್‌ಬೌಲ್ಡ್ ಆದರು. ನಿನ್ನೆಯ ತಮ್ಮ ಸ್ಕೋರ್‌ಗೆ ಒಂದೂ ರನ್ ಸೇರಿಸಲು ಅವರಿಗೆ ಸಾಧ್ಯವಾಗಲಿಲ್ಲ.

ವೃದ್ಧಿಮಾನ್ ಸಹಾ ಕೇವಲ ಒಂದು ರನ್ ಗಳಿಸಿ ನಿರ್ಗಮಿಸಲು ಟಿಮ್ ಸೌಥಿಯೇ ಕಾರಣರಾದರು. ಬಲಗೈ ಬ್ಯಾಟ್ಸ್‌ಮನ್ ಶ್ರೇಯಸ್ ತಾವೆದುರಿಸಿದ 157ನೇ ಎಸೆತದಲ್ಲಿ ಚೊಚ್ಚಲ ಶತಕದ ಗಡಿ ಮುಟ್ಟಿದರು.

ಅಯ್ಯರ್ ಜೊತೆಗೂಡಿದ ಅಶ್ವಿನ್ (38; 56ಎಸೆತ) ಮೊತ್ತ ಮುನ್ನೂರು ದಾಟಲು ಕಾರಣರಾದರು. ಅಯ್ಯರ್ ವಿಕೆಟ್ ಕೂಡ ಸೌಥಿ ಪಾಲಾಯಿತು.

ಅಕ್ಷರ್ ಪಟೇಲ್ ಕೂಡ ಸೌಥಿಗೆ ವಿಕೆಟ್ ಒಪ್ಪಿಸಿದರು. ಊಟದ ವಿರಾಮದ ಸ್ವಲ್ಪ ಹೊತ್ತಿನ ನಂತರ ಭಾರತದ ಇನಿಂಗ್ಸ್‌ಗೆ ಸ್ಪಿನ್ನರ್ ಎಜಾಜ್ ಪಟೇಲ್ ತೆರೆ ಎಳೆದರು.

ಯಂಗ್–ಟಾಮ್ ಜಿಗುಟುತನ: ಎರಡನೇ ದಿನವೇ ಸ್ಪಿನ್ನರ್‌ಗಳಿಗೆ ನೆರವು ನೀಡುತ್ತಿರುವ ಪಿಚ್‌ನಲ್ಲಿ ಕಿವೀಸ್ ಆರಂಭಿಕ ಜೋಡಿಯು ಅಪಾರ ತಾಳ್ಮೆ ಮತ್ತು ಕೌಶಲಪೂರ್ಣವಾಗಿ ಬ್ಯಾಟಿಂಗ್ ಮಾಡಿತು. ಮುರಿಯದ ಮೊದಲ ವಿಕೆಟ್ ಜೊತೆಯಾಟ ರಂಗೇರಿತು.

ಭಾರತದಲ್ಲಿ ಇದೇ ಮೊದಲ ಬಾರಿ ಟೆಸ್ಟ್ ಪಂದ್ಯ ಆಡುತ್ತಿರುವ ವಿಲ್ ಯಂಗ್ ಅನುಭವಿ ಸ್ಪಿನ್ನರ್ ಅಶ್ವಿನ್, ಜಡೇಜ ಮತ್ತು ಅಕ್ಷರ್ ಪಟೇಲ್ ಅವರನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಪೆಡಲ್ ಸ್ವೀಪ್, ಬ್ಯಾಕ್‌ಫುಟ್ ಶಾಟ್‌ಗಳನ್ನು ಕರಾರುವಾಕ್ ಆಗಿ ಪ್ರಯೋಗಿಸಿದರು.

ಇನ್ನೊಂದು ಕಡೆಯಲ್ಲಿದ್ದ ಟಾಮ್ ಕೂಡ ತಮ್ಮ ಅನುಭವವನ್ನು ಪಣಕ್ಕೊಡ್ಡಿ ಆಡಿದರು. ಇಬ್ಬರಿಗೂ ಅದೃಷ್ಟವೂ ಜೊತೆಗಿತ್ತು. ಟಾಮ್ ಲಥಾಮ್ ವಿರುದ್ಧ ಮೂರು ಬಾರಿ ನೀಡಲಾಗಿದ್ದ ಔಟ್ ತೀರ್ಪು, ಮರುಪರಿಶೀಲನೆಯಲ್ಲಿ ನಾಟ್‌ಔಟ್ ಎಂದು ಬಂದಿತ್ತು. ಇದರಿಂದಾಗಿ ಅವರಿಬ್ಬರೂ ಮೂರನೇ ದಿನ ಬೆಳಿಗ್ಗೆಯೂ ತಮ್ಮ ಆಟ ಮುಂದುವರಿಸುವರು.


ಕಿವೀಸ್ ತಂಡದ ಟಾಮ್ ಲಥಾಮ್ ಮತ್ತು ವಿಲ್ ಯಂಗ್ ಜೊತೆಯಾಟದ ಓಟ–ಪಿಟಿಐ ಚಿತ್ರ

ಪದಾರ್ಪಣೆ ಟೆಸ್ಟ್‌ನಲ್ಲಿ ಶತಕ ಹೊಡೆದವರು

ಆಟಗಾರ	ರನ್	ಎದುರಾಳಿ	ಸ್ಥಳ	ವರ್ಷ
ಲಾಲಾ ಅಮರನಾಥ್	118	ಇಂಗ್ಲೆಂಡ್	ಮುಂಬೈ	1933
ಆರ್.ಎಚ್. ಶೋಧನ್	110	ಪಾಕಿಸ್ತಾನ	ಕೋಲ್ಕತ್ತ	1952
ಕೃಪಾಲ್ ಸಿಂಗ್	100*	ನ್ಯೂಜಿಲೆಂಡ್	ಹೈದರಾಬಾದ್	1955
ಅಬ್ಬಾಸ್ ಬೇಗ್	112	ಇಂಗ್ಲೆಂಡ್	ಮ್ಯಾಂಚೆಸ್ಟರ್	1959
ಹನುಮಂತಸಿಂಗ್	105	ಇಂಗ್ಲೆಂಡ್	ನವದೆಹಲಿ	1964
ಜಿ.ಆರ್. ವಿಶ್ವನಾಥ್	137	ಆಸ್ಟ್ರೇಲಿಯಾ	ಕಾನ್ಪುರ	1969
ಸುರೀಂದರ್ ಅಮರನಾಥ್	124	ನ್ಯೂಜಿಲೆಂಡ್	ಆಕ್ಲೆಂಡ್	1976
ಮೊಹಮ್ಮದ್ ಅಜರುದ್ದೀನ್	110	ಇಂಗ್ಲೆಂಡ್	ಕೋಲ್ಕತ್ತ	1984
ಪ್ರವೀಣ ಆಮ್ರೆ	103	ದಕ್ಷಿಣ ಆಫ್ರಿಕಾ	ಡರ್ಬನ್	1992
ಸೌರವ್ ಗಂಗೂಲಿ	131	ಇಂಗ್ಲೆಂಡ್	ಲಾರ್ಡ್ಸ್	1996
ವೀರೇಂದ್ರ ಸೆಹ್ವಾಗ್	105	ದಕ್ಷಿಣ ಅಫ್ರಿಕಾ	ಬ್ಲೂಮ್‌ಫೌಂಟೇನ್	2001
ಸುರೇಶ್ ರೈನಾ	120	ಶ್ರೀಲಂಕಾ	ಕೊಲಂಬೊ	2010
ಶಿಖರ್ ಧವನ್	187	ಆಸ್ಟ್ರೇಲಿಯಾ	ಮೊಹಾಲಿ	2013
ರೋಹಿತ್ ಶರ್ಮಾ	177	ವೆಸ್ಟ್ ಇಂಡೀಸ್	ಕೋಲ್ಕತ್ತ	2013
ಪೃಥ್ವಿ ಶಾ	134	ವೆಸ್ಟ್ ಇಂಡೀಸ್	ರಾಜಕೋಟ್	2018
ಶ್ರೇಯಸ್ ಅಯ್ಯರ್	105	ನ್ಯೂಜಿಲೆಂಡ್	ಕಾನ್ಪುರ	2021

ಮಾಹಿತಿ: ಎಚ್.ಆರ್. ಗೋಪಾಲಕೃಷ್ಣ


ಶ್ರೇಯಸ್ ಅಯ್ಯರ್ ಚೊಚ್ಚಲ ಶತಕದ ಸಂಭ್ರಮ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 345 (111.1 ಓವರ್)
(ಗುರುವಾರ 84 ಓವರ್‌ಗಳಲ್ಲಿ 4ಕ್ಕೆ258)
ಶ್ರೇಯಸ್ ಸಿ ಯಂಗ್ ಬಿ ಸೌಥಿ 105 (171 ಎ, 4X13, 6X2), ಜಡೇಜ ಬಿ ಸೌಥಿ 50 (112ಎ, 4X6), ಸಹಾ ಸಿ ಬ್ಲಂಡೆಲ್ ಬಿ ಸೌಥಿ 1 (12ಎ), ಅಶ್ವಿನ್ ಬಿ ಪಟೇಲ್ 38 (56ಎ, 4X5), ಅಕ್ಷರ್ ಸಿ ಬ್ಲಂಡೆಲ್ ಬಿ ಸೌಥಿ 3 (9ಎ), ಉಮೇಶ್ ಔಟಾಗದೆ 10 (34ಎ, 6X1), ಇಶಾಂತ್ ಎಲ್‌ಬಿಡಬ್ಲ್ಯು ಪಟೇಲ್ 0 (5ಎ)
ಇತರೆ (ಬೈ 5, ಲೆಗ್‌ಬೈ 2, ನೋಬಾಲ್ 4, ವೈಡ್ 1) 12
ವಿಕೆಟ್ ಪತನ: 5-266 (ರವೀಂದ್ರ ಜಡೇಜ, 86.6), 6-288 (ವೃದ್ಧಿಮಾನ್ ಸಹಾ, 92.2), 7-305 (ಶ್ರೇಯಸ್ ಅಯ್ಯರ್, 96.1), 8-313 (ಅಕ್ಷರ್ ಪಟೇಲ್, 98.6), 9-339 (ರವಿಚಂದ್ರನ್ ಅಶ್ವಿನ್, 109.2), 10-345 (ಇಶಾಂತ್ ಶರ್ಮಾ, 111.1)
ಬೌಲಿಂಗ್: ಟಿಮ್ ಸೌಥಿ 27.4–6–69–5, ಕೈಲ್ ಜೆಮಿಸನ್ 23.2–6–91–3, ಅಜಾಜ್ ಪಟೇಲ್ 29.1–7–90–2, ವಿಲಿಯಮ್ ಸೋಮರ್‌ವಿಲ್ 24–2–60–0, ರಚಿನ್ ರವೀಂದ್ರ 7–1–28–0

ನ್ಯೂಜಿಲೆಂಡ್ ಮೊದಲ ಇನಿಂಗ್ಸ್ ವಿಕೆಟ್ ನಷ್ಟವಿಲ್ಲದೆ 129 (57 ಓವರ್)
ಲಥಾಮ್ ಬ್ಯಾಟಿಂಗ್ 50 (165ಎ, 4X4), ವಿಲ್ ಬ್ಯಾಟಿಂಗ್ 75 (180ಎ, 4X12)
ಇತರೆ (ಲೆಗ್‌ಬೈ 1, ನೋಬಾಲ್ 3) 4
ಬೌಲಿಂಗ್: ಇಶಾಂತ್ ಶರ್ಮಾ 6–3–10–0, ಉಮೇಶ್ ಯಾದವ್ 10–3–26–0. ರವಿಚಂದ್ರನ್ ಅಶ್ವಿನ್ 17–5–38–0, ರವೀಂದ್ರ ಜಡೇಜ 14–4–28–0, ಅಕ್ಷರ್ ಪಟೇಲ್ 10–1–26–0.

ಗುರುವನ್ನು ಊಟಕ್ಕೆ ಆಹ್ವಾನಿಸುವ ತವಕ


ಪ್ರವೀಣ ಆಮ್ರೆ

'ಈಗ ನಾನು ಪ್ರವೀಣ (ಆಮ್ರೆ) ಸರ್ ಅವರನ್ನು ಮನೆಗೆ ಊಟಕ್ಕೆ ಕರೆಯಬಹುದು. ಅವರೊಡ್ಡಿದ್ದ ಷರತ್ತು ಪೂರೈಸಿದ್ದೇನೆ' ಎಂದು ಶ್ರೇಯಸ್ ಅಯ್ಯರ್ ಹೇಳಿದರು.

ಶುಕ್ರವಾರ ನ್ಯೂಜಿಲೆಂಡ್ ಎದುರು ಶತಕ ಪೂರೈಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ವಿಷಯ ಬಿಚ್ಚಿಟ್ಟರು.ಕೆಲವು ವರ್ಷಗಳ ಹಿಂದೆ ತಮ್ಮ ಕೋಚ್ ಆಮ್ರೆ ಅವರನ್ನು ಶ್ರೇಯಸ್ ತಮ್ಮ ಮನೆಗೆ ಊಟಕ್ಕೆ ಕರೆದಿದ್ದರಂತೆ. ಆಗ ಆಮ್ರೆ, 'ಮುಂದೊಂದು ದಿನ ನೀನು ಟೆಸ್ಟ್‌ನಲ್ಲಿ ಶತಕ ಹೊಡೆದರೆ ಮಾತ್ರ ಊಟಕ್ಕೆ ಬರುತ್ತೇನೆ' ಎಂದು ಹೇಳಿದ್ದರಂತೆ.

'ಇವತ್ತಿನ ಶತಕದ ನಂತರ ನನಗೆ ಬಹಳ ಸಂತಸವಾಗಿದೆ. ಅದಕ್ಕೆ ಮುಖ್ಯ ಕಾರಣವೆಂದರೆ ನನ್ನ ಗುರುಗಳನ್ನು ಮನೆಗೆ ಊಟಕ್ಕೆ ಕರೆದುಕೊಂಡು ಹೋಗಬಹುದು' ಎಂದು ಮುಂಬೈನ ಶ್ರೇಯಸ್ ಹೇಳಿದರು.

ವಿಜಯ್ ಹಜಾರೆ ಟ್ರೋಫಿ: ಕರ್ನಾಟಕಕ್ಕೆ ಮನೀಷ್ ಸಾರಥ್ಯ


ಮನೀಷ್ ಪಾಂಡೆ

ಬೆಂಗಳೂರು: ಮುಂದಿನ ತಿಂಗಳು ಆರಂಭವಾಗಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮನೀಷ್ ಪಾಂಡೆ ಮುನ್ನಡೆಸಲಿದ್ದಾರೆ.

ಕರ್ನಾಟಕ ತಂಡವು ಬಿ ಗುಂಪಿನಲ್ಲಿ ಆಡಲಿದೆ. ಇದರಲ್ಲಿ ತಮಿಳುನಾಡು, ಪುದುಚೇರಿ, ಮುಂಬೈ, ಬರೋಡಾ ಮತ್ತು ಬಂಗಾಳ ತಂಡಗಳ ಸವಾಲನ್ನು ಎದುರಿಸಲಿದೆ. ಸೈಯದ್ ಮುಷ್ತಾಕ್ ಅಲಿ ಟೂರ್ನಿಯಲ್ಲಿ ಪಾಂಡೆ ಬಳಗವು ರನ್ನರ್ಸ್ ಅಪ್ ಆಗಿತ್ತು. ಬಿ ಗುಂಪಿನ ಪಂದ್ಯಗಳು ತಿರುವನಂತಪುರದಲ್ಲಿ ನಡೆಯಲಿವೆ. ಕರ್ನಾಟಕವು ಡಿ. 8ರಂದು ಪುದುಚೇರಿ ವಿರುದ್ಧ ತನ್ನ ಅಭಿಯಾನ ಆರಂಭಿಸಲಿದೆ.

ತಂಡ ಇಂತಿದೆ: ಮನೀಷ್ ಪಾಂಡೆ (ನಾಯಕ), ರೋಹನ್ ಕದಂ, ಆರ್. ಸಮರ್ಥ್ (ಉಪನಾಯಕ), ಕರುಣ್ ನಾಯರ್, ಕೆ.ವಿ. ಸಿದ್ಧಾರ್ಥ್, ಅಭಿನವ್ ಮನೋಹರ್, ಡಿ. ನಿಶ್ಚಲ್, ಬಿ.ಆರ್. ಶರತ್ (ವಿಕೆಟ್‌ಕೀಪರ್), ಶರತ್ ಶ್ರೀನಿವಾಸ್, ಜೆ. ಸುಚಿತ್, ಶ್ರೇಯಸ್ ಗೋಪಾಲ್, ಕೆ.ಸಿ. ಕಾರ್ಯಪ್ಪ, ರಿತೇಶ್ ಭಟ್ಕಳ್, ಪವನ್ ದುಬೆ, ವಿದ್ಯಾಧರ ಪಾಟೀಲ, ವಿ. ಕೌಶಿಕ್, ಪ್ರತೀಕ್ ಜೈನ್, ಎಂ. ಬಿ. ದರ್ಶನ್, ವಿಜಯಕುಮಾರ್ ವೈಶಾಖ, ಎಂ. ವೆಂಕಟೇಶ್.

ಹಾಕಿ: ಪೋಲೆಂಡ್ ಎದುರು ಭಾರತಕ್ಕೆ ಜಯ ಅನಿವಾರ್ಯ

ಭುವನೇಶ್ವರ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಜಯ ಅನಿವಾರ್ಯವಾಗಿರುವ ಪಂದ್ಯದಲ್ಲಿ ಪೋಲೆಂಡ್ ತಂಡವನ್ನು ಎದುರಿಸಲಿದೆ. ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ 'ಬಿ' ಗುಂಪಿನ ಈ ಪಂದ್ಯವು ಶನಿವಾರ ನಡೆಯಲಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಫ್ರಾನ್ಸ್ ವಿರುದ್ಧ 4–5ರಿಂದ ಮಣಿದಿದ್ದ ಭಾರತ, ಬಳಿಕ ಕೆನಡಾ ತಂಡವನ್ನು 13–1 ಅಂತರದಿಂದ ಮಣಿಸಿತ್ತು. ಆದರೆ ಕ್ವಾರ್ಟರ್‌ಫೈನಲ್ ಹಂತಕ್ಕೇರಲು ವಿವೇಕ್ ಪ್ರಸಾದ್ ಸಾಗರ್ ನಾಯಕತ್ವದ ತಂಡಕ್ಕೆ ಈ ಪಂದ್ಯದಲ್ಲಿ ಗೆಲುವು ಅಗತ್ಯವಾಗಿದೆ. ಒಂದು ಜಯ ಹಾಗೂ ಸೋಲಿನೊಂದಿಗೆ ಭಾರತ ತಂಡವು 'ಬಿ' ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ. ಗೋಲುಗಳ ಅಂತರದ ಆಧಾರದಲ್ಲಿ ಪೋಲೆಂಡ್ ಮೊದಲ ಸ್ಥಾನದಲ್ಲಿದೆ.

ಭಾರತವು ಒಂದು ವೇಳೆ ಕ್ವಾರ್ಟರ್‌ಫೈನಲ್ ತಲುಪಿದರೆ, ಅಗ್ರಶ್ರೇಯಾಂಕದ ಬ್ರೆಜಿಲ್ ತಂಡವನ್ನು ಎದುರಿಸಲಿದೆ.

'ಫ್ರಾನ್ಸ್ ಎದುರಿನ ಸೋಲು ಮುಗಿದುಹೋದ ಕಥೆ. ಪ್ರಶಸ್ತಿ ಗೆಲುವಿನ ಆಸೆ ಈಡೇರಬೇಕಾದರೆ ಮುಂದಿನ ಎಲ್ಲ ಪಂದ್ಯಗಳನ್ನು ನಾವು ಗೆಲ್ಲಲೇಬೇಕು. ಅದಕ್ಕಿಂತ ಮೊದಲು ಪೋಲೆಂಡ್ ಎದುರಿನ ಪಂದ್ಯವನ್ನು ಜಯಿಸುವತ್ತ ಗಮನಹರಿಸಬೇಕಾಗಿದೆ' ಎಂದು ಭಾರತ ತಂಡದ ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದ್ದಾರೆ.

ಆಡಿದ ಎರಡೂ ಪಂದ್ಯಗಳಲ್ಲಿ ಭಾರತ ಗೋಲುಗಳಿಕೆಯ ಹಲವು ಅವಕಾಶಗಳನ್ನು ಸೃಷ್ಟಿಸಿಕೊಂಡಿತ್ತು. ಆದರೆ ಬಹುತೇಕ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವಲ್ಲಿ ವಿಫಲವಾಗಿತ್ತು.

ಶನಿವಾರ ನಡೆಯುವ 'ಬಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಫ್ರಾನ್ಸ್ – ಕೆನಡಾ ಮುಖಾಮುಖಿಯಾಗಲಿವೆ. 'ಡಿ' ಗುಂಪಿನಲ್ಲಿ ಪಾಕಿಸ್ತಾನ–ಈಜಿಪ್ಟ್, 'ಎ' ಗುಂಪಿನಲ್ಲಿ ದಕ್ಷಿಣ ಆಫ್ರಿಕಾ– ಮಲೇಷ್ಯಾ, ಬೆಲ್ಜಿಯಂ–ಚಿಲಿ ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: watch.hockey ವೆಬ್‌ಸೈಟ್

ಟೆನಿಸ್: ಆಕರ್ಷ್, ಶ್ರೀನಿಧಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿ. ಆಕರ್ಷ್ ಹಾಗೂ ಶ್ರೀನಿಧಿ ಬಾಲಾಜಿ ಅವರು ಎಐಟಿಎ ಸಿಎಸ್7 18 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಶುಕ್ರವಾರ ನಡೆದ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ಆಕರ್ಷ್ 4-6, 6-4, 6-2ರಿಂದ ಸುಚಿರ್ ಚೇತನ್ ಅವರನ್ನು ಸೋಲಿಸಿದರು. ಮೊದಲ ಸೆಟ್‌ನಲ್ಲಿ ಸೋತ ಆಕರ್ಷ್ ನಂತರದ ಎರಡು ಸೆಟ್‌ಗಳಲ್ಲಿ ಪಾರಮ್ಯ ಮೆರೆದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಶ್ರೀನಿಧಿ 7-5, 6-1ರಿಂದ ಆರ್.ಯಾಜಿನಿ ಅವರನ್ನು ಸೋಲಿಸಿದರು.

ಇದಕ್ಕೂ ಮೊದಲು ನಡೆದ ಬಾಲಕರ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಸುಚಿರ್ ಚೇತನ್ 6-3, 7-6 (8-6)ರಿಂದ ಅದಿತ್ ಅಮರನಾಥ್ ಎದುರು ಗೆದ್ದಿದ್ದರು.

ಆಕರ್ಷ್ ಅವರು 6-3, 6-1ರಿಂದ ಮನದೀಪ್ ರೆಡ್ಡಿ ಅವರನ್ನು ಪರಾಭವಗೊಳಿಸಿದ್ದರು.

ಬಾಲಕಿಯರ ವಿಭಾಗದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಶ್ರೀನಿಧಿ ಬಾಲಾಜಿ ಅವರು 6-3, 6-4ರಿಂದ ಪಿ.ಹೃದಯೇಶಿ ಅವರನ್ನು ಮಣಿಸಿದ್ದರು. ಆರ್. ಯಜಿನಿ ಅವರು 6-1, 6-0ರಿಂದ ಗಗನಾ ಮೋಹನ್‌ಕುಮಾರ್ ಅವರನ್ನು ಸೋಲಿಸಿದ್ದರು.


ಪ್ರಶಸ್ತಿಯೊಂದಿಗೆ ಸಂಭ್ರಮಿಸಿದ ಜಿ. ಆಕರ್ಷ್ ಮತ್ತು ಶ್ರೀನಿಧಿ ಬಾಲಾಜಿ


ಐಎಸ್‌ಎಲ್: ನೆರೆಲಿಯಸ್ ಮಿಂಚು; ಜೆಎಫ್‌ಸಿಗೆ ಜಯ

ಬ್ಯಾಂಬೊಲಿಮ್, ಗೋವಾ: ನೆರೆಲಿಯಸ್ ವಲಸ್ಕಿಸ್ ಹೊಡೆದ ಎರಡು ಗೋಲುಗಳ ಬಲದಿಂದ ಜೆಮ್ಶೆಡ್‌ಪುರ ಫುಟ್‌ಬಾಲ್ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಗೋವಾ ಎಫ್‌ಸಿ ವಿರುದ್ಧ ಜಯಭೇರಿ ಬಾರಿಸಿತು.

ಶುಕ್ರವಾರ ನಡೆದ ಪಂದ್ಯದ ಬಹುತೇಕ ಸಮಯದಲ್ಲಿ ಉಭಯ ತಂಡಗಳು ನಡುವೆ ತುರುಸಿನ ಪೈಪೋಟಿ ಕಂಡುಬಂದಿತು. 51ನೇ ನಿಮಿಷದಲ್ಲಿ ಜೆಎಫ್‌ಸಿ ತಂಡದ ನೆರೆಲಿಯಸ್ ಎದುರಾಳಿ ಬಳಗದ ರಕ್ಷಣಾ ಗೋಡೆಯನ್ನು ದಾಟುವಲ್ಲಿ ಸಫರಾದರು. ಮೊದಲ ಗೋಲು ಹೊಡೆದು ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಹತ್ತು ನಿಮಿಷಗಳ ನಂತರ ಮತ್ತೊಮ್ಮೆ ಕಾಲ್ಚಳಕ ತೋರಿದ ನೆರೆಲಿಯಸ್ ತಂಡದ ಗೆಲುವಿಗೆ ಮುನ್ನುಡಿ ಬರೆದರು.

ಇನ್ನೊಂದೆಡೆ ಜೆಎಫ್‌ಸಿಯ ರಕ್ಷಣಾ ಆಟಗಾರರು ಗೋವಾದ ಫಾರ್ವರ್ಡ್ ಆಟಗಾರರಿಗೆ ಕಠಿಣ ಸವಾಲೊಡ್ಡಿದರು. ಇದರಿಂದಾಗಿ ಗೊವಾ ತಂಡದ ಗೋಲು ಗಳಿಸುವ ಪ್ರಯತ್ನಗಳಿಗೆ ಫಲ ದೊರಕಲಿಲ್ಲ. ಇದರಿಂದಾಗಿ ಒತ್ತಡದಲ್ಲಿದ್ದ ಗೋವಾ ತಂಡಕ್ಕೆ ಜೆಎಫ್‌ಸಿಯು ಮತ್ತೊಂದು ಪೆಟ್ಟುಕೊಟ್ಟಿತು. 80ನೇ ನಿಮಿಷದಲ್ಲಿ ಜೋರ್ಡಾನ್ ಮರೆ ಹೊಡೆದ ಗೋಲಿನಿಂದ ತಂಡವು 3–0 ಮುನ್ನಡೆ ಸಾಧಿಸಿಬಿಟ್ಟಿತು.

ಆರು ನಿಮಿಷಗಳ ನಂತರ ಗೋವಾಕ್ಕೆ ಒಂದು ಗೋಲು ಗಳಿಸಕೊಡುವಲ್ಲಿ ಐರೆಮ್ ಕೆಬೆರೆರಾ (86ನೇ ನಿ) ಯಶಸ್ವಿಯಾದರು. ಇದರಿಂದಾಗಿ ತಂಡದ ಸೋಲಿನ ಅಂತರ ಕಡಿಮೆ ಆಯಿತು.


ಎಫ್‌ಸಿ ಗೋವಾ ಮತ್ತು ಜೆಮ್ಶೆಡ್‌ಪುರ ಎಫ್‌ಸಿ ತಂಡಗಳ ನಡುವಣ ಪಂದ್ಯ –ಪಿಟಿಐ ಚಿತ್ರ